ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಇನ್ನೂ ಏನು ಬೇಕು ಕೃಷ್ಣ ಅವರೇ?


ಸಂಪುಟ 11 | ಸಂಚಿಕೆ 07 | ಪುಟ 16 | ಫೆಬ್ರವರಿ 6-12, 2017 | ರೂ. 10/-


web: www.janashakthi.co.in | e-mail : js_weekly@yahoo.com

ಅಸಾಧಾರಣ ಸನ್ನಿವೇಶಕ್ಕೆ ಸ್ಪಂದಿಸದ ಸಾಧಾರಣ ಬಜೆಟ್



ಮೂರು ಹಳ್ಳಿಗಳ ಸಮೀಕ್ಷೆ – ಪರಿಚಯ





ಸಿಐಟಿಯು ಅಹೋರಾತ್ರಿ ಧರಣಿಗೆ ಜಯ



ಮಕ್ಕಳ ಶೈಕ್ಷಣಿಕ ಹಬ್ಬ



ಟ್ರಂಪ್ ದೋಸ್ತಿ ಬಿಡಿ – ಕಾರಟ್



BEML-VISL ಉಳಿಸಿ ಭಾರತ ಉಳಿಸಿ

ಬಜೆಟ್ 2017-18: ನೋಟುರದ್ಧತಿ ಹೇರಿರುವ ಹೊರೆಗಳನ್ನು ಕಡೆಗಣಿಸಿದೆಯಷ್ಟೇ ಅಲ್ಲ, ಮತ್ತಷ್ಟು ಹೊರೆಗಳನ್ನು ಹೇರಿದೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕೆ

ಭಾರತದ ಸಾಮಾನ್ಯ ಜನಗಳು ನೋಟುರದ್ಧತಿಯ ವಿನಾಶಕಾರಿ ದುಷ್ಪರಿಣಾಮಗಳ ಅಡಿಯಲ್ಲಿ ನರಳುತ್ತಿರುವಾಗ ಹಣಕಾಸು ಮಂತ್ರಿಗಳು ದುಡಿಯುವ ಜನತೆಯ ಸಂಕಟಗಳನ್ನು ವಿಪರೀತವಾಗಿ ಹೆಚ್ಚಿಸುವ ಬಜೆಟನ್ನು ಹಣಕಾಸು ಮಂತ್ರಿಗಳು ಮುಂದಿಟ್ಟಿದ್ದಾರೆ, ಇದೊಂದು ಸಂಕೋಚನಕಾರಿ ಬಜೆಟ್ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಅಂದರೆ ದೇಶದ ಆರ್ಥಿಕವನ್ನು ವಿಸ್ತರಿಸುವ ಬದಲು ಸಂಕುಚಿತಗೊಳಿಸುತ್ತದೆ, ಉದ್ಯೋಗಗಳು ನಿರ್ಮಾಣಗೊಳ್ಳುವ ಮೊದಲು ಕುಂಠಿತಗೊಳ್ಳುತ್ತವೆ.

ಜನವರಿ 31ರಂದು ಮಂಡಿಸಿದ ಆರ್ಥಿಕ ಸರ್ವೇಕ್ಷಣೆ ಆರ್ಥಿಕ ಬೆಳವಣಿಗೆಯ ವೇಗ ಇಳಿಯುತ್ತಿದೆ, ಸರಕು ಮತ್ತು ಸೇವೆಗಳ ಬೇಡಿಕೆಯಲ್ಲಿ ತೀಕ್ಷ್ಣವಾದ ಇಳಿಕೆಯಾಗಿದೆ, ಬೃಹತ್ ಪ್ರಮಾಣದಲ್ಲಿ ಉದ್ಯೋಗನಷ್ಟವಾಗುತ್ತಿದೆ, ಕೃಷಿ ಆದಾಯಗಳು ಇಳಿಮುಖಗೊಂಡಿವೆ ಮತ್ತು ನಗದು ಹೆಚ್ಚಾಗಿ ಬೇಕಾಗುವ ವಲಯಗಳಲ್ಲಿ ಸಾಮಾಜಿಕ ಭಂಗ ಬಂದಿದೆ. ನೋಟುರದ್ಧತಿಯಿಂದಾಗಿ ಕೈಗಾರಿಕಾ ಸಾಮರ್ಥ್ಯದ ಬಹುಪಾಲನ್ನು ಬಳಸಲಾಗದಂತಹ ಸನ್ನಿವೇಶ ಉಂಟಾಗಿದೆ. ವಾಹನ, ಸಿಮೆಂಟ್, ಉಕ್ಕು, ಕಾಗದ, ಅಲ್ಯುಮಿನಿಯಂ ಮತ್ತು ರಸಗೊಬ್ಬರ ಮುಂತಾದ ಪ್ರಮುಖ ಉದ್ದಿಮೆಗಳ ಮೇಲೇ ಭಾರೀ ಹೊಡೆತ ಬಿದ್ದಿದೆ, ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಉಂಟಾಗಿದೆ. ಇಂತಹ ಒಂದು ಸನ್ನಿವೇಶದಲ್ಲಿ 4 ಕೋಟಿ ಟನ್ ಸಾರ್ವಜನಿಕ ಆಹಾರ ದಾಸ್ತಾನು ಇದ್ದರೂ, ಚಾಲ್ತಿ ಖಾತೆ ಕೊರತೆಯು ಮತ್ತು ವಿದೇಶಿ ವಿನಿಮಯದ ಪರಿಸ್ಥಿತಿ ಸಮಾಧಾನಕರವಾಗಿದ್ದರೂ ಸರಕಾರ ಸಂಕೋಚನಕಾರಿ ಹಣಕಾಸು ಧೋರಣೆಗಳನ್ನು ಅನುಸರಿಸುತ್ತಿರುವುದು ಒಂದು ವಿಡಂಬನೆ ಎಂದು ಸಿಪಿಐ(ಎಂ) ಖೇದ ವ್ಯಕ್ತ ಪಡಿಸಿದೆ.

ಬಜೆಟ್‌ನ ಒಟ್ಟು ಪ್ರಮಾಣ ಕಳೆದ ವರ್ಷ ಪರಿಷ್ಕೃತ ಅಂದಾಜಿನ ಪ್ರಕಾರ ಜಿಡಿಪಿಯ 13.4 ಶೇ. ಇತ್ತು. ಈ ವರ್ಷ ಅದು 12.7ಶೇ.ಕ್ಕೆ ಇಳಿದಿದೆ. ಹಣಕಾಸು ಕೊರತೆಯ ಬಜೆಟ್ ಗುರಿಯನ್ನು ಸಾಧಿಸಲಿಕ್ಕಾಗಿ ಖರ್ಚುಗಳನ್ನು ಕಡಿಮೆ ಮಾಡಲಾಗಿದೆ. 2016-17ರ ಪರಿಷ್ಕೃತ ಅಂದಾಜಿನಲ್ಲಿ ಒಟ್ಟು ರೆವಿನ್ಯೂ ಆದಾಯ ಜಿಡಿಪಿಯ 9.4ಶೇ. ಇದ್ದರೆ, 2017-18ರ ಬಜೆಟ್ ಅಂದಾಜಿನಲ್ಲಿ ಅದನ್ನು 9ಶೇ.ಕ್ಕೆ ಇಳಿಸಲಾಗಿದೆ. ಬಜೆಟಿನ ಕ್ರಮಗಳಿಂದಾಗಿ ಬಿಟ್ಟುಕೊಟ್ಟ ತೆರಿಗೆಗಳ ಪ್ರಮಾಣ 30 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಿದೆ, ಅದೀಗ ಜಿಡಿಪಿಯ 2.1ಶೇ. ಆಗಿದೆ ಎಂದು ಬಜೆಟಿಗೆ ಜನ-ವಿರೋಧಿ ಸ್ವರೂಪ ನೀಡಿರುವ ಅಂಶಗಳನ್ನು ಪರಿಶೀಲಿಸುತ್ತ ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಈ ಬಜೆಟ್ ಮೂಲಕ ದುಡಿಯುವ ಜನಗಳ ಮೇಲಿನ ಹೊರೆಯನ್ನು ಮತ್ತಷ್ಟು ಹೆಚ್ಚಿಸಲಾಗಿದೆ. ಏಕೆಂದರೆ ಬಜೆಟಿನಲ್ಲಿ ಸಣ್ಣ ಪ್ರಮಾಣದ ಆದಾಯ ತೆರಿಗೆದಾರರಿಗೆ ನೀಡಿರುವ 20ಸಾವಿರ ಕೋಟಿ ರೂ. ಪರಿಹಾರಕ್ಕಿಂತ ಎಷ್ಟೋ ಹೆಚ್ಚು ಅಂದರೆ 75 ಸಾವಿರ ಕೋಟಿ ರೂ.ಗಳ ಹೆಚ್ಚಿನ ಆದಾಯವನ್ನು ಜನಗಳ ಮೇಲೆ ಹಾಕಿರುವ ಪರೋಕ್ಷ ತೆರಿಗೆಗಳಿಂದ ಸರಕಾರ ಈ ಬಜೆಟ್ ಮೂಲಕ ನಿರೀಕ್ಷಿಸುತ್ತಿದೆ. ಮತ್ತೊಮ್ಮೆ ಈ ವರ್ಷವೂ ಹೆಚ್ಚಿನ ಆದಾಯ ಸಂಗ್ರಹಕ್ಕೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಹೆಚ್ಚಿನ ಅಬಕಾರಿ ಸುಂಕವನ್ನೇ ಅವಲಂಬಿಸಿದೆ.

ನೇರ ತೆರಿಗೆಗಳ ಸಂಗ್ರಹದಲ್ಲಿ 1.3 ಲಕ್ಷ ಕೋಟಿ ರೂ. ಹೆಚ್ಚಳವಾಗುತ್ತದೆ ಎಂದು ಸರಕಾರ ನೆಚ್ಚಿಕೊಂಡಿದೆ. ಆದರೆ ಇದು ವಾಸ್ತವದಲ್ಲಿ ಈಡೇರಲಿಕ್ಕಿಲ್ಲ. ಏಕೆಂದರೆ ಉನ್ನತ ಮಟ್ಟದ ಆರ್ಥಿಕ ಬೆಳವಣಿಗೆ ಆಗುತ್ತದೆ ಎಂಬ ಸರಕಾರದ ನಿರೀಕ್ಷೆ ಜಿಎಸ್‌ಟಿಯಿಂದ ತೆರಿಗೆ ಸಂಗ್ರಹದ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಅನಿಶ್ಚಿತತೆ ಇದೆ ಎಂಬುದನ್ನು ಉಪೇಕ್ಷಿಸಿದೆ ಮತ್ತು ನೋಟು ರದ್ಧತಿ ಹೆಚ್ಚಿನ ಮಟ್ಟದಲ್ಲಿ ತೆರಿಗೆ ಪಾವತಿಗೆ ಮ್ಯಾಜಿಕ್ ಗುಳಿಗೆಯಂತೆ ಕೆಲಸ ಮಾಡುತ್ತದೆ ಎಂದು ಭಾವಿಸಿದೆ. ಆದ್ದರಿಂದ ಈ ನಿರೀಕ್ಷೆ ಅವಾಸ್ತವ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈ ಬಜೆಟ್‌ನಲ್ಲಿ ಮೂಲರಚನೆಯ ನಿರೂಪಣೆಯಲ್ಲಿ 'ಕೈಗೆಟಕುವ ವಸತಿ'ಯನ್ನು ಹಣಕಾಸು ಮಂತ್ರಿಗಳು ಸೇರಿಸಿದ್ದಾರೆ. ಇದೊಂದು ಒಳ್ಳೆಯ ಅಂಶ ಎಂದು ಹೇಳಲಾಗುತ್ತಿದೆ. ಅದರೆ ಹಣಕಾಸು ಮಂತ್ರಿಗಳು ಆರ್ಥಿಕ ಹಿಂಜರಿತದ ಪರಿಸ್ಥಿತಿಯನ್ನು ನಿಭಾಯಿಸಲು ಒಂದು ವಸತಿ ಗುಳ್ಳೆ(ಹೌಸಿಂಗ್ ಬಬ್ಲ್)ಯನ್ನು ಈ ಮೂಲಕ ಸೃಷ್ಟಿಸುತ್ತಿರುವಂತೆ ಕಾಣುತ್ತಿದೆ ಎಂದೂ ಸಿಪಿಐ(ಎಂ) ಹೇಳಿದೆ. ಈ ರೀತಿ ಮೂಲರಚನೆಯಲ್ಲಿ ಇದನ್ನು ಸೇರಿಸುವ ಮೂಲಕ ಬಿಲ್ಡರುಗಳಿಗೆ ಅಗ್ಗದಲ್ಲಿ ಭೂಮಿ ಮತ್ತು ಸಾಲ ಒದಗಿಸಲು ಭೂಸ್ವಾಧೀನದ ಕಠಿಣ ಅಂಶಗಳಿಂದ ವಿನಾಯ್ತಿ, ಸಬ್ಸಿಡಿ ಬಡ್ಡಿದರಗಳಲ್ಲಿ ಆದ್ಯತೆ ವಲಯದ ಸಾಲಗಳನ್ನು ಒದಗಿಸ ಲಾಗುವುದಂತೆ, ಅಲ್ಲದೆ ದೊಡ್ಡ ಮನೆಗಳನ್ನು ಕಟ್ಟುವುದನ್ನೂ 'ಕೈಗೆಟಕುವ ವಸತಿ'ಯಲ್ಲಿ ಸೇರಿಸಲಾಗುವುದಂತೆ. ಇವೆಲ್ಲ ಒಂದು 'ವಸತಿ ಗುಳ್ಳೆ' ಸೃಷ್ಟಿಸುವ ದಿಕ್ಕಿನಲ್ಲಿ ಇರುವ ಕ್ರಮಗಳು ಎಂದು ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಬಂಡವಾಳ ಗಳಿಕೆ(ಕ್ಯಾಪಿಟಲ್ ಗೇನ್)ಯ ಮೇಲಿನ ತೆರಿಗೆಯಲ್ಲಿ ಮೂಲವರ್ಷವನ್ನು 2001ಕ್ಕೆ ತಂದು ಹೊಣೆಯನ್ನು ತಗ್ಗಿಸಿರುವುದು ರಿಯಲ್ ಎಸ್ಟೇಟ್ ಜೂಜುಕೋರರಿಗೆ ಮತ್ತು ಬಿಲ್ಡರುಗಳಿಗೆ ಲಾಭದ ಸುರಿಮಳೆಯಾಗಲಿದೆ.

50 ಕೋಟಿ ರೂ. ವರೆಗೆ ವಾರ್ಷಿಕ ವಹಿವಾಟು ಇರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಆದಾಯ ತೆರಿಗೆಯನ್ನು ಇಳಿಸುವ ಪ್ರಸ್ತಾವ ಕಾರ್ಪೊರೇಟ್ ವಲಯಕ್ಕೆ ಕಾರ್ಪೊರೇಟ್ ತೆರಿಗೆಯಿಂದ ತಪ್ಪಿಸಿಕೊಳ್ಳುವ ಹೊಸದೊಂದು ದಾರಿಯನ್ನು ತೆರೆದು ಕೊಟ್ಟಿದೆ. ಏಕೆಂದರೆ **ಅವುಗಳಲ್ಲಿ ಬಹಳಷ್ಟು ಉದ್ದಿಮೆಗಳು ದೊಡ್ಡ ಕಾರ್ಪೊರೇಟ್‌ಗಳೊಂದಿಗೆ ಸಂಬಂಧ ಇರುವಂತವು ಎಂಬುದನ್ನು ಸರಕಾರ ಉಪೇಕ್ಷಿಸಿದೆ.**

ನೋಟುರದ್ಧತಿ ಬ್ಯಾಂಕುಗಳಿಗೆ ಹೆಚ್ಚು ಸಾಲ ನೀಡಲು ಹಣ ಒದಗಿಸಿದೆ ಎಂದು ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಮತ್ತೆ-ಮತ್ತೆ ಹೇಳಿದ್ದಾರೆ. ಆದರೆ ದುಡಿಯುವ ಜನರಿಂದ ಬಲವಂತವಾಗಿ ಮಾಡಿಸಿರುವ ಉಳಿತಾಯದ ಅಲ್ಪಾವಧಿ ಠೇವಣಿಗಳನ್ನು ಬ್ಯಾಂಕುಗಳು ಸಾಲ ನೀಡಲು ಉಪಯೋಗಿಸಲಾರವು, ಏಕೆಂದರೆ ನಗದು ಹಣವ'ನ್ನು ಪಡೆಯುವುದರ ಮೇಲೆ ಹಾಕಿರುವ ಮಿತಿಗಳನ್ನು ತೆಗೆದ ಕೂಡಲೇ ಬಡ ಠೇವಣಿದಾರರು ತಮ್ಮ ಠೇವಣಿಗಳ ಬಹುಭಾಗವನ್ನು ತಮ್ಮ ಬಳಕೆಗಾಗಿ ತೆಗೆಯುತ್ತಾರೆ ಎಂಬ ಸರಳ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ

ಈ ಬಜೆಟಿನ ಒಟ್ಟು ಮೊತ್ತದ 1.48ಶೇ.ವನ್ನು ಮಾತ್ರವೇ ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕೆ ಮತ್ತು 2.44ಶೇ.ವನ್ನು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಕೊಡಲಾಗಿದೆ. ಇದು ದೇಶದ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಬುಡಕಟ್ಟುಗಳು ಮತ್ತು ಪರಿಶಿಷ್ಟ ಜಾತಿಗಳ ಜನಸಂಖ್ಯೆಯ ಪ್ರಮಾಣಕ್ಕಿಂತ ಬಹಳ ಕಡಿಮೆ ಮಟ್ಟದಲ್ಲಿದೆ. ಅದೇ ರೀತಿ ಲಿಂಗ ಬಜೆಟ್ ಎಂದು ವರ್ಗೀಕರಿಸಿದ ಬಾಬ್ತಿಗೆ ನೀಡಿರುವ ಹಣ ಒಟ್ಟು ಬಜೆಟ್ ಹಣದ 5.3ಶೇ. ಮಾತ್ರ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಸರಕಾರದ ಅತಿ ದೊಡ್ಡ ಬಡತನ ನಿವಾರಣೆಯ ಕಾರ್ಯಕ್ರಮ. ಇದಕ್ಕೆ ಇದುವರೆಗಿನ ಅ'ತಿ ಹೆಚ್ಚು ಹಣವನ್ನು ಕೊಟ್ಟಿದ್ದೇವೆ ಎಂದು ಹಣಕಾಸು ಮಂತ್ರಿಗಳು ದೊಡ್ಡದಾಗಿ ಹೇಳಿಕೊಂಡಿದ್ದಾರೆ. ಆದರೆ ಬಜೆಟ್ ದಸ್ತಾವೇಜುಗಳನ್ನು ಪರಿಶೀಲಿಸಿದರೆ ಕಳೆದ ವರ್ಷಕ್ಕಿಂತ ಹೆಚ್ಚೇನೂ ಹಣ ಕೊಟ್ಟಿಲ್ಲ ಎಂಬುದು ಕಾಣ ಬರುತ್ತದೆ ಎಂದಿರುವ ಸಿಪಿಐ(ಎಂ) ಕಳೆದ ವರ್ಷ ಈ ಕಾರ್ಯಕ್ರಮಕ್ಕೆ 47.4 ಕೋಟಿ ಖರ್ಚು ಮಾಡಲಾಗಿದೆ ಎಂದು ಅಂದಾಜು ಮಾಡಲಾಗಿದೆ, ಈ ಬಾರಿ, ಮಂದಗತಿಯ ಆರ್ಥಿಕದ ಕಠಿಣ ಪರಿಸ್ತಿತಿಯಿದ್ದರೂ ಕೊಟ್ಟಿರುವುದು ತುಸುವೇ ಹೆಚ್ಚು, ಅಂದರೆ 48ಸಾವಿರ ಕೋಟಿ ರೂ. ಮಾತ್ರ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಸಾಮಾಜಿಕ ವಲಯಕ್ಕೂ ತುಸುವೇ ಹೆಚ್ಚು ಹಣ ಕೊಟ್ಟಿದ್ದು, ಹಣದುಬ್ಬರವನ್ನು ಪರಿಗಣಿಸಿದಾಗ 7ನೇ ವೇತನ ಆಯೋಗದ ಶಿಫಾರಸಿನ ಜಾರಿಯಿಂದ ಆಗಿರುವ ಸಂಬಳದ ಖರ್ಚಿನಲ್ಲಿ ಆಗಿರುವ ಹೆಚ್ಚಳಕ್ಕಷ್ಟೇ ಸಾಕಾಗುವಂತದ್ದು. ಆರೋಗ್ಯದ ಬಾಬ್ತಿಗೆ ಕೊಟ್ಟಿರುವ ಹಣದ ಪ್ರಮಾಣದಲ್ಲಿ ತುಸು ಹೆಚ್ಚಳವಾದರೂ, ಶಾಲಾಶಿಕ್ಷಣ ಮತ್ತು ಸಾಕ್ಷರತೆ-ಗೆ ಕೊಟ್ಟಿರುವ ಹಣದ ಪಾಲು ವಾಸ್ತವವಾಗಿ ಕಡಿಮೆಯಾಗಿದೆ. 2016-17ರ ಪರಿಷ್ಕೃತ ಬಜೆಟಿನಲ್ಲಿ 2.2ಶೇ. ಇದ್ದದ್ದು 2017-18ರ ಈ ಬಜೆಟಿನಲ್ಲಿ 2.16ಶೇ.ಕ್ಕೆ ಇಳಿದಿದೆ.

ಹಣಕಾಸು ಮಂತ್ರಿಗಳು ತಮ್ಮ ಭಾಷಣದಲ್ಲಿ ರೈತರ ಆದಾಯಗಳನ್ನು ಇಮ್ಮಡಿಗೊಳಿಸುವುದಾಗಿ ಮತ್ತೆ-ಮತ್ತೆ ಹೇಳಿದರು. ಆದರೆ ಕೃಷಿಗೆ ಕೊಟ್ಟಿರುವ ಹಣದಲ್ಲಿ ಇದೇನೂ ಕಾಣಿಸಿಲ್ಲ. ಅದರಲ್ಲೇನೂ ಹೆಚ್ಚಳ ಮಾಡಿಲ್ಲ ಎಂಬ ಸಂಗತಿಯತ್ತ ಸಿಪಿಐ(ಎಂ) **ಪೊಲಿಟ್‌ಬ್ಯುರೊ ಬೊಟ್ಟು ಮಾಡಿದೆ. ವಾಸ್ತವವಾಗಿ ಅದರ ಪ್ರಮಾಣ ಕಡಿಮೆಯಾಗಿದೆ. 2016-17ರ ಪರಿಷ್ಕೃತ ಅಂದಾಜಿನ ಪ್ರಕಾರ ಅದು ಒಟ್ಟು ಖರ್ಚಿನ 1.98ಶೇ. ಇತ್ತು. 2017-18ರ ಬಜೆಟಿನಲ್ಲಿ ಅದು 1.95ಶೇ. ಕ್ಕೆ ಇಳಿದಿದೆ. ಸರಕಾರ ಬಹಳಷ್ಟು ಹೇಳಿಕೊಳ್ಳುವ ಪ್ರಮುಖ ಕಾರ್ಯಕ್ರಮಗಳಿಗೂ ಹೆಚ್ಚಿನ ಹಣವನ್ನೇನೂ ಕೊಟ್ಟಿಲ್ಲ. ಬ್ಯಾಂಕಿಂಗ್ ವ್ಯವಸ್ಥೆಯನ್ನಷ್ಟೇ ಅವಲಂಬಿಸಿ ರೈತರ ಆದಾಯಗಳನ್ನು ದ್ವಿಗುಣಗೊಳಿಸಬಹುದು ಎಂದು ಅದು ಭಾವಿಸಿದಂತಿದೆ.**

ಮೂಲರಚನೆಯ ಮೇಲೆ ಗಮನ ಕೇಂದ್ರೀಕರಿಸಿರುವುದಾಗಿ ಹಣಕಾಸು ಮಂತ್ರಿಗಳು ಹೇಳಿದರೂ ಸರಕಾರದ ಬಂಡವಾಳ ಖರ್ಚಿನ ಪ್ರಮಾಣ ಇಳಿದಿದೆ. 2016-17ರ ಪರಿಷ್ಕೃತ ಅಂದಾಜಿನಲ್ಲಿ ಅದು ಜಿಡಿಪಿಯ 1.86ಶೇ. ಇತ್ತು. 2017-18ರ ಬಜೆಟಿನಲ್ಲಿ ಅದು 1.84ಶೇ.ಕ್ಕೆ ಇಳಿದಿದೆ.

ಹಣಕಾಸು ಮಂತ್ರಿಗಳು ರಾಜಕೀಯ ಹಣ ಸಂಗ್ರಹದ ಬಗ್ಗೆ ಬಹಳಷ್ಟು ಪ್ರಕಟಣೆಗಳನ್ನು ಮಾಡಿದ್ದಾರೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸಲಿಕ್ಕಾಗಿ ಇವೆಲ್ಲ ಎಂದು ಹೇಳಿದರು. ನಗದು ದೇಣಿಗೆಗಳಿಗೆ 2000ರೂ. ಮಿತಿ ಹಾಕಲಾಗಿದೆ. ಇದು ಅರ್ಥಹೀನ, ಏಕೆಂದರೆ ಇಂತಹ ವರ್ಗಾವಣೆಗಳನ್ನು ಹೆಚ್ಚಾಗಿ ವರದಿ ಮಾಡುವುದೇ ಇಲ್ಲ. ರಾಜಕೀಯ ಪಕ್ಷಗಳಿಗೆ ಕಾರ್ಪೊರೇಟ್ ದೇಣಿಗೆಗಳನ್ನು ನಿಷೇಧಿಸದೆ ಮತ್ತು ರಾಜಕೀಯ ಪಕ್ಷಗಳ ಚುನಾವಣಾ ಖರ್ಚುಗಳ ಮೇಲೆ ಒಟ್ಟಾರೆ ಮಿತಿ ಹಾಕದೆ ಕೈಗೊಳ್ಳುವ ಕ್ರಮಗಳೆಲ್ಲ ಬರೀ ಪೊಳ್ಳು ಎಂದು ಸಿಪಿಐ(ಎಂ) ಬಲವಾಗಿ ಟೀಕಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಈ ಬಜೆಟ್ ನೋಟುರದ್ಧತಿಯಿಂದಾಗಿ ಮತ್ತು ಮಂದ ಆರ್ಥಿಕ ಪರಿಸ್ಥಿತಿ ವ್ಯಾಪಿಸಿರುವುದರಿಂದ ಜನಗಳ ಮೇಲೆ ಬಿದ್ದಿರುವ ಹೊರೆಗಳನ್ನು ಕಡೆಗಣಿಸಿದೆಯಷ್ಟೇ ಅಲ್ಲ, ಮತ್ತಷ್ಟು ಹೊರೆಗಳನ್ನು ಹೇರಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ●


'ಉತ್ತಮ'ಬಜೆಟ್‌ನ ವಾಸ್ತವ ರೂಪ



* **ಬಜೆಟ್‌ನ ಒಟ್ಟು ಪ್ರಮಾಣ ಕಳೆದ ವರ್ಷ ಪರಿಷ್ಕೃತ ಅಂದಾಜಿನ ಪ್ರಕಾರ ಜಿಡಿಪಿಯ 13.4 ಶೇ. ಇತ್ತು. ಈ ವರ್ಷ ಅದು 12.7ಶೇ.ಕ್ಕೆ ಇಳಿದಿದೆ.**
* **2016-17ರ ಪರಿಷ್ಕೃತ ಅಂದಾಜಿನಲ್ಲಿ ಒಟ್ಟು ರೆವಿನ್ಯೂ ಆದಾಯ ಜಿಡಿಪಿಯ 9.4ಶೇ. ಇದ್ದರೆ, 2017-18ರ ಬಜೆಟ್ ಅಂದಾಜಿನಲ್ಲಿ ಅದನ್ನು 9ಶೇ.ಕ್ಕೆ ಇಳಿಸಲಾಗಿದೆ.**
* **ಆದರೆ ಜನಗಳ ಮೇಲಿನ ಮೇಲಿನಪರೋಕ್ಷ ತೆರಿಗೆಗಳಲ್ಲಿ 75000 ಕೋಟಿ ರೂ.ಗಳ ಹೆಚ್ಚಳ.**
* **ಶ್ರೀಮಂತ ವಿಭಾಗಗಳಿಗೆ ಬಿಟ್ಟುಕೊಟ್ಟ ತೆರಿಗೆಗಳ ಪ್ರಮಾಣ 30 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಿದೆ, ಅದೀಗ ಜಿಡಿಪಿಯ 2.1ಶೇ. ಆಗಿದೆ.**
* **ಬಿಲ್ಡರುಗಳಿಗೆ ಅಗ್ಗದಲ್ಲಿ ಭೂಮಿ ಮತ್ತು ಸಾಲ ಒದಗಿಸಲು ಭೂಸ್ವಾಧೀನದ ಕಠಿಣ ಅಂಶಗಳಿಂದ ವಿನಾಯ್ತಿ, ಸಬ್ಸಿಡಿ ಬಡ್ಡಿದರಗಳಲ್ಲಿ ಆದ್ಯತೆ ವಲಯದ ಸಾಲಗಳನ್ನು ಒದಗಿಸಲಾಗುವುದಂತೆ, ಅಲ್ಲದೆ ದೊಡ್ಡ ಮನೆಗಳನ್ನು ಕಟ್ಟುವುದನ್ನೂ 'ಕೈಗೆಟಕುವ ವಸತಿ'ಯಲ್ಲಿ ಸೇರಿಸಲಾಗುವುದಂತೆ. ಇವೆಲ್ಲ ಒಂದು 'ವಸತಿ ಗುಳ್ಳೆ' ಸೃಷ್ಟಿಸುವ ದಿಕ್ಕಿನಲ್ಲಿನ ಕ್ರಮಗಳು.**
* **50 ಕೋಟಿ ರೂ. ವರೆಗೆ ವಾರ್ಷಿಕ ವಹಿವಾಟು ಇರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಆದಾಯ ತೆರಿಗೆಯನ್ನು ಇಳಿಸುವ ಪ್ರಸ್ತಾವ ಕಾರ್ಪೊರೇಟ್ ವಲಯಕ್ಕೆ ಕಾರ್ಪೊರೇಟ್ ತೆರಿಗೆಯಿಂದ ತಪ್ಪಿಸಿಕೊಳ್ಳುವ ಹೊಸದೊಂದು ದಾರಿಯನ್ನು ತೆರೆದು ಕೊಟ್ಟಿದೆ.**
* **ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣಕ್ಕೆ ಕೇವಲ 1.48%ಮತ್ತು ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಕೇವಲ 2.44% ಮತ್ತು ಲಿಂಗ ಬಜೆಟ್ ಎಂದು ವರ್ಗೀಕರಿಸಿದ ಬಾಬ್ತಿಗೆ ಕೇವಲ 5.3%**
* **ರೈತರ ಆದಾಯಗಳನ್ನು ಇಮ್ಮಡಿಗೊಳಿಸುವ ಮಾತುಗಳೇನೇ ಇದ್ದರೂ ಕೃಷಿಗೆ ಕೊಟ್ಟಿರುವ ಹಣದಲ್ಲಿ ಹೆಚ್ಚಳ ಮಾಡಿಲ್ಲ ವಾಸ್ತವವಾಗಿ ಅದರ ಪ್ರಮಾಣ ಕಡಿಮೆಯಾಗಿದೆ. 2016-17ರ ಪರಿಷ್ಕೃತ ಅಂದಾಜಿನ ಪ್ರಕಾರ ಅದು ಒಟ್ಟು ಖರ್ಚಿನ 1.98ಶೇ. ಇತ್ತು. 2017-18ರ ಬಜೆಟಿನಲ್ಲಿ ಅದು 1.95ಶೇ. ಕ್ಕೆ ಇಳಿದಿದೆ.**
* **ಮೂಲರಚನೆಯ ಮೇಲೆ ಗಮನ ಕೇಂದ್ರೀಕರಿಸಿರುವುದಾಗಿ ಹೇಳಿದರೂ ಬಂಡವಾಳ ಖರ್ಚಿನ ಪ್ರಮಾಣ 2016-17ರ ಪರಿಷ್ಕೃತ ಅಂದಾಜಿನಲ್ಲಿ ಜಿಡಿಪಿಯ 1.86ಶೇ. ಇದ್ದದ್ದು 2017-18ರ ಬಜೆಟಿನಲ್ಲಿ 1.84ಶೇ.ಕ್ಕೆ ಇಳಿದಿದೆ.**

ಮಾತೆಂದರೆ ಇದು

'ಯಾವುದೇ ಕಾಲದಲ್ಲಿ ಒಂದು ಸಮಾಜವನ್ನು ಆಳುವ ವಿಚಾರಗಳು ಆ ಸಮಾಜದ ಆಳುವ ವರ್ಗದ ವಿಚಾರಗಳೇ ಆಗಿರುತ್ತವೆ. ಅಂದರೆ ಒಂದು ಸಮಾಜದ ಆಳುವ ಭೌತಶಕ್ತಿಯಾಗಿರುವ ವರ್ಗವೇ ಆ ಸಮಾಜದ ಬೌದ್ಧಿಕ ಪ್ರಪಂಚವನ್ನೂ ಆಳುವ ಶಕ್ತಿಯಾಗಿರುತ್ತದೆ. ಭೌತ-ಉತ್ಪಾದನಾ ಸಾಧನಗಳ ಒಡೆತನ ಹೊಂದಿರುವ ವರ್ಗವೇ ಆಯಾ ಸಮಾಜದಲ್ಲಿಯ ಬೌದ್ಧಿಕ ಉತ್ಪಾದನಾ ಸಾಧನಗಳನ್ನೂ ನಿಯಂತ್ರಿಸುತ್ತದೆ... ಆಳುವ ವಿಚಾರಗಳು ಆಯಾ ಸಮಾಜದಲ್ಲಿಯ ಪ್ರಬಲ ಭೌತ ಸಂಬಂಧಗಳ ಭಾವನಾತ್ಮಕ ಅಭಿವ್ಯಕ್ತಿಗಳಾಗಿರುತ್ತವೆ ವಿನಾಃ ಬೇರೇನೂ ಅಲ್ಲ. ಸಮಾಜದಲ್ಲಿಯ ಪ್ರಬಲರ ಭೌತ ಸಂಬಂಧಗಳೇ ವಿಚಾರಗಳಾಗಿ ಜನಮನದಲ್ಲಿ ಸ್ಥಾಯಿಗೊಂಡಿರುತ್ತವೆ. ಆದ್ದರಿಂದಲೇ ಒಂದು ವರ್ಗವನ್ನು ಆಳುವ ವರ್ಗವನ್ನಾಗಿ ನಿರ್ಮಿಸುವ ಸಂಬಂಧಗಳು ಆಯಾ ಸಮಾಜದ ಪ್ರಬಲ ವರ್ಗದವರ ವಿಚಾರಗಳ ತಳಹದಿಯ ಮೇಲೆಯೇ ನೆಲೆಯೂರಿಸುತ್ತವೆ.'



– ಕಾರ್ಲ್ ಮಾರ್ಕ್ಸ್

ಅಸಾಧಾರಣ ಸನ್ನಿವೇಶಕ್ಕೆ ಸ್ಪಂದಿಸದ ಸಾಧಾರಣ ಬಜೆಟ್

ಕೃಪೆ : ಪಿ. ಮಹಮ್ಮದ್, ವಿಜಯ ಕರ್ನಾಟಕ



ಸಂಪಾದಕೀಯ

ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಮಂಡಿಸಿದ 2017-18ರ ಸಾಲಿನ ಕೇಂದ್ರ ಸರಕಾರದ ಬಜೆಟ್ ಹಲವರ ನಿರೀಕ್ಷೆಗಳನ್ನು ಪೂರೈಸಿಲ್ಲ. ನೋಟು ರದ್ದತಿ ಮತ್ತು ಪಂಚ ರಾಜ್ಯ ಚುನಾವಣೆಗಳ ಹಿನ್ನೆಲೆಯಲ್ಲಿ ಈ ನಿರೀಕ್ಷೆಗಳು ಸ್ವಾಭಾವಿಕವಾಗಿತ್ತು. ನೋಟು ರದ್ದತಿಯಿಂದ ಬಾಧಿತರಾದ ಬಿತ್ತನೆ ಮಾಡಲಾಗದ ರೈತರಿಗೆ, ನಗರಗಳಲ್ಲಿ ಕೆಲಸ ಕಳೆದುಕೊಂಡ ಕಾರ್ಮಿಕರಿಗೆ, ತಮ್ಮ ಸಣ್ಣ ಉದ್ದಿಮೆ/ವ್ಯಾಪಾರಗಳನ್ನು ಮುಚ್ಚಬೇಕಾದ ಸಣ್ಣ ಉದ್ಯಮಿ/ವ್ಯಾಪಾರಿಗಳಿಗೆ ಕನಿಷ್ಠ ಪರಿಹಾರಕ್ಕೆ ವ್ಯವಸ್ಥೆ ಮಾಡಲಾಗುತ್ತದೆ ಎಂದು ನಿರೀಕ್ಷೆ ಇತ್ತು. ಸಾಲಬಾಧೆಯಿಂದ ನರಳುತ್ತಿರುವ ರೈತರಿಗೆ ಸಾಲ ಅಥವಾ ಬಡ್ಡಿ ಮನ್ನಾ ಮಾಡಬಹುದು ಎಂಬ ನಿರೀಕ್ಷೆ ಇತ್ತು. ಸತತ ಬರದಿಂದ ಕಂಗಾಲಾದ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತ ಮತ್ತಿತರ ರಾಜ್ಯಗಳ ಬರಪರಿಹಾರಕ್ಕೆ ನಿರ್ದಿಷ್ಟ ಕ್ರಮಗಳಿರಬಹುದು. ಬರ ಮತ್ತಿತರ ಗ್ರಾಮೀಣ ಸಂಕಷ್ಟ ಪರಿಹರಿಸಲು ರೇಗಾ ಯೋಜನೆಗೆ ಅನುದಾನವನ್ನು ಇಮ್ಮಡಿ ಮಾಡಬಹುದು ಅಥವಾ ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಿಸಬಹುದು. ಅದೇ ರೀತಿ ಸಾಮಾಜಿಕ ಕಾರ್ಯಕ್ರಮಗಳಿಗೆ ಅನುದಾನ ಹೆಚ್ಚಿಸಿ, ಆ ಮೂಲಕ ಸ್ಕೀಂ ನೌಕರರ ವೇತನ ಹೆಚ್ಚಳ ಸಾಧ್ಯವಾಗಬಹುದು ಎಂಬ ನಿರೀಕ್ಷೆಗಳೂ ಇದ್ದವು. ಈ ಎಲ್ಲಾ ನಿರೀಕ್ಷೆಗಳೂ ಹುಸಿಯಾಗಿವೆ.

ಸಾಲದ್ದಕ್ಕೆ ಬಜೆಟ್ ಮಂಡನೆ ನಾಲ್ಕು ವಾರಗಳ ಮೊದಲೇ ಮಾಡಿ ಬಜೆಟಿನ ಸಂಕೀರ್ಣತೆ ಹಾಗೂ ಅವಿಶ್ವಸನೀಯತೆಯನ್ನು ಜೇಟ್ಲಿಯವರು ಇನ್ನಷ್ಟು ಹೆಚ್ಚಿಸಿದ್ದಾರೆ. ಬಜೆಟ್ ಮೊದಲೇ ಮಂಡಿಸಿದ್ದರಿಂದ ಬರ ಮತ್ತು ನೋಟು ರದ್ದತಿಯ ಪರಿಣಾಮಗಳನ್ನು ಒಳಗೊಂಡ ಮೂರನೇ ತ್ರೈಮಾಸಿಕದ (ಅಕ್ಟೋಬರ್-ಡಿಸೆಂಬರ್) ಅಂಕೆ-ಸಂಖ್ಯೆಗಳೇ ಇಲ್ಲದೆ ಅಂದರೆ ಇಂದಿನ ವಾಸ್ತವ ಆದಾಯ-ಖರ್ಚುಗಳ ಪೂರ್ಣ ಚಿತ್ರ ಇಲ್ಲದೇನೇ ಬಜೆಟ್ ಸಿದ್ಧವಾಗಿದೆ. ಮಾತ್ರವಲ್ಲ ಜಿ.ಎಸ್.ಟಿ. ಜಾರಿಯಾಗುವ ನಿರೀಕ್ಷೆ ಇರುವುದರಿಂದ ಮತ್ತು ವಿವಿಧ ಸರಕು-ಸೇವೆಗಳ ದರ ಹಾಗೂ ಕೇಂದ್ರ-ರಾಜ್ಯಗಳ ಹಂಚಿಕೆ ಬಗ್ಗೆ ತೀವ್ರ ಅನಿಶ್ಚಿತತೆ ಇರುವುದರಿಂದ ಮುಂದಿನ ವರ್ಷದ ಆದಾಯದ ಬಗ್ಗೆ ಇನ್ನೂ ಹೆಚ್ಚಿನ ಅನಿಶ್ಚಿತತೆ ಇದೆ. ಈ ರೀತಿಯಲ್ಲಿ ಈ ವರ್ಷದ ಬಜೆಟ್ ಹಲವು ವಿಧಗಳಲ್ಲಿ ಅಸಾಧಾರಣ ಸನ್ನಿವೇಶದ ತೊಡಕುಗಳು ಇದ್ದವು. ಕೆಲವು 'ಸ್ವಾಭಾವಿಕ'ವಾದರೆ, ಹಲವು ಈ ಸರಕಾರ ಸೃಷ್ಟಿಸಿದ್ದವು. ಇಂತಹ ಅಸಾಧಾರಣ ಸನ್ನಿವೇಶಕ್ಕೆ ಬಜೆಟ್ ಸರಿಯಾಗಿ ಸ್ಪಂದಿಸುವ ಹಾಗೆ ಇರಬೇಕಿತ್ತು. ಆದರೆ ಬಜೆಟ್ ಯಾವುದೇ ಅಗತ್ಯ ತೀವ್ರ ಬದಲಾವಣೆ ಮಾಡದೆ 'ಸಾಧಾರಣ' ಆಗಿದೆ. ಜನಪರ ಅರ್ಥಶಾಸ್ತ್ರಜ್ಞರೊಬ್ಬರು ಈ ಬಜೆಟನ್ನು 'ಅಸಾಧಾರಣ ಸನ್ನಿವೇಶದಲ್ಲಿ ನಿರಾಸೆ ಹುಟಿಸುವ ಸಾಧಾರಣ ಬಜೆಟ್' ಎಂದು ಕರೆದಿದ್ದು ಈ ಬಜೆಟಿಗೆ ಅತ್ಯಂತ ಉಚಿತವಾದ 'ನಾಮಕರಣ'.

ಈ ಬಜೆಟಿನ ಹುಳುಕುಗಳು ಏನು? ಜನ-ಪರವಾಗಿರಲು ಏನು ಇರಬೇಕಾಗಿತ್ತು? ಎಂಬುದರ ಬಗ್ಗೆ ಈ ಸಂಚಿಕೆಯಲ್ಲಿ ಸಿಪಿಐ(ಎಂ) ಪೊಲಿಟ್ ಬ್ಯುರೊ ಸೇರಿದಂತೆ ಹಲವು ಜನಸಂಘಟನೆಗಳು ಹಾಗೂ ಜನಪರ ಅರ್ಥಶಾಸ್ತ್ರಜ್ಞರು, ನಾಯಕರು ಬಜೆಟ್ ಬಗ್ಗೆ ಮಾಡಿದ ವಿಶ್ಲೇಷಣೆಗಳನ್ನು ಕೊಡಲಾಗಿದೆ. ಆದರೆ ರಾಜ್ಯಗಳಿಗೆ ಅದರಲ್ಲೂ ಕರ್ನಾಟಕಕ್ಕೆ ಏನು ದಕ್ಕಿದೆ ಎಂಬುದರ ಬಗ್ಗೆ ಇಲ್ಲೇ ಹೇಳಬೇಕು. ಏನೂ ಇಲ್ಲ ಎಂಬುದು ಸರಳ ಉತ್ತರ. ರೇಗಾ ಕೇಂದ್ರ ಬಜೆಟಿನಲ್ಲಿ ಅನುದಾನ ಹೆಚ್ಚದಿರುವುದರಿಂದ ಮತ್ತು ಬರ-ನೋಟು ರದ್ದತಿಯ ಹಿನ್ನೆಲೆಯಲ್ಲಿ ರೇಗಾಕ್ಕೆ ಬೇಡಿಕೆ ಹೆಚ್ಚಿರುವುದರಿಂದ ಬರುವ ಹೆಚ್ಚುವರಿ ಖರ್ಚಿನ ಹೊರೆ ರಾಜ್ಯ ಸರಕಾರದ ಮೇಲೆ ಬೀಳಲಿದೆ. ಸ್ಕೀಂ ನೌಕರರ ವೇತನದ ಬಗೆಗೂ ಬಜೆಟಿನಲ್ಲಿ ಯಾವುದೇ ಪ್ರಸ್ತಾಪ ಇಲ್ಲದಿರುವುದರಿಂದ ಆ ವೆಚ್ಚವನ್ನೂ ರಾಜ್ಯ ಸರಕಾರ ಭರಿಸಬೇಕಾಗುತ್ತದೆ. ಬರ ಪರಿಹಾರದ್ದೂ ಇದೇ ಕತೆ. ಗ್ರಾಮೀಣಾಭಿವೃದ್ಧಿ, ಕುಡಿಯುವ ನೀರು, ಶಿಕ್ಷಣದ ಅನುದಾನಗಳನ್ನು ಹೆಚ್ಚಿಸದೆ ಇರುವುದರಿಂದ ರಾಜ್ಯಕ್ಕೆ ಹೆಚ್ಚಿನ ಖರ್ಚು ಬರಬಹುದು. ರೈಲ್ವೆ ಬಜೆಟ್ ಸಾಮಾನ್ಯ ಬಜೆಟಿನ ಜತೆ ಸೇರಿಸುವುದರಿಂದ ಈ ನಿಟ್ಟಿನಲ್ಲೂ ರಾಜ್ಯಕ್ಕೆ ಏನು ದಕ್ಕಿದೆ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಕೋಲಾರ ಹಾಗೂ ಯಾದಗಿರಿಯ ರೈಲು ಬೋಗಿ ಕಾರ್ಖಾನೆ, ಅಂಕೋಲಾ-ಹುಬ್ಬಳ್ಳಿ ರೈಲು ಮಾರ್ಗ, ಲಿಂಗಸಗೂರು-ಕೊಪ್ಪಳ-ವಾಡಿ ರೈಲು ಮಾರ್ಗಗಳ ಸ್ಥಿತಿ ಏನು ಎಂಬುದು ತಿಳಿದು ಬಂದಿಲ್ಲ. ರೈಲು ನಿಲ್ದಾಣಗಳನ್ನು ಖಾಸಗಿ ಸಹಕಾರದಲ್ಲಿ ಮರು-ಅಭಿವೃದ್ಧಿ ಪಡಿಸುವ ಯೋಜನೆಯಲ್ಲಿ ಕಂಟೋನ್ಮೆಂಟ್ ಮತ್ತು ಯಶವಂತಪುರ ರೈಲು ನಿಲ್ದಾಣಗಳು ಸೇರಿವೆ. 'ನಮ್ಮ ಮೆಟ್ರೊ' ಎರಡು ಹೊಸ ಲೈನುಗಳಿಗೆ ಮತ್ತು ಎರಡನೇ ಹಂತದ 4 ಮಾರ್ಗಗಳ ವಿಸ್ತರಣೆಗೆ ಒಪ್ಪಿಗೆ ಸಿಕ್ಕಿದೆ ಎಂದು ವರದಿಯಾಗಿದೆ. ಅದೂ ನೈಋತ್ಯ ವಲಯದ ಜನರಲ್ ಮ್ಯಾನೇಜರ್ ಪ್ರಕಟಣೆ ತಿಳಿಸಿದೆಯಷ್ಟೆ. ■

ಇನ್ನೇನು ಬೇಕು? ಕೃಷ್ಣ ಅವರೇ !

ಕೃಷ್ಣ ಅವರೇ,

ನೀವು ಕಾಂಗ್ರೆಸಿಗೆ ರಾಜಿನಾಮೆ ಕೊಟ್ಟಿದ್ದೀರೆಂದು ಅಂತ ಹೆಡ್ ಲೈನ್ ನೋಡಿ ತುಂಬಾ ಸಂತೋಷವಾಯಿತು. ಆದರೆ ರಾಜಕೀಯದಿಂದ ರಿಟೈರ್ ಆಗ್ತಾ ಇಲ್ಲ ಎಂದು ಡಿಟೈಲ್ಸ್ ಕೇಳಿ ದಂಗಾದೆ. ಬರಿಯ ಹೆಡ್ ಲೈನ್ ನೋಡಿ ರಾಜಕೀಯದಿಂದ ರಿಟೈರ್ ಆಗ್ತಾ ಇದ್ದೀರಿ ಅಂತ ನಾನು ಕನ್ ಫ್ಯೂಸ್ ಮಾಡಿಕೊಂಡಿದ್ದೆ. ಎಲ್ಲರೂ ಹಾಗೆ ತಾನೆ. ಬರೀ ಹೆಡ್ ಲೈನ್ ನೋಡ್ತಾರೆ. ಡಿಟೈಲ್ಸ್ ನೋಡಲಿಕ್ಕೆ ಪುರುಸೊತ್ತೇ ಇಲ್ಲ.

ನಿಮಗೆ ಕಾಂಗ್ರೆಸ್ ಏನು ಕಮ್ಮಿ ಮಾಡಿತ್ತು, ಕೃಷ್ಣ ಅವರೇ? ಯುವಕರಾಗಿರುವಾಗಲೇ ವಿಧಾನ ಸಭೆ ಸದಸ್ಯ, ಮಂತ್ರಿಗಳೂ ಆದಿರಿ. ದೀರ್ಘ ಕಾಲ ಮಂತ್ರಿಗಳಾಗಿದ್ದಿರಿ. ಕೆಪಿಸಿಸಿ ಅಧ್ಯಕ್ಷರೂ ಆದಿರಿ. ಮುಖ್ಯಮಂತ್ರಿಗಳೂ ಆದಿರಿ. ಲೋಕಸಭಾ ರಾಜ್ಯಸಭಾ ಸದಸ್ಯರೂ ಆಗಿದ್ದೀರಿ. ದೊಡ್ಡ ರಾಜ್ಯವೊಂದರ ರಾಜ್ಯಪಾಲರೂ ಆದಿರಿ. ಇಳಿ ವಯಸ್ಸಿನಲ್ಲಿ ಕೇಂದ್ರ ಮಂತ್ರಿ ಅದರಲ್ಲೂ ಪ್ರತಿಷ್ಠಿತ ವಿದೇಶ ಮಂತ್ರಿ ಪದವಿ ಅಲಂಕರಿಸಿದಿರಿ. ಇನ್ನೇನು ಬೇಕು, ಕೃಷ್ಣ ಅವರೇ ಜೀವನದಲ್ಲಿ?

ಕಾಂಗ್ರೆಸ್ ನನ್ನನ್ನು ನಿರ್ಲಕ್ಷ ಮಾಡುತ್ತದೆ ಎಂದಿದ್ದೀರಿ. ನಿಮ್ಮನ್ನು ವಿದೇಶ ಮಂತ್ರಿ ಸ್ಥಾನದಿಂದ ಕೆಲವೇ ತಿಂಗಳಲ್ಲೇ ಕೈ ಬಿಟ್ಟರು ಅಂತ ಕೋಪನಾ? ವಿಶ್ವಸಂಸ್ಥೆಯಲ್ಲಿ ಇನ್ಯಾವುದೋ ಭಾಷಣ ಎತ್ತಿಕೊಂಡು ಭಾಷಣ ಓದುವಾಗಲೂ ನಿಮಗೆ ಗೊತ್ತಾಗಲಿಲ್ಲ. ಇಂತಹ ಎಡವಟ್ಟು ಮಾಡಿದರೆ ಯಾರಾದರೂ ಸಹಿಸಿ ಕೊಳ್ತಾರಾ? ನೀವು ಮುಖ್ಯಮಂತ್ರಿ ಆಗುವ ಮೊದಲು ಇತರ ಕಾಂಗ್ರೆಸ್ ಮುಖ್ಯಮಂತ್ರಿಗಳಿಗೆ ಭಿನ್ನಮತೀಯ ಚಟುವಟಿಕೆ ನಡೆಸಿದಾಗಲೂ ನಿಮ್ಮ ಪಕ್ಷ ಸಹಿಸಿಕೊಂಡಿತ್ತು. ನೆರೆಯ ರಾಜ್ಯದಲ್ಲಿ ರಾಜ್ಯಪಾಲರಾಗಿದ್ದಾಗಲೂ ಅಲ್ಲಿಂದಲೇ 'ರಾಜಕೀಯ' ಮಾಡುವುದನ್ನೂ ಕಾಂಗ್ರೆಸ್ ಸಹಿಸಿಸಿದ್ದೇ ಹೆಚ್ಚು. ಪುನಃ ರಾಜ್ಯಸಭಾ ಸದಸ್ಯ ಅಥವಾ ಮುಖ್ಯಮಂತ್ರಿ ಮಾಡಬೇಕು ಅಂತ ನಿರೀಕ್ಷಿಸುವುದು ತಪ್ಪು, ಕೃಷ್ಣ ಅವರೇ. ಸಿಕ್ಕಿದ್ದರಲ್ಲಿ ತೃಪ್ತಿ ಪಡಬೇಕು. ಅತಿಯಾಸೆ ಗತಿಕೇಡು ಅಂತಾರೆ. ಸುಮ್ಮನೆ ರಾಜಕೀಯದಿಂದ ರಿಟೈರಾಗಿ ತಣ್ಣಗೆ ಮನೆಯಲ್ಲಿ ಇದ್ದುಬಿಡಿ.

ನೀವು ರಾಜಕೀಯದಿಂದ ರಿಟೈರ್ ಆಗುತ್ತಿಲ್ಲ. ಮಾತ್ರವಲ್ಲ, ಬಿಜೆಪಿಗೆ ಸೇರುವ ಪ್ರಯತ್ನ ಮೂರು ತಿಂಗಳುಗಳಿಂದ ಮಾಡುತ್ತಿದ್ದೀರಿ. ಅದಕ್ಕೆ ನೋಟು ನಿಷೇಧ ಹೊಗಳಿದ್ದು. ಸ್ಥಳೀಯವಾಗಿಯೂ ಯೆಡಿಯೂರಪ್ಪನವರ ಜತೆ ಟಚ್ ನಲ್ಲಿ ಇದ್ದೀರಿ, ಎಂದು ನನಗೆ ತಿಳಿದು ಬಂದಿದೆ. ದಯವಿಟ್ಟು ಈ ಇಳಿವಯಸ್ಸಿನಲ್ಲಿ ಇದು ಮಾತ್ರ ಮಾಡಬೇಡಿ. ಈ ವಯಸ್ಸಿನಲ್ಲಿ ಪಕ್ಷಾಂತರದ ಕಳಂಕ ಹೊತ್ತುಕೊಳ್ಳಬೇಡಿ. ನೀವು ಹಿಂದೆ ಪಿ.ಎಸ್.ಪಿ.ಯಿಂದ ಪಕ್ಷಾಂತರ ಆದವರು ಅಂತ ನನಗೆ ಗೊತ್ತಿದೆ. ಆಗ ಕಾಂಗ್ರೆಸ್ ಸಮಾಜವಾದ ತರುತ್ತೆ ಎಂಬ ನೆಪವಾದರೂ ಇತ್ತು.

ತಾನೇ ಇನ್ನೂ ರಿಟೈರಾಗದ, ಇನ್ನೂ ಪ್ರಧಾನಿ ಆಗುವ ಆಸೆ ಬಿಡದ ಈ ಮುದುಕ ನನಗೇನು ಉಪದೇಶ ಮಾಡುವುದು ಅಂದುಕೊಳ್ಳಬೇಡಿ. ಮಾತ್ರವಲ್ಲ ಮೋದಿ-ಶಾ ಗ್ಯಾಂಗನ್ನೂ ಯೆಡಿಯೂರಪ್ಪನವರನ್ನಂತೂ ಖಂಡಿತ ನಂಬಬೇಡಿ. ಅದರಲ್ಲೂ ನಿಮ್ಮನ್ನು ರಾಷ್ಟ್ರಪತಿ ಮಾಡುತ್ತೇನೆಂದು ಭರವಸೆ ಕೊಟ್ಟಿದ್ದರೆ ಖಂಡಿತ ನಂಬಬೇಡಿ. ನನಗೂ ಆ ರೀತಿ ನಂಬಿಸಿ ಟೋಪಿ ಹಾಕಿ ಕೂರಿಸಿದ್ದಾರೆ. ಆದರೆ 'ಸ್ವಧರ್ಮೆ ನಿಧನಂ ಶ್ರೇಯಃ' ಎಂದು ನಂಬಿದವನು ನಾನು. ಎಷ್ಟೇ ನಿರ್ಲಕ್ಷ ಮಾಡಿದರೂ, ಅವಮಾನ ಮಾಡಿದರೂ ಪಕ್ಷ ಮಾತ್ರ ಬಿಡಬಾರದು. ನೀವು ಬಿಜೆಪಿಗೆ ಸೇರಿದರೆ ನಾನು ಕಾಂಗ್ರೆಸ್ ಸೇರಿದಷ್ಟೇ ಅಪಹಾಸ್ಯಕರವಾಗಿರುತ್ತದೆ. ಇನ್ನು ನಿಮ್ಮ ವಿವೇಚನೆಗೆ ಬಿಟ್ಟಿದ್ದು.

ಇತಿ ನಿಮ್ಮ

ಎಲ್. ಕೆ. ಅಡ್ವಾಣಿ

(ಈ ಪತ್ರ ನಮಗೆ ನಂಬಲರ್ಹವಾದ ಕೆಲವು ಮೂಲಗಳಿಂದ ಲಭ್ಯವಾಗಿದೆ) ■



ಈ ವಾರ ಚರಿತ್ರೆಯಲ್ಲಿ

5 ಫೆಬ್ರವರಿ 1981

ರೈತ ಹುತಾತ್ಮ ಜ್ಯೋತಿ ಬೆಂಗಳೂರು ತಲುಪಿದ ದಿನ

ಬೆಂಗಳೂರು ನಗರ ತನ್ನ ಇತಿಹಾಸದಲ್ಲೇ ಅಭೂತಪೂರ್ವ ಎನ್ನುವಂತಹ ರೈತ-ಕಾರ್ಮಿಕ ಜಾಥಾವನ್ನು ಕಂಡ ದಿನ. ರೈತ ಹುತಾತ್ಮ ಜ್ಯೋತಿಯನ್ನು ಹೊತ್ತ ರೈತರ ಕಾಲ್ನಡಿಗೆ ಜಾಥಾ ಅಂದು ಬೆಂಗಳೂರು ತಲುಪಿದ ದಿನ. ರಾಜ್ಯದ ಮೂಲೆ ಮೂಲೆಗಳಿಂದ ಉಪಜಾಥಾಗಳೊಂದಿಗೆ ನರಗುಂದ ಜಾಥಾವನ್ನು ಸೇರಿ-ಕೊಂಡ ರೈತರ ಸಂಖ್ಯೆ ಹತ್ತಾರು ಪಟ್ಟು ಏರಿ ಬೆಂಗಳೂರಿನ ಹಾದಿಬೀದಿಗಳಲ್ಲಿ ರೈತರೇ ರೈತರು. ತಮ್ಮ ಹತ್ತು ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರು ದೊರೆ (ಕರ್ನಾಟಕ ಸರಕಾರದ ಮುಖ್ಯಮಂತ್ರಿ) ಯನ್ನು ಒತ್ತಾಯಿಸಲು ಅವರು ಬಂದಿದ್ದರು. ರೈತರ ಬೆಂಬಲಕ್ಕೆ ಬೆಂಗಳೂರಿನ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಾಗಿ ಬಂದಿದ್ದರು. ಅವರ್‍ಯಾರು ಬರಿಗೈಯಲ್ಲಿ ಬಂದಿರಲಿಲ್ಲ. ಪ್ರತಿಯೊಬ್ಬ ಕಾರ್ಮಿಕ ತನ್ನ ಕೈಯಲ್ಲಿ ರೈತರಿಗಾಗಿ ಅನ್ನದ ಪೊಟ್ಟಣ ಹಿಡಿದುಕೊಂಡು ಬಂದಿದ್ದ.


ಶಾಂತಿಯುತ ಮೆರವಣಿಗೆ ನಡೆಸಿ ಕಬ್ಬನ್‌ಪಾರ್ಕ್‌ನಲ್ಲಿ ಸಂಜೆ ಸಭೆ ಸೇರಿದಾಗ, ಈ ಜನಸಾಗರ ಕಂಡು ಬೆಂಗಳೂರು ಜನಮನದಲ್ಲಿ ರೋಮಾಂಚನ. "ರೈತ-ಕಾರ್ಮಿಕರ ಸಖ್ಯತೆ ಚಿರಾಯುವಾಗಲಿ", "ನರಗುಂದ ರೈತ ಬಂಡಾಯಕ್ಕೆ ಜಯವಾಗಲಿ", "ರೈತರು ಬಂದರು ದಾರಿ ಬಿಡಿ ರೈತರ ಕೈಗೆ ರಾಜ್ಯ ಕೊಡಿ" ಎಂಬಿತ್ಯಾದಿ ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಪೋಲೀಸರು ಹಾಕಿದ್ದ ತಡೆಗೋಡೆಗಳನ್ನು ಭೇದಿಸಿ 'ಹುತಾತ್ಮ ಜ್ಯೋತಿ'ಯನ್ನು ವಿಧಾನಸೌಧದ ಮುಂಬಾಗಿಲಿನಲ್ಲಿ ಇರಿಸುವಲ್ಲಿ ಚಳುವಳಿಗಾರರು ಸಫಲರಾದರು. ಹೆಮ್ಮೆಯಿಂದ ಬೀಗಿದರು. ಹರ್ಷೋದ್ಗಾರಗಳು ಮೊಳಗಿದವು.

ಬೆಳಗಾವಿ ಜಿಲ್ಲಾ ಪತ್ರ
ಸಾಲ ಮನ್ನಾಕ್ಕೆ ರೈತರ ಆಗ್ರಹ

ವರದಿ: ಗೈಬು ಜೈನೆಖಾನ

ದೇಶದ 15 ರಾಜ್ಯಗಳಲ್ಲಿ ಭೀಕರ ಬರಗಾಲ ಆವರಿಸಿದ್ದು, ರೈತರಿಗೆ ದಿಕ್ಕುತೋಚದಂತಾಗಿದೆ. ಹಿಂಗಾರು-ಮುಂಗಾರು ವಿಫಲವಾಗಿ ರೈತ ಕಂಗಾಲಾಗಿದ್ದಾನೆ. ಸಾಲದ ಕೂಪದಲ್ಲಿ ಒದ್ದಾಡುತ್ತಿದ್ದಾನೆ. ಇಂತಹ ಸಂದರ್ಭದಲ್ಲಿ ಕೇಂದ್ರ ಸರಕಾರ ರೈತರ ನೆರವಿಗೆ ಬರಬೇಕು. ಸರಕಾರದ ಅಂಕಿಅಂಶಗಳ ಪ್ರಕಾರ ರಾಮದುರ್ಗ ತಾಲೂಕಿನಲ್ಲಿ ಸತತ ಏಳು ವರ್ಷಗಳಿಂದ ಬರಗಾಲವಿದೆ. ವಾರ್ಷಿಕ ಬಜೆಟ್‌ನಲ್ಲಿ ಪ್ರಧಾನ ಮಂತ್ರಿಗಳು ಈ ದೇಶದ ರೈತರ ಪರಸ್ಥಿತಿಯನ್ನು ಅರಿತು ಸಾಲ ಮನ್ನಾ ಮಾಡಬೇಕು ಅಂತಾ ಒತ್ತಾಯಿಸಿ ಜನವರಿ 17ರಂದು ರಾಮದುರ್ಗ ತಾಲೂಕಿನ ರೈತರ ಬೃಹತ್ ಪ್ರತಿಭಟನೆಯನ್ನು ನಡೆಸಲಾಯಿತು.

ಪ್ರಚಾರ ಜಾಥಾ ಸಂದರ್ಭದಲ್ಲಿ ಪ್ರತಿ ಗ್ರಾಮದಲ್ಲಿ ಗ್ರಾಮ ಪಂಚಾಯತ ನೌಕರರು, ಅಂಗನವಾಡಿ ನೌಕರರು ಹಾಗೂ ಬಿಸಿಊಟದ ನೌಕರರು ನಮಗೆ ಸಹಾಯ ಮಾಡಿದರು. ಗ್ರಾಮ ಹಾಗೂ ತಾಂಡಾಗಳಲ್ಲಿ ಸಭೆಗಳನ್ನು ನಡೆಸಿ ಸುಮಾರು 500 ಜನ ಸಾಲಗಾರ ರೈತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾಲ ಮನ್ನಾ ಮಾಡಲು ಒತ್ತಾಯಿಸಿ 5000 ಸಹಿ ಸಂಗ್ರಹ ಮಾಡಿದ



ಮನವಿಗಳನ್ನು ರಾಮದುರ್ಗ ತಹಶೀಲ್ದಾರ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಲಾಯಿತು.

ಬಂಡವಾಳ ಶಾಹಿಗಳಿಗೆ ಲಕ್ಷಲಕ್ಷ ಕೋಟಿ ರೂಪಾಯಿ ಮನ್ನಾ ಮಾಡುವ ಕೇಂದ್ರ ಸರಕಾರವು ರೈತರ ಸಾಲ ಮನ್ನಾ ಮಾಡಲು ಹಿಂದೇಟು ಹಾಕುತ್ತದೆ. ಕೆಲವೇ ಕೆಲವು ದೊಡ್ಡ ಜನರಿಗೆ ಓಡಾಡಲು ರೂ 90 ಸಾವಿರ ಕೋಟಿ ಖರ್ಚು ಮಾಡಿ ಬುಲೆಟ್ ಟ್ರೇನ್‌ನಂತಹ ಐಶಾರಾಮಿ ವ್ಯವಸ್ಥೆ ಮಾಡಲು ಮುಂದಾಗಿರುವ ದೇಶದ ಪ್ರಧಾನಿ ದೇಶಕ್ಕೆ ಅನ್ನ ನೀಡುವ ರೈತರ ಸಾಲ ಏಕೆ ಮನ್ನಾ ಮಾಡುವುದಿಲ್ಲ ಅಂತಾ ಕೇಂದ್ರ ಸರಕಾರದ ರೈತವಿರೋಧಿ ನೀತಿಯನ್ನು ಖಂಡಿಸಿ ರೈತ ಮುಖಂಡರಾದ ವ್ಹಿ. ಪಿ. ಕುಲಕರ್ಣಿಯವರು ರೈತರನ್ನು ನಿರ್ಲಕ್ಷಿಸುತ್ತಿರುವ ಕೇಂದ್ರ ಸರಕಾರದ ನೀತಿಯನ್ನು ಖಂಡಿಸಿದರು.

ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಗೈಬು ಜೈನೆಖಾನ, ಎಸ್. ಬಿ. ಹಳ್ಳಿ, ಎಸ್. ಆರ್. ಮಿರ್ಜಿ, ಅರ್ಜುನ ಜಾಧವ, ರೈತರನ್ನುದ್ದೇಶಿಸಿ ಮಾತನಾಡಿದರು.

ಸರಕಾರದ ಆದೇಶದಂತೆ ವೇತನ ನೀಡಲು ಪಂಚಾಯತ ನೌಕರರ ಧರಣಿ ಸತ್ಯಾಗ್ರಹ

ರಾಜ್ಯದ ಕಾರ್ಮಿಕ ಇಲಾಖೆ ಹಾಗೂ ಆರ್.ಡಿ.ಪಿ.ಆರ್ ಇಲಾಖೆ ಅಗಸ್ಟ 4 ರಂದು ರಾಜ್ಯದ 6000 ಗ್ರಾಮ ಪಂಚಾಯತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ವೇತನ ರೂ. 12,122, 10580, 10,050 ಮತ್ತು ಸ್ವಚ್ಛತಾಗಾರರಿಗೆ ರೂ. 12,870 ನೀಡಬೇಕೆಂದು ಆದೇಶ ಹೊರಡಿಸಿದ್ದರೂ ಕೆಳ ಹಂತದ ಗ್ರಾಮ ಪಂಚಾಯತ ಅಧಿಕಾರಿಗಳು ವೇತನ ನೀಡಲು ವಿಳಂಬ ಮಾಡುತ್ತಿರುವ ನೀತಿ ಖಂಡಿಸಿ ಬೆಳಗಾವಿ ಜಿಲ್ಲಾ ಪಂಚಾಯತ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಯಿತು.

18 ಜನವರಿ 2017 ರಂದು ಬೆಳಗಾವಿ ಅಂಬೇಡ್ಕರ ಗಾರ್ಡನದಿಂದ ಸುಮಾರು 2,000 ಸಿಬ್ಬಂದಿ ಮೆರವಣಿಗೆಯ ಮೂಲಕ ಜಿಲ್ಲಾ ಪಂಚಾಯತ ಕಛೇರಿಗೆ ತೆರಳಿ 10-12 ತಿಂಗಳಿಂದ ವೇತನವಿಲ್ಲದೆ ನಾವು ಹೇಗೆ ಬದುಕಬೇಕೆಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ರಾಜ್ಯ ಸರಕಾರದಿಂದ ಹಲವಾರು ಆದೇಶಗಳನ್ನು ಹೊರಡಿಸಿ, ಇದರ ಭಾಗವಾಗಿ ಜಿಲ್ಲಾ ಪಂಚಾಯತನಿಂದ ಆದೇಶ ಹೊರಡಿಸಿದ್ದರೂ ಆದೇಶಗಳು ಪಂಚಾಯತ ಮಟ್ಟದಲ್ಲಿ ಜಾರಿಯಾಗದೇ ಇರುವುದು ಖೇದಕರ ಸಂಗತಿ. ರಾಜ್ಯ ಮಟ್ಟದ ಅಧಿಕಾರಿಗಳಾಗಲಿ, ಜಿಲ್ಲಾ ಮಟ್ಟದ ಅಧಿಕಾರಿಗಳಾಗಲಿ ಆದೇಶಗಳನ್ನು ಮಾಡಿದರೆ ಸಾಲದು. ಆದೇಶಗಳು ಜಾರಿಯಾಗಿದೆಯೋ, ಇಲ್ಲವೋ? ಎಂಬುವುದನ್ನು ತಿಳಿದುಕೊಳ್ಳಬೇಕು. ಆದೇಶಗಳು ಕೆಳಹಂತದ ವರೆಗೆ ಪಾಲನೆ ಆಗದೆ ಇರುವುದರಿಂದ ಇಂದು ಪಂಚಾಯತ ನೌಕರರಿಗೆ ವೇತನ ಸಿಗುತ್ತಿಲ್ಲ. "ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ" ಎಂಬಂತಾಗಿದೆ. ಕೂಡಲೇ ಪಂಚಾಯತ ಸಿಬ್ಬಂದಿಗಳಿಗೆ ವೇತನ ಪಾವತಿಯಾಗದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರವಾಗಿ ನಡೆಸಬೇಕಾಗುತ್ತದೆ ಅಂತಾ ಹಿರಿಯ ಮುಖಂಡರಾದ ವ್ಹಿ. ಪಿ. ಕುಲಕರ್ಣಿಯವರು ಅಧಿಕಾರಿಗಳ ವಿಳಂಬ ನೀತಿ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು.

ಧರಣಿ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಪಂಚಾಯತನ ಸಿಇಒ ರವರಿಗೆ ಜಿಲ್ಲೆಯ 10 ತಾಲೂಕಿನ ಸಿಬ್ಬಂದಿಗಳ ಸಮಸ್ಯೆಗಳ ಕುರಿತು ವಿವರವಾದ ಮಾಹಿತಿಯೊಂದಿಗೆ ದಾಖಲೆ ಸಮೇತವಾಗಿ ವಿವರಣೆ ನೀಡಲಾಯಿತು.

"ಸರ್ ನಮ್ಮ ಪಂಚಾಯತನಲ್ಲಿ ನಮಗ ಪಿಡಿಒ ರೂಪಾಯಿ 3,000 ಪಗಾರ ಕೊಡತಾರ ಆದ್ರ, ರೂಪಾಯಿ 12,122ಕ್ಕೆ ಸಹಿ ತಗೋತಾರ! ಕೇಳಾಕ ಹೋದ್ರ ನಿಮ್ಮ ಪಗಾರ ಇಷ್ಟ ಐತಿ ಅಂತಾ ಬೆದರಿಸಿ, ಕಳಸತಾರ. ಸಂಘದವರು ನಮಗ 12,000 ಪಗಾರ ಐತಿ ಅಂತ ಹೇಳ್ಯಾರ. ಆದ್ರ ನಮ್ಮ ಪಂಚಾಯತಿ ಅಧಿಕಾರಿ ಈ ರೀತಿ ಮೋಸ ಮಾಡಾಕತ್ಯಾನ" ಅಂತಾ ಗೋಕಾಕ ತಾಲೂಕಿನ ಕೌಜಲಗಿ ಗ್ರಾಮ ಪಂಚಾಯತನ ಕಸ ಗುಡಿಸುವ ದಲಿತ ಹೆಣ್ಣುಮಗಳು ಸಿಇಒರವರ ಮುಂದೆ ತನ್ನ ಅಳಲು ತೋಡಿಕೊಂಡಳು.

"ಸರ್ ನಮ್ಮ ಪಂಚಾಯತಿಗೆ ಕಾರ್ಮಿಕ ಇಲಾಖೆ ಅಧಿಕಾರಿ ಬಂದು ನಿಮಗ ಪಗಾರ ಎಷ್ಟೆಷ್ಟ ಕೊಡತಾರ ಅಂತ ಕೇಳಿದ್ರೂ ನಮಗ ಸಿಗುವ ಪಗಾರ 3,000-3,500 ಅಂತಾ ಹೇಳಿದೆವ್ರು, ಕೂಡಲೇ ಅವರು ನಮ್ಮ ಪಂಚಾಯತಿಗೆ ಕೇಸ್ ಹಾಕಿ ಹೋದ್ರು, ನಂತರದಲ್ಲಿ ಕೇಸ್ ನಮ್ಮ ಪರವಾಗಿ ಆಗಿ ಸರಕಾರ ನಿಗಧಿಪಡಿಸಿದ ವೇತನ ಕೊಡಬೇಕೆಂದು ಆದೇಶ ಆತು. ಆದ್ರ ಇದುವರೆಗೆ ನಮಗ ಸರಕಾರ ಹೇಳಿದ ಪಗಾರ ಕೊಟ್ಟಿಲ್ಲ" ಅಂತಾ ರಾಯಭಾಗ ತಾಲೂಕಿನವರು ಹೇಳಿದರು.



"ಅಥಣಿ ತಾಲೂಕಿನ ಕಟಗೇರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಬಡಚಿ ಎಂಬ ಗ್ರಾಮ ಹೊಸದಾಗಿ ಪಂಚಾಯತ ಆಗಿದ್ದು, ನನಗ ಬಡಚಿ ಪಂಚಾಯತಗೆ ವಾಟರ್‌ಮನ್ ಅಂತಾ ವರ್ಗ ಮಾಡ್ಯಾರ ಸರ್, ನಾನು ಐದು ವರ್ಷ ಮೇಲ್ಪಟ್ಟು ಕೆಲಸ ಮಾಡೀನಿ, ಪಿಯುಸಿ ಪಾಸ್ ಆಗೀನಿ, ನನಗೆ ವಸೂಲಿ ಕ್ಲಾರ್ಕ ಅಂತಾ ಬಡ್ತಿ ನೀಡಬೇಕು ಅಂತಾ ಪಂಚಾಯತಿಗೆ ಅರ್ಜಿ ಕೊಟ್ಟೀನಿ, ಇದರ ಭಾಗವಾಗಿ ಜಿಲ್ಲಾ ಪಂಚಾಯನವರೂ ಬಡ್ತಿ ನೀಡಬೇಕೆಂದು ಆದೇಶ ಮಾಡ್ಯಾರ, ಆದರೂ ನನಗೆ ಬಡ್ತಿ ನೀಡದೇ 7 ಕಿಲೋ ಮೀಟರ್ ದೂರದಿಂದ ನೀರು ಬಿಡುವ ಕೆಲಸ ಹಚ್ಯಾರ" ಅಂತಾ ಬಡಚಿ ಗ್ರಾಮದ ವಾಟರ್‌ಮನ ಲಕ್ಷ್ಮೀ ಕೋತ್ ಎಂಬ ಮಹಿಳೆ ದುಃಖದಿಂದ ತನ್ನ ನೋವು ಹಂಚಿಕೊಂಡಳು.

"ಸರ್ ನಮ್ಮ ಅಪ್ಪಾ ತೀರಕೊಂಡಾರ್ ಅದರ ಬದಲಿ (ಅನುಕಂಪದ ಮೇಲೆ) ನನಗೆ ಕೆಲಸಕ್ಕೆ ತಗೊಂಡಾರ, ಆದರ ಗ್ರ್ಯಾಚುಟಿ ಕೊಟ್ಟಿಲ್ಲ. ಎ.ಎಲ್.ಸಿ ರವರು ಗ್ರ್ಯಾಚುಟಿ ಕೊಡಬೇಕೆಂತ ಹೇಳಿ ಆದೇಶ ಮಾಡಿದರೂ ಕೊಟ್ಟಿಲ್ಲ. ಸರ್ ನಂದ ಅನುಮೋದನೆ ಆಗಿಲ್ಲ ಅಂತಾ ನನಗ ಪಗಾರ 2,500 ಕೊಡತಾರ" ಅಂತಾ ಚಿಕ್ಕೋಡಿ ಹಾಗೂ ಬೆಳಗಾವಿ ತಾಲೂಕಿನ ಸಿಬ್ಬಂದಿಗಳು ಸಿಇಒ ಅವರಿಗೆ ವಿವರಿಸಿದರು.

ಸಿಬ್ಬಂದಿಗಳ ಎಲ್ಲ ಸಮಸ್ಯೆಗಳನ್ನು ಆಲಿಸಿದ ಸಿಇಒ ರವರು ಮಾತನಾಡಿ, ಪಂಚಾಯತ ಸಿಬ್ಬಂದಿಗಳು ತಮ್ಮ ಕೆಲಸ ಮಾಡುವುದರ ಜೊತೆಗೆ ಸರಕಾರದ ಕೆಲಸವನ್ನು ಮಾಡುತ್ತೀರಿ, ನಿಮ್ಮ ನೋವು ನನಗೆ ತಿಳಿದಿದೆ. ಯಾರು ಸರಿಯಾಗಿ ಪಗಾರ ಕೊಟ್ಟಿಲ್ಲ, ಅನುಮೋದನೆ ಪ್ರಸ್ತಾವಣೆ ಕಳುಹಿಸಿಲ್ಲ, ಗ್ರ್ಯಾಚುಟಿ ಕೊಟ್ಟಿಲ್ಲ, ಬಡ್ತಿ ಮಾಡುವ ಆದೇಶವಿದ್ದರೂ ಏಕೆ ಪಾಲನೆ ಮಾಡಿಲ್ಲ ಎಂಬುದನ್ನು ವಿವರವಾದ ಮಾಹಿತಿ ತರಿಸಿ 15 ದಿನಗಳಲ್ಲಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡುತ್ತೇನೆಂದು ಹಾಗೂ ವೇತನ ನೀಡದ ಪಿಡಿಒಗಳಿಗೆ ನೋಟೀಸ್ ಜಾರಿ ಮಾಡುವುದಾಗಿ ಹೇಳಿದಾಗ ಧರಣಿ ಸತ್ಯಾಗ್ರಹವನ್ನು ವಾಪಸ್ ಪಡೆಯಲಾಯಿತು.

ಧರಣಿ ಕಾರ್ಯಕ್ರಮದಲ್ಲಿ ಯು. ಎಫ್. ದಂಡಿನ, ಈರಪ್ಪ ಮೀಸಿ, ಕಲ್ಲಪ್ಪ ಮಾದರ, ಬಿ. ಎನ್. ಪಾಟೀಲ, ಟಿ. ಎ. ಭಬಗೌಡ, ಮಾದೇವ ಪೂಜಾರಿ, ಭಾಗಪ್ಪ ಚೌಗಲಾ, ಅನಿಲ ಪಾಟೀಲ ಮತ್ತು ವಿಠ್ಠಲ ಬುತ್ತೇವಾಡಕರ ರವರು ಉಪಸ್ಥಿತರಿದ್ದರು.

ಅನ್‌ಲೇಬಲ್ ಬೀಡಿ ಕಾರ್ಮಿಕರಿಗೆ ನಿವೇಶನ ಹಕ್ಕುಪತ್ರ ವಿತರಣೆ

ರಾಯಲ್ ಬೀಡಿ ಹಾಗೂ ವಿಲಾಸ ಬೀಡಿ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನಲ್ಲಿ ಎರಡು ಬೀಡಿ ಫ್ಯಾಕ್ಟರಿಗಳಲ್ಲಿ ಸುಮಾರು 500 ಜನ ಬೀಡಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು.

ಮಾಲೀಕರು (ನಿಪ್ಪಾಣಿ ಭಾಗದವರು) ಅನಕ್ಷರಸ್ಥ ಬೀಡಿ ಕಾರ್ಮಿಕರ ಹೆಬ್ಬೆಟ್ಟು ಪಡೆದು ಶೋಷಣೆ ಮಾಡುತ್ತಿದ್ದರು. ಮಾಲೀಕನ ಶೋಷಣೆ ವಿರುದ್ಧ ಬೀಡಿ ಕಾರ್ಮಿಕರು ಸಂಘಟನೆ ಕಟ್ಟಿ ನಿರಂತರ ಹೋರಾಟ ಮಾಡಿದ್ದರ ಫಲವಾಗಿ ಇವರಿಗೆ ಲಾಗಬುಕ್, ಕನಿಷ್ಠ ವೇತನ, ಬೋನಸ್ ಹಾಗೂ ಭವಿಷ್ಯ ನಿಧಿ ಜಾರಿ ಮಾಡಲು ಪ್ರಯತ್ನಿಸಿ ಜಯಗಳಿಸಿದೆ.

2002-04 ರಲ್ಲಿ ಹಾಗೂ 2006ರಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿ ಪಿಂಚಣಿ ಪಡೆಯುತ್ತಿದ್ದಾರೆ. ಈ ಮಧ್ಯದಲ್ಲಿ ನಾಲ್ಕು ಎಕರೆ ಭೂಮಿಯನ್ನು ಬೀಡಿ ಕಾರ್ಮಿಕರಿಂದ ವಂತಿಕೆ (ಎಂ.ಜಿ ಬ್ಯಾಂಕ ರಾಮದುರ್ಗ ಇವರಿಂದ ಪ್ರತಿಯೊಬ್ಬರಿಗೆ 5,000 ರಂತೆ ಸಾಲ ಕೊಡಿಸಿ) ಸಂಗ್ರಹಿಸಿ ಜಮೀನು ಖರೀದಿಸಲಾಯಿತು. ಕ್ಯಾಪ್ಟನ್ ಲಕ್ಷ್ಮೀ ಸಹೆಗಲ್ ಗೃಹ ನಿರ್ಮಾಣ ಸಹಕಾರಿ ಸಂಘ ರಚಿಸಿಕೊಂಡು ಖರೀದಿ ಮಾಡಿಕೊಂಡ ಜಮೀನನ್ನು ಸರಕಾರಕ್ಕೆ ವರ್ಗಾವಣೆ ಮಾಡಿ, ಹಕ್ಕು ಪತ್ರ ಪಡೆದು ಕೇಂದ್ರ ಸರಕಾರದ ಯೋಜನೆಯಲ್ಲಿ ರೂ 40,000 ಸಹಾಯಧನ ಪಡೆದು 250 ಜನರೂ ಮನೆ ಕಟ್ಟಿಕೊಳ್ಳುತ್ತಿದ್ದಾರೆ.

ರಾಮದುರ್ಗದಲ್ಲಿ ಅನ್‌ಲೇಬಲ್ ಬೀಡಿ ಕಾರ್ಮಿಕರ ಸಂಖ್ಯೆಯೂ ಇದ್ದು, ಅವರೂ ಸಹ ಬಂದು (2005ರಲ್ಲಿ) ನಮಗೂ ನಿವೇಶನ ಕೊಡಿಸಿ ಅಂತಾ ಕೇಳಿಕೊಂಡಾಗ ಆ ಸಮಯದಲ್ಲಿ ಅವರಿಂದಲೂ ವಂತಿಕೆ ಸಂಗ್ರಹಿಸಿ 1 ಎಕರೆ 13 ಗುಂಟೆ ಜಮೀನು ಖರೀದಿಸಿ ಇವರಿಗೂ ಹಕ್ಕು ಪತ್ರ ನೀಡಲು ಸತತ ನಾಲ್ಕೈದು ವರ್ಷಗಳಿಂದ ಪ್ರಯತ್ನಿಸಿದಾಗ ಕೊನೆಗೂ 21 ಜನವರಿ 2016 ರಂದು ರಾಮದುರ್ಗದ ತಹಶೀಲ್ದಾರರಿಂದ ಹಕ್ಕುಪತ್ರ ವಿತರಿಸಲಾಯಿತು.

ಹಕ್ಕು ಪತ್ರ ವಿತರಣೆ ಮಾಡುವಾಗ ಕಾರ್ಮಿಕರ ಮೊಗದಲ್ಲಿ ಮಂದಹಾಸ ಮೂಡಿದ್ದು ಕಂಡುಬಂತು. "ಭಯ್ಯಾ ಹಮನಾಭೀ ಘರ್ ಭಾಂಧನೇಕೋ ಪೈಸಾ ದಿಲಾವೋ" ಅಂತಾ ನಂತರ ನಡೆದ ಸಭೆಯಲ್ಲಿ ಬಡ ಬೀಡಿ ಕಾರ್ಮಿಕರು ಕೇಳುತ್ತಿದ್ದರು. ಈಗ ತಮ್ಮ ತಮ್ಮ ಜಾಗದ ಹಕ್ಕುಪತ್ರ ಸಿಕ್ಕಿದೆ ಇನ್ನುಮೇಲೆ ಗೃಹ ನಿರ್ಮಾಣ ಸಹಾಯಧನಕ್ಕೆ ಒತ್ತಾಯಿಸೋಣ.



ಸ್ಥಳೀಯ ಚುನಾಯಿತ ಪ್ರತಿನಿಧಿಗಳಾಗಲಿ, ಮುಖಂಡರಾಗಲಿ, ಬೀಡಿ ಕಾರ್ಮಿಕರ ಬೇಡಿಕೆಗೆ ಯಾರು ಸಹಾಯ ಮಾಡಲು ಮುಂದೆ ಬಂದಿಲ್ಲ. ನಿಮ್ಮ ಸಹಕಾರ ಹಾಗೂ ತಾಕತ್ತಿನಿಂದ (ಹೋರಾಟದಿಂದ) ಹಕ್ಕು ಪತ್ರ ಸಿಕ್ಕಿದೆ ಇನ್ನುಮೇಲೆ ಗೃಹ ನಿರ್ಮಾಣದ ಸಹಾಯಧನಕ್ಕೆ ಹೋರಾಟ ಮಾಡೋಣವೆಂದು ಮುಖಂಡರಾದ ವ್ಹಿ. ಪಿ. ಕುಲಕರ್ಣಿ ಮತ್ತು ಗೈಬು ಜೈನೆಖಾನ ಕಾರ್ಮಿಕರಿಗೆ ಅಭಯ ನೀಡಿದರು.

ಬೆಳಗಾವಿ ಜಿಲ್ಲಾಧಿಕಾರಿಗಳ ಕಛೇರಿಯಿಂದ ಹಿಡಿದು, ಬೆಂಗಳೂರಿನ ರಾಜೀವ ಗಾಂಧಿ ಗೃಹ ನಿರ್ಮಾಣ ವಸತಿ ನಿಗಮ ಬೆಂಗಳೂರ ವರೆಗೆ ನಿರಂತರ ಹೋರಾಟ ನಡೆಸಿದ ಪ್ರಯುಕ್ತ ನಿಮಗೆ ಹಕ್ಕುಪತ್ರ ಸಿಕ್ಕಿದೆ ವ್ಹಿ. ಪಿ. ಕುಲಕರ್ಣಿಯವರ ಶ್ರಮದಿಂದ ನಿಮಗೆ ಮನೆ ಸಿಕ್ಕಿದಂತಾಗಿದೆ ಇದನ್ನು ಯಾರು ಪರಭಾರೆ ಮಾಡಬಾರದೆಂದು ಮಾನ್ಯ ತಹಶೀಲ್ದಾರರು ಕಾರ್ಮಿಕರಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದರು.

ವಿಶೇಷ ಗುಂಪಿನ ಯೋಜನೆಯಡಿಯಲ್ಲಿ ಎಲ್ಲಾ ಕಾರ್ಮಿಕರಿಗೂ ಮನೆ ಕಟ್ಟಿಕೊಳ್ಳಲು ಧನ ಸಹಾಯ ಕೊಡಿಸಲಾಗುವುದೆಂದು ಪುರಸಭೆ ಮುಖ್ಯಾಧಿಕಾರಿ ವಿಶ್ವನಾಥ ಸೊಗಲದ ಹಕ್ಕುಪತ್ರ ವಿತರಿಸಿ ಮಾತನಾಡಿದರು. ಈ ಸಭೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ನಾಗಪ್ಪ ಸಂಗೊಳ್ಳಿ, ಇತರರು ಭಾಗವಹಿಸಿದ್ದರು.

ಅತಿಥಿ ಉಪನ್ಯಾಸಕರಿಂದ ಫೆಬ್ರವರಿ 8 ರಿಂದ ಅನಿರ್ದಿಷ್ಟಾವಧಿ ಉಪವಾಸ ಧರಣಿ

ಸರಕಾರಿ ಪ್ರಥಮದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ 14,531 ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆಯನ್ನು ಒದಗಿಸಬೇಕೆಂದು ಒತ್ತಾಯಿಸಿ ಫೆಬ್ರವರಿ 8, 2017 ರಿಂದ ಬೆಳಿಗ್ಗೆ 11ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ (ಫ್ರೀಡಂ ಪಾರ್ಕ್) ವನದಲ್ಲಿ ಅನಿರ್ದಿಷ್ಟಾವಧಿ ಉಪವಾಸ ಧರಣಿಯನ್ನು ಆರಂಭಿಸಲಾಗುವುದು. ಮೊದಲಿಗೆ ಆನಂದ್ ರಾವ್ ಸರ್ಕಲ್‌ನಲ್ಲಿರುವ ಗಾಂಧೀಜಿ ಪ್ರತಿಭೆಗೆ ಮಾಲಾರ್ಪಣೆ ಮಾಡಿ ಅಲ್ಲಿಂದ ರ್‍ಯಾಲಿ ಹೊರಟು ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶ ಗೊಂಡು ಅನಿರ್ದಿಷ್ಟಾವಧಿ ಧರಣಿ ಆರಂಭವಾಗಲಿದೆ. ಈ ಧರಣಿಯನ್ನು ಡಾ. ಬರಗೂರು ರಾಮಚಂದ್ರಪ್ಪ ಸೇರಿದಂತೆ ಪ್ರಗತಿಪರ ಸಾಹಿತಿಗಳು, ವಿಧಾನ ಪರಿಷತ್ ಸದಸ್ಯರುಗಳು ಹಾಗೂ ಪ್ರಗತಿಪರ ಸಂಘಟನೆಗಳ ಮುಖಂಡರು, ಶಿಕ್ಷಣ ಪ್ರೇಮಿಗಳು ನಮ್ಮ ಉಪವಾಸ ಧರಣಿಯನ್ನು ಬೆಂಬಲಿಸಲಿದ್ದಾರೆ.

ಅನಿರ್ದಿಷ್ಟಾವಧಿ ಉಪವಾಸ ಧರಣಿಯಲ್ಲಿ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಗೌರವ ಅಧ್ಯಕ್ಷರಾದ ಬಿ.ರಾಜಶೇಖರಮೂರ್ತಿ, ಕರ್ನಾಟಕ ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀನಿವಾಸಚಾರ್ ಎನ್. ಪ್ರಧಾನ ಕಾರ್ಯದರ್ಶಿಯಾದ ಡಾ. ಮಲ್ಲಿಕಾರ್ಜುನ ಬಿ ಮಾನ್ಪಡೆ ಮತ್ತು ರಾಜ್ಯ ಮುಖಂಡರುಗಳಾದ ವೀರಣ್ಣ, ಫೈಯಾಜ್ ಉಲ್ಲಾ, ವೆಂಕಟೇಶ್, ಹೇಮಲತಾ, ದೀಪಶ್ರೀ, ಸುವರ್ಣಮ್ಮ, ಶರತ್, ಲಕ್ಷ್ಮೀನಾರಾಯಣ ರೆಡ್ಡಿ, ವೆಂಕಟೇಶ್, ಗುಡಿಬಂಡೆ ಗಣೇಶ್, ಆದಿನಾರಾಯಣಪ್ಪ, ಜಗಪ್ಪ ತಳವಾರ್, ದುರ್ಗಪ್ಪ, ನಾಗಣ್ಣ, ಜಗದೀಶ್ ತಂಬಾಕೆ, ಜಗದೀಶ್ ನೂಲಿನವರ್, ಗೋಪಿನಾಥ್, ಶರಣಬಸವ, ಡಾ. ಸುಬ್ರಮಣಿ ಮುಂತಾದ ಜಿಲ್ಲಾ ಪದಾಧಿಕಾರಿಗಳು ಸೇರಿದಂತೆ 200 ಅತಿಥಿ ಉಪನ್ಯಾಸಕರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಉಪವಾಸ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಉಳಿದೆಲ್ಲಾ ಅತಿಥಿ ಉಪನ್ಯಾಸಕರು ಧರಣಿಯಲ್ಲಿರುತ್ತಾರೆ

ಸೇವಾ ಹಿರಿತನ ಮತ್ತು ವಯೋಮಿತಿ ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ವಿಲೀನಗೊಳಿಸಿ ಸೇವಾ ಭದ್ರತೆ ಒದಗಿಸಬೇಕು. (ಕಾನೂನಾತ್ಮಕ ತೊಡಕುಗಳ ನಿರ್ವಾಣೆಗಾಗಿ ನಾಡೋಜ ಡಾ. ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರು ಹಾಗೂ ಸಂಘದ ಪದಾಧಿಕಾರಿ ಸದಸ್ಯರನ್ನೊಳ್ಳಗೊಂಡು ತಜ್ಞರ ಸಮಿತಿಯನ್ನು ರಚಿಸಬೇಕು) ಖಾಯಂ ಉಪನ್ಯಾಸಕರ ನಿಯೋಜನೆ, ವರ್ಗಾವಣೆ ಹಾಗೂ ಹೊಸದಾಗಿ ನೇಮಕವಾಗಿ ಬಂದ ಸಂದರ್ಭದಲ್ಲಿ, ಹಾಲಿ ಇರುವ ಅತಿಥಿ ಉಪನ್ಯಾಸಕರಲ್ಲಿ ಸೇವಾ ಹಿರಿತನ ಮತ್ತು ವಯೋಮಿತಿಯನ್ನು ಪರಿಗಣಿಸಿ ಅವರನ್ನು ಸೇವೆಯಲ್ಲಿ ಮುಂದುವರೆಸಲು ಸಷ್ಟ ಆದೇಶ ಮಾಡಬೇಕು. ಎನ್.ಇ.ಟಿ. ಎಸ್.ಎಲ್.ಇ.ಟಿ ಮತ್ತು ಪಿ.ಎಚ್‌ಡಿ ಪದವಿಗಳಿಗೆ ಸಮಾನವಾಗಿ ಎಂ.ಫಿಲ್ ಪದವಿಯನ್ನು ಪರಿಗಣಿಸಿ ಸಮಾನವೇತನ ನೀಡಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ದೆಹಲಿ, ಹರಿರ್‍ಯಾಣ, ಕೇರಳ, ಆಂಧ್ರ ಪ್ರದೇಶಗಳ ಮಾದರಿಯಲ್ಲಿ ಮಾಸಿಕ ರೂ 25000–00 ವೇತನವನ್ನು ಪ್ರತಿ ತಿಂಗಳು ನೀಡಬೇಕು. ಮಹಿಳಾ ಅತಿಥಿ ಉಪನ್ಯಾಸಕರಿಗೆ ಕನಿಷ್ಠ 3 ತಿಂಗಳ ವೇತನ ಸಹಿತ ಹೆರಿಗೆ ರಜೆ ನೀಡಬೇಕು.

ಬಿ.ರಾಜಶೇಖರಮೂರ್ತಿ



ಡಿವೈಎಫ್ಐ ರಾಷ್ಟ್ರ ಸಮ್ಮೇಳನ ಪ್ರಚಾರದ ಭಾಗವಾಗಿ ಬೈಕ್ ರ್‍ಯಾಲಿ

ಫೆ. 2ರಿಂದ 5ರವರೆಗೆ ಕೇರಳದ ಕೊಚ್ಚಿಯಲ್ಲಿ ಡಿವೈಎಫ್ಐನ 10ನೇ ಅಖಿಲ ಭಾರತ ಯುವಜನ ಸಮ್ಮೇಳನದ ಪ್ರಚಾರದ ಭಾಗವಾಗಿ ಜನವರಿ 29ರಂದು ನಗರದ ಕೂಳೂರಿನಿಂದ ತೊಕ್ಕೊಟ್ಟು ವರೆಗೆ ಯುವಜನರ ಬೈಕ್ ರ್‍ಯಾಲಿ ನಡೆಯಿತು.

ಬೈಕ್ ರ್‍ಯಾಲಿಯ ಉದ್ಘಾಟನೆಯನ್ನು ಡಿವೈಎಫ್ಐನ ಜಿಲ್ಲಾಧ್ಯಕ್ಷರು ಹಾಗೂ ಮಂಗಳೂರು ಮಹಾನಗರ ಪಾಲಿಕೆ ಸದಸ್ಯರು ಆದಂತಹ ದಯಾನಂದ ಶೆಟ್ಟಿಯವರು ಉದ್ಘಾಟಿಸಿ ಮಾತನಾಡುತ್ತಾ, ದೇಶದಲ್ಲಿ ನಡೆಸಲಾಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಶೈಕ್ಷಣಿಕ ಅಸಮಾನತೆ ಹಾಗೂ ದಬ್ಬಾಳಿಕೆಯ ವಿರುದ್ಧ ನವಭಾರತದ ನಿರ್ಮಾಣಕ್ಕಾಗಿ, ಉದ್ಯೋಗ, ಪ್ರಜಾಪ್ರಭುತ್ವ, ಧರ್ಮ ನಿರಪೇಕ್ಷತೆಗಾಗಿ ಹೋರಾಡೋಣ ಎಂಬ ಘೋಷಣೆಯಡಿಯಲ್ಲಿ ರಾಷ್ಟ್ರ ಸಮ್ಮೇಳನವು ನಡೆಯಲಿರುವುದು. ಈ ಸಮ್ಮೇಳನದಲ್ಲಿ ದೇಶದಾದ್ಯಂತದಿಂದ 900ರಷ್ಟು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಅದರಲ್ಲಿ 12ರಷ್ಟು ಪ್ರತಿನಿಧಿಗಳು ಕರ್ನಾಟಕವನ್ನು ಪ್ರತಿನಿಧಿಸಿ ಭಾಗವಹಿಸಲಿರುವರು. ಈ ನಿಟ್ಟಿನಲ್ಲಿ ಕೇರಳದ ಕೊಚ್ಚಿಯಲ್ಲಿ ನಡೆಯುವ ರಾಷ್ಟ್ರ ಸಮ್ಮೇಳನವು ಯುವಜನರ ವಿಚಾರಗಳನ್ನೆತ್ತಿ ಅವುಗಳ ಈಡೇರಿಕೆಗೆ ಮುಂದಿನ ದಿನಗಳಲ್ಲಿ ರಾಜೀರಹಿತ ಹೋರಾಟವನ್ನು ನಡೆಸುವ ಯೋಜನೆಯನ್ನು ರೂಪಿಸಲಿದೆ ಎಂದರು.

ಈ ಸಂದರ್ಭದಲ್ಲಿ ಬೈಕ್ ರ್‍ಯಾಲಿಯ ನೇತೃತ್ವವನ್ನು ವಹಿಸಿದ್ದಂತಹ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ಇಮ್ತಿಯಾಜ್, ಜಿಲ್ಲಾ ಪದಾಧಿಕಾರಿಗಳಾದ ಸಾದಿಕ್, ನವೀನ್ ಕೊಂಚಾಡಿ, ರಫೀಕ್ ಹರೇಕಳ, ಸುನಿಲ್ ತೇವುಲ, ಆಶಾ ಬೋಳೂರು, ಪಮೀಳಾ ಮುಂತಾದವರು ಉಪಸ್ಥಿತರಿದ್ದರು.

ಸಂತೋಷ್ ಬಜಾಲ್

ಕೇಳಿಸಿದ್ದು

ಆಧುನಿಕ ಭಾರತೀಯ ಬರಹಗಾರರು (ನಮ್ಮ ಎಲ್ಲಾ ಭಾಷೆಗಳಲ್ಲಿ) ಜಾತಿ, ವರ್ಣವ್ಯವಸ್ಥೆ, ಅಸ್ಪೃಶ್ಯತೆ, ಸ್ತ್ರೀದ್ವೇಷ ಇವುಗಳ ಪರವಾಗಿರುವ ಬ್ರಾಹ್ಮಣ–ವೈದಿಕ ಪರಂಪರೆಯನ್ನು ಉಗ್ರವಾಗಿ ಖಂಡಿಸಿದ್ದಾರೆ. ತಮ್ಮ ಎಲ್ಲಾ ಕಾದಂಬರಿಗಳಲ್ಲಿ, ಬರಹಗಳಲ್ಲಿ, ಭಾಷಣಗಳಲ್ಲಿ ಈ ಮನುಷ್ಯ ವಿರೋಧಿ ಪರಂಪರೆಯನ್ನು ಸಮರ್ಥಿಸುವ ಕೆಲವೇ ಬರಹಗಾರರಲ್ಲಿ ಭೈರಪ್ಪನವರು ಒಬ್ಬರಾಗಿದ್ದಾರೆ. ಈ ಕಾರಣದಿಂದಾಗಿ ಅವರು ಭಾರತೀಯ ಹಾಗೂ ಕನ್ನಡ ಸಂಸ್ಕೃತಿಗಳನ್ನು ಕುಬ್ಜಗೊಳಿಸಿ, ವಿಕಾರಗೊಳಿಸಿ, ವಿಷಪೂರಿತಗೊಳಿಸುವ ಬರಹಗಾರರಾಗಿದ್ದಾರೆ

ಆರ್.ಎಸ್.ಎಸ್. ಚಿಂತನೆಯ ಹಾಗೂ ದಲಿತ, ಸ್ತ್ರೀ ಹಾಗೂ ಹಿಂದುಳಿದ ಜನಸಮುದಾಯಗಳ ವಿರೋಧ ನಿಲುವಿನ ಸಂಕೇತವಾಗಿರುವ ಭೈರಪ್ಪನವರನ್ನು ಆಹ್ವಾನಿಸಿದ್ದು ಕೇವಲ ರಾಜಕೀಯ ನಿರ್ಧಾರ. ಇದು ಸಾಹಿತ್ಯದ ನಿರ್ಧಾರವಲ್ಲ. ಇದರಲ್ಲಿ ಬಹಳ ಸ್ಪಷ್ಟವಾಗಿಯೇ ಬಿ.ಜೆ.ಪಿ. ಪರವಾಗಿರುವ ಲಿಂಗಾಯತ ಸಮುದಾಯವನ್ನು, ಆ ಸಮುದಾಯದ ನೇತಾರನನ್ನು ಹಾಗೂ ಅಧಿಕಾರದಲ್ಲಿರುವ ಪಕ್ಷವನ್ನು ಓಲೈಸುವ ಉದ್ದೇಶಗಳಿವೆ. ಆದ್ದರಿಂದ ಸಮಾಜವಾದಿ ಚಳುವಳಿ, ರೈತ ಚಳುವಳಿ, ದಲಿತ ಸಂಘರ್ಷ ಸಮಿತಿಯ ಚಳುವಳಿ ಇವೆಲ್ಲವುಗಳ ತಾಯಿನೆಲವಾದ ಶಿವಮೊಗ್ಗೆಯಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನದಲ್ಲಿ ಶ್ರೀ ಎಸ್.ಎಲ್.ಭೈರಪ್ಪನವರು ಉದ್ಘಾಟಕರಾಗಿ ಭಾಗವಹಿಸುವುದನ್ನು ವಿರೋಧಿಸುವುದು ನಮ್ಮೆಲ್ಲರ ನೈತಿಕ ಕರ್ತವ್ಯವಾಗಿದೆ.

– ಪ್ರೊ. ರಾಜೇಂದ್ರ ಚೆನ್ನಿ

(ಡಾ. ಭೈರಪ್ಪನವರನ್ನು ಶಿವಮೊಗ್ಗ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನ ವಿರೋಧಿಸಿ ಹೇಳಿಕೆಯಲ್ಲಿ)

ಸಂಗಾತಿ ನಾಗರಾಜರಾವ್ ಅವರಿಂದ ಪಕ್ಷಕ್ಕೆ 50 ಸಾವಿರ ದೇಣಿಗೆ

ಹರಿಹರದ ಮೈಸೂರು ಕಿರ್ಲೋಸ್ಕರ ಕಾರ್ಖಾನೆಯು ಮುಚ್ಚಿ ಹೋಗಿ ಒಂದು ದಶಕವೇ ಕಳೆಯಿತು. ಹಲವು ದಶಕಗಳ ಕಾಲ ನಿರಂತರ ಕಾರ್ಮಿಕರ ಬದುಕನ್ನು ಉತ್ತಮಗೊಳಿಸಲು ಅಲ್ಲಿನ ಕಾರ್ಮಿಕ ಚಳವಳಿ ಮಾಡಿದ ಕೆಲಸ ಮತ್ತು ಅದು ಕಮ್ಯೂನಿಸ್ಟ ಚಳವಳಿ ನೀಡಿದ ಕೊಡುಗೆ ಅಪಾರ. ಕೈಗಾರಿಕೆ ಮುಚ್ಚಿದ ಪರಿಣಾಮ ಕಾರ್ಮಿಕರು ಮುಂದಿನ ಬದುಕನ್ನು ಕಟ್ಟಿಕೊಳ್ಳಲು ಪಟ್ಟ ಕಷ್ಟಗಳು ಅಷ್ಟಿಷ್ಟಲ್ಲ. ಅಂತಹ ಸವಾಲುಗಳನ್ನು ಮೀರಿಯೂ ಈಗಲೂ ಆದರ್ಶದ ಬದುಕು ಸಾಗಿಸುತ್ತಾ ಚಳುವಳಿ ಮತ್ತು ಪಕ್ಷದ ಬಗ್ಗೆ ಅಭಿಮಾನ ಇಟ್ಟುಕೊಂಡಿರುವ ಹಲವು ಕಾರ್ಮಿಕರು ಸಿಗುತ್ತಾರೆ. ಅಂತಹವರಲ್ಲಿ ಕಿರ್ಲೋಸ್ಕರ ಕಂಪನಿಯ ನಿವೃತ್ತ ಕಾರ್ಮಿಕ ನಾಗರಾಜರಾವ್ ಒಬ್ಬರು.



80 ನೇ ವಯಸ್ಸಿನ ಅಸುಪಾಸಿನಲ್ಲಿರುವ ನಾಗರಾಜರಾವ್ ಈಗಲೂ ಕ್ರಿಯಾಶೀಲವಾಗಿ ಓಡಾಡುತ್ತಿರುವ ಸಂಗಾತಿ. ಪಕ್ಷ ಮತ್ತು ನಮ್ಮ ಸಾಮೂಹಿಕ ಸಂಘಟನೆಗಳನ್ನು ಬೆಳೆಸಲು ತಮ್ಮ ಕೈಲಾದ ಹಣಕಾಸಿನ ನೆರವನ್ನು ಹಲವು ದಶಕಗಳಿಂದ ನೀಡುತ್ತಾ ಬಂದಿರುವ ಇವರು ಯಾವತ್ತೂ ಕಾರ್ಮಿಕ ಸಂಘದಲ್ಲಿ ಪದಾಧಿಕಾರಿಯಾದವರಲ್ಲ. ಇಎಂಎಸ್, ಬಿ.ಟಿ.ಆರ್, ರಾಮಮೂರ್ತಿ, ಜ್ಯೋತಿಬಸು, ಎಂ.ಕೆ ಪಂಧೆ ಮೊದಲಾದ ಹಿರಿಯ ಅಖಿಲ ಭಾರತ ಮುಖಂಡರು ಮತ್ತು ಸೂರಿ, ನಂಜುಡಪ್ಪ, ವಿಜೆಕೆ, ಸ್ಥಳೇಕರ್ ಮೊದಲಾದ ನಾಯಕರ ಭಾಷಣಗಳಿಂದ ಪ್ರಭಾವಿತರಾದ ಅವರು ಎಂತಹ ಸವಾಲಿನ ಸಂದರ್ಭದಲ್ಲೂ ಕಿರ್ಲೋಸ್ಕರ ಕಾರ್ಖಾನೆಯಲ್ಲಿ ಸಿಐಟಿಯು ಧೋರಣೆಯನ್ನು ಜಾರಿ ಮಾಡುವಲ್ಲಿ ದೃಢವಾಗಿ ನಿಂತವರು. ಕಾರ್ಮಿಕ ಚಳುವಳಿಯಲ್ಲಿ ಇತೀಚಿನ ದಿನಗಳಲ್ಲಿ ಉದಾರವಾದಿ ಧೋರಣೆಗಳು ಹೆಚ್ಚಾಗುತ್ತಿರುವ ಬಗ್ಗೆ ಬೇಸರ ವ್ಯಕ್ತಪಡಿಸುವ ಅವರು ಒಂದು ಕ್ರಾಂತಿಕಾರಿ ಕಾರ್ಮಿಕ ಚಳವಳಿಯಿಂದ ಮಾತ್ರವೇ ಒಂದು ಕ್ರಾಂತಿಕಾರಿ ಕಮ್ಯೂನಿಷ್ಟ ಪಕ್ಷವನ್ನು ಕಟ್ಟಲು ಸಾಧ್ಯ ಎಂದು ಧೃಡವಾದ ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಇಂತಹ ಹಿರಿಯ ಸಂಗಾತಿ ಇತ್ತೀಚಿಗೆ ಅನಿವಾರ್ಯವಾಗಿ ದಾವಣಗೆರೆಯಲ್ಲಿದ್ದ ತಮ್ಮ ಸ್ವಂತ ಮನೆ ಮಾರಾಟ ಮಾಡಿ ಬೆಂಗಳೂರಿಗೆ ತಮ್ಮ ವಾಸಸ್ಥಾನ ಬದಲಾಯಿಸಿದರು. ಹಾಗೆ ಹೋಗುವಾಗ ಆದರೆ ದಾವಣಗೆರೆ ಜಿಲ್ಲೆಯಲಿ ಪಕ್ಷದ ಬೆಳವಣಿಗೆಗೆ ಸಹಾಯವಾಗಲೆಂದು ಐವತ್ತು ಸಾವಿರ ರೂಪಾಯಿಗಳನ್ನು ಪಕ್ಷದ ಜಿಲ್ಲಾ ಸಮಿತಿಗೆ ದೇಣಿಗೆಯಾಗಿ ನೀಡಿದ್ದಾರೆ. ಅವರ ಕೊಡುಗೆಯನ್ನ ಕೃತಜ್ಞತೆಯಿಂದ ಸ್ವೀಕರಿಸಿರುವ ಪಕ್ಷವು ಹಿರಿಯ ಸಂಗಾತಿ ಆಶಯದಂತೆ ಜಿಲ್ಲೆಯಲ್ಲಿ ಚಳವಳಿ ಬೆಳೆಸಲು ಈ ಹಣವನ್ನು ಬಳಸುವ ಭರವಸೆ ನೀಡಿದೆ.

ಫೇಸ್ ಬುಕ್‌ನಿಂದ

ಕೋಮು ರಾಜಕಾರಣ ಉಂಟು ಮಾಡಿದ ಅನಾಹುತ ನೋಡಿ. ಈ ಹುಡುಗ ಅಂಕಿತ್ ಪೂಜಾರಿ ಒಂದೇ ರಾತ್ರಿ ಉಡುಪಿಯ ಮಸೀದಿಯೊಂದಕ್ಕೆ ಕಲ್ಲು ಹೊಡೆದಿದ್ದಾನೆ. ದಾರಿಯಲ್ಲಿ ಸಿಕ್ಕಿದ ಆಟೋ ಚಾಲಕನನ್ನು ಮುಸ್ಲಿಂ ಎಂಬ ಕಾರಣಕ್ಕೆ ಕೊಲೆ ಮಾಡಿದ್ದಾನೆ. ಈ ಕೃತ್ಯ ಎಸಗಲು ಹಿಂದು ಜಾಗರಣ ವೇದಿಕೆಯ ಸದಸ್ಯನಾದ ಈತನಿಗೆ ಯಾವ ಕಾರಣವೂ ಇರಲಿಲ್ಲ. ಸಂಘಪರಿವಾರ, ಬಿಜೆಪಿ ತನ್ನ ರಾಜಕಾರಣಕ್ಕಾಗಿ ಹುಟ್ಟುಹಾಕಿದ ಆತ್ಮಘಾತುಕ "ಚಳವಳಿಯ" ಉತ್ಪನ್ನ ಈತ, ಈತನಂತಹ ಉನ್ಮಾದಿ ಯುವಕರು.

ತನ್ನ ಬದುಕಿಗೆ, ಕುಟುಂಬಕ್ಕೆ, ಸಮಸ್ಯೆಗಳಿಗೆ ಯಾವುದೇ ಸಂಬಂಧವಿಲ್ಲದ ತನ್ನಂತದೇ ಕುಟುಂಬದ ಅಪರಿಚಿತನೊಬ್ಬನ ಕೊಲೆ ಮಾಡಲು, ಮಸೀದಿಯೊಂದರ ಕಿಟಕಿ ಗಾಜುಗಳ ಮೇಲೆ ದ್ವೇಷ ಕಾರಲು ಈತನಂತವರನ್ನು ಸಿದ್ದಪಡಿಸಿದ ನಾಯಕರುಗಳು ಎಂ ಪಿ, ಎಮ್ ಎಲ್ ಎ ಆಗಿದ್ದಾರೆ. ಮಂತ್ರಿ, ಮುಖ್ಯಮಂತ್ರಿಗಳೂ ಆಗಿದ್ದಾರೆ. ಕರಾವಳಿಯ ಪ್ರತಿಷ್ಠಿತ ಉದ್ಯಮಿ, ಗುತ್ತಿಗೆದಾರರಾಗಿ ಐಷಾರಾಮಿ ಬದುಕಿನೊಂದಿಗೆ ಮೆರೆಯುತ್ತಿದ್ದಾರೆ. ಅಂಕಿತ್ ಪೂಜಾರಿಯಂತಹವರು ಬೇರೆಯವರನ್ನು ಸಾಯಿಸಿ, ಅವರ ಕುಟುಂಬವನ್ನು ಬೀದಿಪಾಲಾಗಿಸಿ, ಕೊನೆಗೆ ತಾವೂ ಬಲಿಪಶುಗಳಾಗಿ, ತಮ್ಮ ಕುಟುಂಬವನ್ನು ಬೀದಿಗೆ ತಂದು ಸಮಾಜದ ಕಣ್ಣಲ್ಲಿ ಹೀನಾತಿಹೀನ ಕ್ರಿಮಿನಲ್ ಗಳಾಗಿ ಕಸದ ಬುಟ್ಟಿ ಸೇರುತ್ತಾರೆ.


– ಮುನೀರ್ ಕಾಟಿಪಳ್ಳ

ಪ್ರೊ. ಎಂ.ಚಂದ್ರ ಪೂಜಾರಿ

ಪುಸ್ತಕ ಪರಿಚಯ

"ಕರ್ನಾಟಕದ ಮೂರು ಹಳ್ಳಿಗಳ ಸಮಾಜೋ-ಆರ್ಥಿಕ ಸಮೀಕ್ಷೆ"

ತೊಂಬತ್ತರ ನಂತರದ ಮಾರುಕಟ್ಟೆ ಅಭಿವೃದ್ಧಿ ನೀತಿ ಗ್ರಾಮೀಣ ಜನರ ಬದುಕಿನ ಮೇಲೆ ಮಾಡಿದ ಪರಿಣಾಮದ ಬೇರೆ ಬೇರೆ ಮುಖಗಳನ್ನು ಈ ಪುಸ್ತಕದ ಅಧ್ಯಾಯಗಳು ಬಿಚ್ಚಿಡುತ್ತಿವೆ. ಮಾರುಕಟ್ಟೆ ಅಭಿವೃದ್ಧಿ ನೀತಿಯಿಂದ ನಮ್ಮ ಸಮಾಜವೊಂದು ಪಿರಮಿಡ್ ಆಕೃತಿಯಲ್ಲಿ ರೂಪಿತವಾಗಿರುವುದನ್ನು ತೋರಿಸುವ ಹಲವು ಅಧ್ಯಯನಗಳವೆ. ಪಿರಮಿಡ್‌ನ ಮೇಲ್ಭಾಗದಲ್ಲಿರುವ ಅಲ್ಪ ಸಂಖ್ಯೆಯ ಜನರ ಸ್ವಾಧೀನದಲ್ಲಿ ಅತೀ ಹೆಚ್ಚು ಆದಾಯ, ಅಧಿಕಾರ, ಸ್ಥಾನಮಾನ ಕ್ರೋಢೀಕರಣಗೊಂಡರೆ, ಮಧ್ಯದಲ್ಲಿರುವವರಲ್ಲಿ ಮೇಲಿನವರಿಗಿಂತ ಕಡಿಮೆ ಆದಾಯ, ಅಧಿಕಾರ ಕ್ರೋಢೀಕರಣಗೊಂಡಿದೆ. ಪಿರಮಿಡ್ ಬುಡದಲ್ಲಿರುವ ಬಹುತೇಕರು ಏನೇನೂ ಆದಾಯ, ಅಧಿಕಾರಗಳಿಲ್ಲದೆ ಮೂರು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ. ಹೆಚ್ಚು ಕಡಿಮೆ ದೇಶ ಮತ್ತು ಎಲ್ಲ ರಾಜ್ಯಗಳ ಕತೆಯೂ ಇದುವೇ ಆಗಿದೆ. ಇದೇ ಸ್ಥಿತಿ ಗ್ರಾಮೀಣ ಮಟ್ಟದಲ್ಲೂ ಇರುವುದನ್ನು ಈ ಅಧ್ಯಯನ ಸಾಕಷ್ಟು ಸಾಕ್ಷಿಪುರಾವೆಗಳ ಮೂಲಕ ಸಾಬೀತು ಪಡಿಸುತ್ತಿದೆ.



ಐವತ್ತರ ದಶಕದಲ್ಲಿ ಜನರು ಎತ್ತು ಹೋರಿಗಳಿಂದ ಹೊಲ ಉತ್ತು, ಸ್ಥಳೀಯ ಬೀಜ ಬಿತ್ತಿ, ಕೊಟ್ಟಿಗೆ ಗೊಬ್ಬರ ಹಾಕಿ, ಮಳೆ ನೀರನ್ನು ಹರಿಸಿ ತಮ್ಮ ಅವಶ್ಯಕತೆಗಳನ್ನು ಪೂರೈಸಲು ಬೇಕಾಗುವಷ್ಟು ಕೃಷಿ ಮಾಡುತ್ತಿದ್ದರು. ಈ ರೀತಿ ಕೃಷಿ ಮಾಡಿದರೆ ನೀವೂ ಉದ್ಧಾರವಾಗುವುದಿಲ್ಲ, ದೇಶವೂ ಉದ್ಧಾರವಾಗುವುದಿಲ್ಲವೆಂದು ಆಗತಾನೇ ಅಸ್ತಿತ್ವಕ್ಕೆ ಬಂದ ಸರಕಾರ ಹೇಳಲಾರಂಭಿಸಿತು. ಆಧುನಿಕ ಕೃಷಿಯತ್ತ ಹೋಗಲು ಸರಕಾರ ರೈತರನ್ನು ಪುಸಲಾಯಿಸಿತು. ಎತ್ತುಹೋರಿಗಳ ಜಾಗದಲ್ಲಿ ಟ್ರಾಕ್ಟರ್ ಟಿಲ್ಲರ್‌ಗಳು ಬಂದವು, ಕೊಟ್ಟಿಗೆ ಗೊಬ್ಬರದ ಬದಲು ರಾಸಾಯನಿಕ ಗೊಬ್ಬರ ಬಂತು, ಸ್ಥಳೀಯ ಬೀಜದ ಬದಲು ಹೈಬ್ರಿಡ್ ಬೀಜ ಬಂತು, ಮಳೆ ನೀರು ಬದಲು ಕಾಲುವೆ ನೀರು ಬಂತು. ಇದರಿಂದ ಎಲ್ಲ ಕೃಷಿಕರೂ ಉದ್ಧಾರವಾಗಲಿಲ್ಲ, ದೇಶವೂ ಉದ್ಧಾರವಾಗಲಿಲ್ಲ.

ತೊಂಬತ್ತರ ದಶಕದಲ್ಲಿ ಸರಕಾರ ಮತ್ತೊಂದು ಬದಲಾವಣೆ ತಂದಿತು. ಕೃಷಿಕರು ತಮ್ಮ ಊಟಕ್ಕೆ ಸಾಕಾಗುವಷ್ಟು ಬೆಳೆದರೆ ಕೃಷಿಕರೂ ಉದ್ಧಾರವಾಗುವುದಿಲ್ಲ, ದೇಶವೂ ಉದ್ಧಾರವಾಗುವುದಿಲ್ಲ. ಆದುದರಿಂದ ಊಟಕ್ಕೆ ಬೆಳೆಯುವುದನ್ನು ಕಡಿಮೆಗೊಳಿಸಿ ಮಾರುಕಟ್ಟೆಗೆ ಬೆಳೆಯಲು ಆರಂಭಿಸಬೇಕೆಂದು ಸರಕಾರ ತಾಕೀತು ಮಾಡಿತು. ಹೀಗೆ ಕೃಷಿಕರು ಊಟಕ್ಕೆ ಬೆಳೆಯುವುದನ್ನು ಕಡಿಮೆಗೊಳಿಸಿ ಮಾರುಕಟ್ಟೆಗೆ ಬೆಳೆಯಲು ಆರಂಭಿಸಿದರು. ಬೆಳೆದ ಫಸಲನ್ನು ಮಾರುಕಟ್ಟೆಯಲ್ಲಿ ಮಾರಿ ತಮ್ಮ ಅಗತ್ಯಗಳನ್ನು ಮಾರುಕಟ್ಟೆಯಿಂದ ಖರೀದಿಸುವ ಕ್ರಮ ಆರಂಭವಾಯಿತು. ಇದರಿಂದಲೂ ಕೃಷಿಕರೂ ಸಮಸ್ಯೆ ಪರಿಹಾರವಾಗಲಿಲ್ಲ, ದೇಶವೂ ಉದ್ಧಾರವಾಗಲಿಲ್ಲ.

2016ರಲ್ಲಿ ಕೃಷಿಕರು ತಮ್ಮ ಬೆಳೆಗಳನ್ನು ಮಾರಿ ನಗದು ಪಡೆದು ಅದೇ ನಗದನ್ನು ಬಳಸಿಕೊಂಡು ತಮ್ಮ ಅವಶ್ಯಕತೆಗಳನ್ನು ಖರೀದಿಸಿದರೆ ಕೃಷಿಕರೂ ಉದ್ಧಾರವಾಗುವುದಿಲ್ಲ, ದೇಶವೂ ಉದ್ಧಾರವಾಗುವುದಿಲ್ಲವೆಂದು ಸರಕಾರ ಹೇಳಲಾರಂಭಿಸಿತು. ಕೃಷಿಕರು ಮತ್ತು ದೇಶ ಉದ್ಧಾರವಾಗಬೇಕಾದರೆ ಹಿಂದಿನ ನಗದು ವ್ಯವಹಾರವನ್ನು ಬದಿಗಿಟ್ಟು ನಗದುರಹಿತ (ಕ್ಯಾಶ್‌ಲೆಸ್) ವ್ಯವಹಾರದತ್ತ ಕೃಷಿಕರು ಚಲಿಸಬೇಕೆಂದು ಸರಕಾರ ಕಡ್ಡಾಯ ಮಾಡಿತು. ಕೃಷಿಕರು ತಮ್ಮ ಮೊಬೈಲ್ ಬಟನ್ ಒತ್ತಿ ತಮ್ಮ ಖಾತೆಯಲ್ಲಿರುವ ಹಣವನ್ನು ಮತ್ತೊಬ್ಬರ ಖಾತೆಗೆ ವರ್ಗಾಯಿಸಲು ಶುರು ಮಾಡಿದರೆ ದೇಶ ಉದ್ಧಾರವಾಗುತ್ತದೆಯೆಂದು ಸರಕಾರ ಅಟ್ಟದ ಮೇಲಿಂದ ಕಿರುಚಲು ಆರಂಭಿಸಿತು. ಆವಾಗ ಮತ್ತೊಂದು ಚರ್ಚೆ ಶುರುವಾಯಿತು. ಅದೇನೆಂದರೆ ಕ್ಯಾಶ್‌ಲೆಸ್ ವ್ಯವಹಾರ ಮಾಡಬೇಕಾದರೆ ಎಟಿಎಮ್‌ಗಳು ಬೇಕು, ಡೆಬಿಟ್-ಕ್ರೆಡಿಟ್ ಕಾರ್ಡ್‌ಗಳು ಬೇಕು, ಇಂಟರ್‌ನೆಟ್ ಬೇಕು ಎನ್ನುವ ಚರ್ಚೆ ಶುರುವಾಯಿತು. ಇವೆಲ್ಲವೂ ರೈತನ ಖಾತೆಯಲ್ಲಿರುವ ಮೊತ್ತವನ್ನು ಮತ್ತೊಬ್ಬರ ಖಾತೆಗೆ ಅಥವಾ ಮತ್ತೊಬ್ಬರ ಖಾತೆಯಲ್ಲಿರುವ ಹಣವನ್ನು ರೈತನ ಖಾತೆಗೆ ವರ್ಗಾಯಿಸುವ ಅಥವಾ ಹಣದ ಬಳಕೆಯನ್ನು ಸುಲಭ ಮಾಡುವ ಮೂಲಸೌಕರ್ಯಗಳು. ಆದರೆ ರೈತನ ಖಾತೆಯಿಂದ ಮತ್ತೊಬ್ಬರ ಖಾತೆಗೆ ಹಣ ವರ್ಗಾವಣೆಗೊಳ್ಳಬೇಕಾದರೆ ಮೊದಲು ರೈತನ ಖಾತೆಯಲ್ಲಿ ದುಡ್ಡಿರಬೇಕು. ಬ್ಯಾಂಕ್ ಖಾತೆಯಲ್ಲಿ ಡಿಪಾಸಿಟ್ ಇಡುವಷ್ಟು ರೈತನೊಬ್ಬನಿಗೆ ಆದಾಯ ಬರಬೇಕಾದರೆ ಇರಬೇಕಾದ ಕನಿಷ್ಠ ಮೂಲಸೌಕರ್ಯಗಳ ಬಗ್ಗೆ ಸರಕಾರವೂ ಚಿಂತಿಸಲಿಲ್ಲ, ಮಾಧ್ಯಮಗಳೂ ಚರ್ಚಿಸಲಿಲ್ಲ.

ಮೂರು ಹಳ್ಳಿಗಳ ಸಮಾಜೋ-ಆರ್ಥಿಕ ಸಮೀಕ್ಷೆ

ಇಂತಹ ಸಂದರ್ಭದಲ್ಲಿ ರೈತನೊಬ್ಬ ಬ್ಯಾಂಕ್ ಖಾತೆಯಲ್ಲಿ ಡಿಪಾಸಿಟ್ ಇಡುವಷ್ಟು ಗಳಿಸಬೇಕಾದರೆ ಭೂಮಿ ಬೇಕು, ಹಣಕಾಸು ಬೇಕು, ನೀರಾವರಿ ಬೇಕು, ಸಾರಿಗೆ ಸಂಪರ್ಕಗಳು ಬೇಕೆನ್ನುವ ಸಾಮಾನ್ಯ ಸತ್ಯದ ಚರ್ಚೆಯ ಅನಿವಾರ್ಯತೆ ಇತ್ತು. ಇವೆಲ್ಲ ಇದ್ದ ಕೃಷಿಕರು ಮಾತ್ರ ಬ್ಯಾಂಕಲ್ಲಿ ಡಿಪಾಸಿಟ್ ಇಡುವಷ್ಟು ಗಳಿಸುತ್ತಾರೆ, ಇವೆಲ್ಲ ಇಲ್ಲದ ಕೃಷಿಕರ ಸ್ಥಿತಿ ಚಿಂತಾಜನಕವಾಗುತ್ತದೆ ಎನ್ನುವ ಸತ್ಯವನ್ನು ಮಧುರಾ ಸ್ವಾಮಿನಾಥನ್ ಮತ್ತು ಅರಿಂದಮ್ ದಾಸ್ ಸಂಪಾದಿಸಿದ "ಸೋಶಿಯೋ ಎಕನಾಮಿಕ್ ಸರ್ವೇಸ್ ಆಫ್ ಥ್ರೀ ವಿಲೇಜಸ್ ಇನ್ ಕರ್ನಾಟಕ" (ಕರ್ನಾಟಕದ ಮೂರು ಹಳ್ಳಿಗಳಲ್ಲಿ ಸಮಾಜೋ-ಆರ್ಥಿಕ ಸಮೀಕ್ಷೆ) ಎನ್ನುವ ಪುಸ್ತಕ ಪ್ರತಿಪಾದಿಸುತ್ತಿದೆ. ಈ ಪುಸ್ತಕ "ಫೌಂಡೇಶನ್ ಫಾರ್ ಅಗ್ರೇರಿಯನ್ ಸ್ಟಡೀಸ್"(ಎಫ್.ಎ.ಎಸ್.) ಅವರು "ಭಾರತದಲ್ಲಿ ಕೃಷಿ ಸಂಬಂಧಗಳು" ಎನ್ನುವ ಯೋಜನೆಯಡಿಯಲ್ಲಿ ನಡೆಸಿದ ಅಧ್ಯಯನದ ಒಂದು ಭಾಗ. ಈ ಫೌಂಡೇಶನ್ ನ ಸಂಶೋಧಕರು ಭಾರತದ ಹತ್ತು ರಾಜ್ಯಗಳ 25 ಹಳ್ಳಿಗಳನ್ನು ಅಧ್ಯಯನ ಮಾಡಿದ್ದಾರೆ. ಈ ಯೋಜನೆಯ ಭಾಗವಾಗಿ ಕರ್ನಾಟಕದ ಮೂರು- ಮಂಡ್ಯ, ಕೋಲಾರ ಮತ್ತು ಗುಲ್ಬರ್ಗ - ಜಿಲ್ಲೆಗಳ, ಮೂರು ಹಳ್ಳಿಗಳಲ್ಲಿ - ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅಲಭುಜನಹಳ್ಳಿ, ಕೋಲಾರ ಜಿಲ್ಲೆಯ ಕೋಲಾರ ತಾಲ್ಲೂಕಿನ ಸಿರಿಸಂದ್ರ ಹಳ್ಳಿ ಮತ್ತು ಗುಲ್ಬರ್ಗ ಜಿಲ್ಲೆಯ ಗುಲ್ಬರ್ಗ ತಾಲ್ಲೂಕಿನ ಜಾಪುರ್ - 2009ರಲ್ಲಿ ಅಧ್ಯಯನ ನಡೆಸಿದ್ದಾರೆ. ಇದೇ ಹಳ್ಳಿಗಳನ್ನು 2014ರಲ್ಲಿ ಮತ್ತೊಮ್ಮೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದಾರೆ. ಈ ಮೂರು ಹಳ್ಳಿಗಳನ್ನು ಅಧ್ಯಯನ ಮಾಡಿದ ಬಂದ ಫಲಿತವನ್ನು ಮೇಲೆ ಉಲ್ಲೇಖಿಸಿದ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಪುಸ್ತಕದ ವಿವರಗಳನ್ನು ಒಟ್ಟು 13 ಅಧ್ಯಾಯಗಳಲ್ಲಿ ಮಂಡಿಸಿದ್ದಾರೆ. ಇದು ಕೇವಲ ಕೃಷಿಕರಿಗೆ ಸಂಬಂಧಪಟ್ಟ ಸಂಶೋಧನೆಯಲ್ಲ, ಹಳ್ಳಿಯನ್ನು ಇಡಿಯಾಗಿ ಪರಿಗಣಿಸಿ ನಡೆಸಿದ ಅಧ್ಯಯನ. ಕೃಷಿಕರು ಗಳಿಸಬೇಕಾದರೆ ಭೂಮಿ, ನೀರಾವರಿ, ಹಣಕಾಸು ಬೇಕೆನ್ನುವುದನ್ನು ವಿವರಿಸುವುದರ ಜೊತೆಗೆ ಭೂಮಿ ಇಲ್ಲದವರು ದುಡಿದು ಗಳಿಸಬೇಕಾದರೆ ಶಿಕ್ಷಣ, ಆರೋಗ್ಯಗಳು ಬೇಕೆಂದು ಪುಸ್ತಕ ಹೇಳುತ್ತಿದೆ. ಆರೋಗ್ಯದ ಬಗ್ಗೆ ಪ್ರತ್ಯೇಕ ಅಧ್ಯಾಯ ಇಲ್ಲ. ಆದರೆ ಆರೋಗ್ಯವನ್ನು ಪರೋಕ್ಷವಾಗಿ ಪ್ರಭಾವಿಸುವ ಆರ್ಥಿಕ ಸ್ಥಿತಿಗತಿ, ಪಕ್ಕಾ ಮನೆ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳ ಬಗ್ಗೆ ವಿವರಗಳಿವೆ.

ಪುಸ್ತಕದಲ್ಲೇನಿದೆ ?

ಪುಸ್ತಕದ ಹದಿಮೂರು ಅಧ್ಯಾಯಗಳ ವಿಷಯಗಳನ್ನು ಬಾಕ್ಸ್ ನಲ್ಲಿ ಕೊಡಲಾಗಿದೆ.

ಆರಂಭದ ಕೆಲವು ಅಧ್ಯಾಯಗಳು ಕರ್ನಾಟಕದ ಭೂಸಂಬಂಧ, ಬ್ಯಾಂಕಿಂಗ್ ವ್ಯವಸ್ಥೆ, ಅಧ್ಯಯನ ಹಳ್ಳಿಗಳನ್ನು ಪರಿಚಯಿಸುತ್ತಿವೆ. ಅರುವತ್ತು ಎಪ್ಪತ್ತರ ದಶಕಗಳಲ್ಲಿ ಕರ್ನಾಟಕದಲ್ಲಿ ನಡೆದ ಭೂಸುಧಾರಣೆಗಳನ್ನು, ಭೂಸುಧಾರಣೆ ನಂತರದ ಭೂಹಿಡುವಳಿಗಳನ್ನು, ತೊಂಬತ್ತರ ನಂತರ 1974ರ ಭೂಸುಧಾರಣೆ ಕಾಯಿದೆ ಮೇಲೆ ನಡೆದ ತಿದ್ದುಪಡಿಗಳನ್ನು ಚರ್ಚಿಸಲಾಗಿದೆ. ತಿದ್ದುಪಡಿಗಳು ಭೂಮಾಲತ್ವದ ಮಿತಿಯನ್ನು ಹೆಚ್ಚಿಸುವುದರ ಜೊತೆಗೆ ಭೂಮಿ ಪರಭಾರೆಗೆ ಅನುಮತಿ ನೀಡಿದೆ ಮತ್ತು ಕೃಷಿಯೇತರ ಆದಾಯದ ಮಿತಿಯನ್ನು ಐವತ್ತು ಸಾವಿರದಿಂದ 2 ಲಕ್ಷಕ್ಕೆ ನಂತರ 25ಕ್ಕೆ ಲಕ್ಷಕ್ಕೆ ಏರಿಸಲಾಗಿದೆ. ಇದೇ ಅಧ್ಯಾಯದಲ್ಲಿ, ರೈತರ ಆತ್ಮಹತ್ಯೆ 1995-2012ರ ನಡುವೆ ಪ್ರತಿ ವರ್ಷ ಸರಾಸರಿ 2000ದಂತೆ ಕರ್ನಾಟಕದಲ್ಲಿ ಒಟ್ಟು 40 ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದು ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಶೇ.13ರಷ್ಟಿದೆ ಎನ್ನುವ ಅಂಶವನ್ನು ಸ್ಪಷ್ಟ ಪಡಿಸಿದ್ದಾರೆ. ಇದು ಪ್ರಸ್ತುತ ಇಂಗ್ಲೀಷಿನಲ್ಲಿದ್ದು ಕನ್ನಡಕ್ಕೆ ಬರಲೇಬೇಕಾದ ಪುಸ್ತಕ. ಪ್ರಕಾಶಕರಾದ ಎಫ್.ಎ.ಎಸ್. ಇದನ್ನು ಕನ್ನಡದಲ್ಲಿ ಪ್ರಕಟ ಮಾಡುವ ಯೋಜನೆ ಹೊಂದಿದ್ದಾರೆ ಎಂಬುದು ಸಂತೋಷದ ವಿಷಯ.

ಬ್ಯಾಂಕುಗಳ ಲಭ್ಯತೆ

ವಾಣಿಜ್ಯ ಬ್ಯಾಂಕ್‌ಗಳು, ಗ್ರಾಮೀಣ ಬ್ಯಾಂಕ್‌ಗಳು ಮತ್ತು ಸಹಕಾರಿ ಸಂಘಗಳು ಗ್ರಾಮೀಣ ಸಾಲದ ಮುಖ್ಯ ಮೂಲ. ಬ್ಯಾಂಕ್ ಬ್ರಾಂಚ್‌ಗಳ ನೆಲೆಯಲ್ಲಿ ನೋಡಿದರೆ ದಕ್ಷಿಣ ಭಾರತ ಉತ್ತಮ ಸ್ಥಿತಿಯಲ್ಲಿದೆ. ಆದರೆ ಖಾಸಗೀಕರಣ ಪ್ರಕ್ರಿಯೆ ಆರಂಭಗೊಳ್ಳುವುದರೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕ್‌ಗಳ ವಿಸ್ತರಣೆ ಇಲ್ಲೂ ಕಡಿಮೆಯಾಯಿತು. ಇದರಿಂದ ಸಣ್ಣ ಅತೀ ಸಣ್ಣ ಕೃಷಿಕರು, ಸಣ್ಣಪುಟ್ಟ ವ್ಯಾಪಾರ ಉದ್ದಿಮೆಗಳು ಸಾಲ ಪಡೆಯವುದು ಕಷ್ಟವಾಯಿತು. 2005ರ ನಂತರ ಸರಕಾರ ತನ್ನ ಬ್ಯಾಂಕಿಂಗ್ ನೀತಿಯನ್ನು ಸ್ವಲ್ಪ ಬದಲಾಯಿಸಿದ ಕಾರಣ ಗ್ರಾಮೀಣ ಪ್ರದೇಶಗಳಲ್ಲೂ ಬ್ಯಾಂಕ್ ಬ್ರಾಂಚ್‌ಗಳು ಹೆಚ್ಚಾದವು. ಇದರಿಂದಾಗಿ 1995ರ ವೇಳೆಗೆ ಕರ್ನಾಟಕದ ನಗರ ಪ್ರದೇಶಗಳಲ್ಲಿ ಪ್ರತಿ 11,500 ಜನರಿಗೆ ಒಂದು ಬ್ಯಾಂಕ್ ಬ್ರಾಂಚ್ ಇದ್ದರೆ 2013ರ ವೇಳೆಗೆ ಪ್ರತಿ 8500 ಜನರಿಗೆ ಒಂದು ಬ್ರಾಂಚ್ ಇತ್ತು. ಇದೇ ಪ್ರಮಾಣದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬ್ರಾಂಚ್‌ಗಳು ಬೆಳೆಯಲಿಲ್ಲ. 1995ರಲ್ಲಿ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ 10500 ಮಂದಿಗೆ ಒಂದು ಬ್ರಾಂಚ್ ಇದ್ದರೆ 2013ರಲ್ಲಿ ಪ್ರತಿ 9200 ಮಂದಿಗೆ ಒಂದು ಬ್ರಾಂಚ್ ಇದೆ. ಬ್ಯಾಂಕ್ ಬ್ರಾಂಚ್ ಗ್ರಾಮೀಣ ಪ್ರದೇಶಗಳಿಗೆ ಬಂದ ಕೂಡಲೇ ಬ್ಯಾಂಕ್ ಸಾಲ ಗ್ರಾಮೀಣ ಪ್ರದೇಶಕ್ಕೆ ಹರಿಯುತ್ತದೆ ಎನ್ನಲಾಗುವುದಿಲ್ಲ. 1995ರಲ್ಲಿ ಒಟ್ಟು ಬ್ಯಾಂಕ್ ಸಾಲದ ಶೇ.22.5ರಷ್ಟು ಗ್ರಾಮೀಣ ಪ್ರದೇಶಕ್ಕೆ ಹರಿದರೆ 2013ರ ವೇಳೆಗೆ ಇದು ಶೇ.16.3ಕ್ಕೆ ಇಳಿದಿದೆ. ಈ ಅಲ್ಪಸಾಲ ಕೂಡ ಸಣ್ಣಪುಟ್ಟ ಕೃಷಿಕರಿಗೆ ಬಂದಿರುವುದಿಲ್ಲ. ಏಕೆಂದರೆ ಕಾರ್ಪೋರೇಟ್ ಕೃಷಿಕರು, ಕೃಷಿ ಉತ್ಪನ್ನಗಳ ದಾಸ್ತಾನುದಾರರು, ಕೃಷಿಗೆ ರಸಗೊಬ್ಬರ, ಕ್ರಿಮಿನಾಶಕ, ಮೆಶಿನರಿ ಒದಗಿಸುವವರು ಕೂಡ ಕೃಷಿಕರ ವ್ಯಾಖ್ಯಾನದೊಳಗೆ ಬರುತ್ತಾರೆ. ಇದರಿಂದ ಗ್ರಾಮೀಣ ಪ್ರದೇಶಕ್ಕೆ ಹರಿಯುವ ಸಾಲದ ದೊಡ್ಡ ಪ್ರಮಾಣ ಇಂತಹ ಮಧ್ಯವರ್ತಿಗಳ ಪಾಲಾಗುವ ಸಾಧ್ಯತೆ ಕೂಡ ಇದೆ. ಇಡೀ ರಾಜ್ಯದಲ್ಲಿ ಪ್ರತಿ 8300 ಜನರಿಗೆ ಒಂದು ಬ್ಯಾಂಕ್ ಬ್ರಾಂಚ್ ಇದ್ದರೆ ಅಧ್ಯಯನ ಜಿಲ್ಲೆಗಳಲ್ಲಿ - ಮಂಡ್ಯದಲ್ಲಿ ಪ್ರತಿ 11,500 ಜನರಿಗೆ ಒಂದು ಬ್ರಾಂಚ್, ಕೋಲಾರ ಜಿಲ್ಲೆಯಲ್ಲಿ ಪ್ರತಿ 13,200 ಜನರಿಗೆ ಒಂದು ಬ್ರಾಂಚ್ ಮತ್ತು ಗುಲ್ಬರ್ಗ ಜಿಲ್ಲೆಯಲ್ಲಿ ಪ್ರತಿ 14,000 ಜನರಿಗೆ ಒಂದು ಬ್ರಾಂಚ್ ಇದೆ.

ಭೂಒಡೆತನ, ನೀರಾವರಿ, ಸಾಲ

ಕೃಷಿಕರು ನೆಮ್ಮದಿಯ ಬದುಕು ಬಾಳಬೇಕಾದರೆ ಕೃಷಿಯಿಂದ ಆದಾಯ ಬರಬೇಕು. ಕೃಷಿಯಿಂದ ಆದಾಯ ಬರಬೇಕಾದರೆ ಭೂಮಿ ಬೇಕು, ನೀರಾವರಿ ಬೇಕು ಮತ್ತು ಹಣಕಾಸು ಬೇಕು. ರಾಜ್ಯದ ಬಹುತೇಕ ಹಳ್ಳಿಗಳಲ್ಲಿ ಮೂರನೇ ಒಂದರಷ್ಟು ಕುಟುಂಬಗಳು ಭೂರಹಿತ ಕುಟುಂಬಗಳು. ಅಧ್ಯಯನ ಹಳ್ಳಿಗಳಲ್ಲಿ ಅತೀ ಹೆಚ್ಚು ಭೂರಹಿತರು ಗುಲ್ಬರ್ಗ ಜಿಲ್ಲೆಯ ಜಾಪುರ್ ಹಳ್ಳಿಯಲ್ಲಿದ್ದರೆ, ಅತ್ಯಂತ ಕಡಿಮೆ ಭೂರಹಿತರು ಕೋಲಾರ ಜಿಲ್ಲೆಯ ಸಿರಿಸಂದ್ರ ಹಳ್ಳಿಯಲ್ಲಿದ್ದಾರೆ. ಇಡೀ ದೇಶ ಮತ್ತು ರಾಜ್ಯದಲ್ಲಿ ಶೇ.70ಕ್ಕಿಂತಲೂ ಹೆಚ್ಚು ಸಣ್ಣ ಮತ್ತು ಅತೀ ಸಣ್ಣ ಕೃಷಿಕರಿದ್ದರೆ, ಅಧ್ಯಯನ ಹಳ್ಳಿಗಳಲ್ಲಿ ಮಂಡ್ಯದ ಅಲಭುಜನಹಳ್ಳಿಯಲ್ಲಿ ಮಾತ್ರ ರಾಜ್ಯದ ಸರಾಸರಿಗೆ ಹತ್ತಿರವಾಗಿರುವ ಸಣ್ಣ ಮತ್ತು ಅತೀ ಸಣ್ಣ ಕೃಷಿಕರ ಸಂಖ್ಯೆ ಇದೆ. ಉಳಿದ ಎರಡು ಹಳ್ಳಿಗಳಲ್ಲಿ ಕಡಿಮೆ ಸಂಖ್ಯೆಯ ಸಣ್ಣ ಮತ್ತು ಅತೀ ಸಣ್ಣ ರೈತರಿದ್ದಾರೆ. ರಾಜ್ಯದ ಎಲ್ಲ ಭಾಗಗಳಲ್ಲೂ ದೊಡ್ಡ ಭೂಹಿಡುವಳಿಗಳು ಕಡಿಮೆಯಾಗಿವೆ. ಅಧ್ಯಯನ ಹಳ್ಳಿಗಳಲ್ಲೂ ಗುಲ್ಬರ್ಗದ ಜಾಪುರ್ ಹಳ್ಳಿ ಬಿಟ್ಟರೆ ಉಳಿದ ಎರಡೂ ಹಳ್ಳಿಗಳಲ್ಲೂ ದೊಡ್ಡ ಹಿಡುವಳಿದಾರರ ಸಂಖ್ಯೆ ಕಡಿಮೆ ಇದೆ.

ರಾಜ್ಯದ ಮೂರನೇ ಒಂದರಷ್ಟು ಕೃಷಿ ಭೂಮಿ ನೀರಾವರಿ ಹೊಂದಿದೆ. ಮೂರನೇ ಎರಡರಷ್ಟು ಕೃಷಿಕರು ಮಳೆ ಮತ್ತು ಇತರ ನೀರಾವರಿ ನಂಬಿ ಕೃಷಿ ಮಾಡಬೇಕಾಗಿದೆ. ಅಧ್ಯಯನ ಹಳ್ಳಿಗಳಲ್ಲಿ ಮಂಡ್ಯದ ಅಲಭುಜನ ಹಳ್ಳಿಗೆ ಮಾತ್ರ ಕೃಷ್ಣರಾಜಸಾಗರ ಅಣೆಕಟ್ಟು ನೀರಾವರಿ ಇದೆ. ಉಳಿದ ಹಳ್ಳಿಗಳು ಬೋರ್‌ವೆಲ್ ಮತ್ತು ಮಳೆ ನೀರನ್ನು ಅವಲಂಬಿಸಿವೆ. ಅಂದರೆ ಅಲ್ಪಸ್ವಲ್ಪ ಭೂಮಿ ಇದ್ದು ಬೋರ್‌ವೆಲ್ ತೆಗಿಸುವಷ್ಟು ಹಣಕಾಸು ಇರುವವರು ಮಾತ್ರ ಕೃಷಿಯಿಂದ ಅಲ್ಪಸ್ವಲ್ಪ ಗಳಿಸಬಹುದು. ಕೃಷಿಗೆ ನೀರಾವರಿ ಎಷ್ಟು ಮುಖ್ಯವೋ

ಪುಟ 15 ಕ್ಕೆ

ಪುಸ್ತಕದ ಅಧ್ಯಾಯಗಳು

ಕರ್ನಾಟಕದ ಕೃಷಿ ಅರ್ಥಶಾಸ್ತ್ರದ ಬಗ್ಗೆ ಟಿಪ್ಪಣಿ
ಕರ್ನಾಟಕದಲ್ಲಿ ಕೃಷಿ ಬಿಕ್ಕಟ್ಟು ಮತ್ತು ರೈತ ಆತ್ಮಹತ್ಯೆಗಳು
ಸಮೀಕ್ಷಾ ಹಳ್ಳಿಗಳ ಪರಿಚಯ
ಸಮೀಕ್ಷಾ ಹಳ್ಳಿಗಳಲ್ಲಿ
– ಸಮಾಜೋ-ಆರ್ಥಿಕ ವರ್ಗಗಳು
– ಭೂಒಡೆತನ ಮತ್ತು ನೀರಾವರಿ
– ಆಸ್ತಿ ಒಡೆತನದ ಸ್ವರೂಪ
– ಬೆಳೆ ಮಾದರಿ, ಇಳುವರಿ ಮತ್ತು ಆದಾಯ
– ಸಮೀಕ್ಷಾ ಹಳ್ಳಿಗಳ ಸಮೀಕ್ಷೆಯ ಫಲಿತಗಳು
– ಗ್ರಾಮೀಣ ಕೂಲಿ ಕಾರ್ಮಿಕರ ಬಗ್ಗೆ ಸಾಕ್ಷ್ಯ
– ಕುಟುಂಬಗಳ ಆದಾಯ
– ಸಾಕ್ಷರತೆ ಮತ್ತು ಶಿಕ್ಷಣ
ಕರ್ನಾಟಕದ ಗ್ರಾಮೀಣ ಕ್ಷೇತ್ರದಲ್ಲಿ ಬ್ಯಾಂಕಿಂಗ್ ಸ್ಥಿತಿ
ಗ್ರಾಮೀಣ ಕರ್ನಾಟಕದಲ್ಲಿ ಸಾಲಬಾಧೆ
ಮೂರು ಹಳ್ಳಿಗಳ ಒಟ್ಟು ಸಮೀಕ್ಷಾ ಫಲಿತಾಂಶಗಳು

ಟ್ರಂಪ್ ಅಧ್ಯಕ್ಷತೆಯ ವಾಸ್ತವಗಳ ಎದುರು

ವ್ಯಂಗ್ಯಚಿತ್ರ : ಸತೀಶ್ ಆಚಾರ್ಯ





ಅಮೆರಿಕದ ಒಬ್ಬ ವ್ಯೂಹಾತ್ಮಕ ಮಿತ್ರ ಎಂದರೆ ನಿಜವಾಗಿ ಏನು ಎಂಬ ಕಟು ವಾಸ್ತವ ಮೋದಿ ಸರಕಾರಕ್ಕೆ ಎದುರಾಗಿದೆ. ಏಷ್ಯಾದ 'ತಿರುಗಣೆ' ಗೂಟಕ್ಕೆ ತನ್ನನ್ನು ಬಿಗಿದುಕೊಂಡು ಮತ್ತು ಅಮೆರಿಕದ ಭೌಗೋಳಿಕ-ರಾಜಕೀಯ ವ್ಯೂಹದಲ್ಲಿ ಕಿರಿಯ ಪಾಲುದಾರ ಆಗಿರುವುದರಿಂದ ಮೋದಿ ಸರಕಾರ ಈಗ ಟ್ರಂಪ್ ಅಧ್ಯಕ್ಷತೆಯೊಂದಿಗೆ ಹೊಂದಿಕೊಳ್ಳಬೇಕಾಗಿದೆ.

*** ಪ್ರಕಾಶ್ ಕಾರಟ್**

ಡೊನಾಲ್ಡ್ ಟ್ರಂಪ್ ಅವರ ಮೊದಲ ಹತ್ತು ದಿನಗಳ ಅಧಿಕಾರದ ಅವಧಿಯು ಏನಾದರೂ ಸಾಬೀತುಪಡಿಸಿದೆಯೆಂದರೆ ಅದು ಚುನಾವಣೆ ಪ್ರಚಾರದ ವೇಳೆ ನೀಡಿದ್ದ ಆಶ್ವಾಸನೆಗಳಿಗೆ ಟ್ರಂಪ್ ಬದ್ಧನಾಗಿರುತ್ತಾರೆ ಎಂಬುದೇ ಆಗಿದೆ. ಅಧಿಕಾರ ವಹಿಸಿಕೊಂಡಾಗಿನಿಂದ ಅವರು ಹೊರಡಿಸಿದ ಆದೇಶಗಳ ಸರಣಿಯು ಟ್ರಂಪ್‌ರ ವಲಸೆ-ವಿರೋಧಿ ಹಾಗೂ ಇಸ್ಲಾಂವಿರೋಧಿ-ಉನ್ಮಾದ ಹಾಗೂ ಬೃಹತ್ ಉದ್ದಿಮೆಗಳ ಪರವಾದ ಮನೋಭಾವಕ್ಕೆ ಉದಾಹರಣೆಗಳು.

ಅವರ ಮೊದಲ ಕಾರ್ಯಕಾರಿ ಆದೇಶಗಳಲ್ಲಿ ಮೆಕ್ಸಿಕೋ ಗಡಿಯಲ್ಲಿ ಗೋಡೆ ಕಟ್ಟುವುದು ಒಂದು. ಕಾನೂನುಬಾಹಿರ ವಲಸಿಗರನ್ನು ಹೊರಗಿಡಲು ಇದು ಅಗತ್ಯ ಎಂಬುದು ಟ್ರಂಪ್ ವಾದ. ಗೋಡೆ ನಿರ್ಮಾಣಕ್ಕೆ ಮೆಕ್ಸಿಕೋ ಹಣ ಒದಗಿಸಬೇಕು ಎಂದು ಹೇಳುವ ಮೂಲಕ ಟ್ರಂಪ್ ಅವಮಾನದ ಗಾಯದ ಮೇಲೆ ಉಪ್ಪು ಸವರಿದ್ದಾರೆ. ಮೆಕ್ಸಿಕೊ ಅಧ್ಯಕ್ಷರು ಅದಕ್ಕೆ ನಿರಾಕರಿಸಿದ್ದಾರೆ. ಗೋಡೆ ಕಟ್ಟಲಿಕ್ಕಾಗಿ, ಮೆಕ್ಸಿಕೋದಿಂದ ಬರುವ ವಸ್ತುಗಳ ಮೇಲೆ 20 ಶೇಕಡಾ ತೆರಿಗೆ ಹೇರುವುದಾಗಿ ಟ್ರಂಪ್ ಆಡಳಿತ ಈಗ ಬೆದರಿಕೆ ಹಾಕಿದೆ.

ತಡೆಹಿಡಿಯಲಾದ ಎರಡು ಪೈಪ್‌ಲೈನ್ ಯೋಜನೆಗಳನ್ನು - ಕೀಸ್ಟೋನ್ ಎಕ್ಸೆಲ್ ಮತ್ತು ಡಕೋಟಾ ಎಕ್ಸೆಸ್ ಪೈಪ್‌ಲೈನ್- ಮರುಪರಿಶೀಲಿಸಲು ಟ್ರಂಪ್ ಆದೇಶಿಸಿದ್ದಾರೆ. ಇವುಗಳಿಗೆ ಪರಿಸರವಾದಿಗಳು ಮತ್ತು ಮೂಲ ಅಮೆರಿಕನ್ ಬುಡಕಟ್ಟುಗಳಿಂದ ಕಡು ವಿರೋಧ ಎದುರಾಗಿತ್ತು. ಈ ಪೈಪ್‌ಲೈನ್ ಯೋಜನೆಗಳ ಮೇಲಿನ ನಿಷೇಧವನ್ನು ತೆರವುಗೊಳಿಸುವ ಮೂಲಕ ಟ್ರಂಪ್ ಅವರು ಶಕ್ತಿಶಾಲಿ ತೈಲ ಹಾಗೂ ಅನಿಲ ಲಾಬಿಗೆ ಮಣೆ ಹಾಕುವುದು ಸ್ಪಷ್ಟವಾಗಿದೆ.

ಆದರೆ, ಟ್ರಂಪ್ ಹೊರಡಿಸಿದ ಅತ್ಯಂತ ಆಘಾತಕಾರಿ ಆದೇಶವೆಂದರೆ ಏಳು ಮುಸ್ಲಿಂ ದೇಶಗಳಿಂದ ಜನರು ಅಮೆರಿಕ ಪ್ರವೇಶಿಸುವುದರ ಮೇಲೆ ನಿರ್ಬಂಧ ಹೇರಿರುವುದು. ಇರಾನ್, ಇರಾಕ್, ಸಿರಿಯಾ, ಸುಡಾನ್, ಲಿಬ್ಯಾ, ಯೆಮೆನ್ ಮತ್ತು ಸೊಮಾಲಿಯಾಗಳ ನಾಗರಿಕರು, ಅವರಲ್ಲಿ ಕಾನೂನುಬದ್ಧ ವಿಸಾ ಇದ್ದರೂ, 90 ದಿನ ಕಾಲ ಅಮೆರಿಕ ಪ್ರವೇಶಿಸುವುದನ್ನು ನಿಷೇಧಿಸಲಾಗಿದೆ. 120 ದಿನಗಳ ಕಾಲ ನಿರಾಶ್ರಿತರನ್ನು ಸೇರಿಸಿಕೊಳ್ಳದಿರುವಂತೆಯೂ ಈ ಆಡಳಿತಾತ್ಮಕ ಆದೇಶ ಸೂಚಿಸಿದೆ. ಅಲ್ಲದೆ ಸಿರಿಯಾ ನಿರಾಶ್ರಿತರನ್ನು ಸೇರಿಸಿಕೊಳ್ಳುವುದರ ಮೇಲೆ ಅನಿರ್ದಿಷ್ಟಾವಧಿಯ ನಿರ್ಬಂಧ ವಿಧಿಸಲಾಗಿದೆ. ಅದೇ ಹೊತ್ತಿಗೆ, ಇರಾಕ್ ಮತ್ತು ಸಿರಿಯಾದ ಕ್ರೈಸ್ತ ನಿರಾಶ್ರಿತರು ಅಮೆರಿಕ ಪ್ರವೇಶಿಸಲು ಅವಕಾಶ ನೀಡಲಾಗುವುದು ಎಂದು ಎಂದು ಶ್ವೇತಭವನ ಸ್ಪಷ್ಟಪಡಿಸಿದೆ. ಕಾನೂನುಸಮ್ಮತ ವಿಸಾಗಳೊಂದಿಗೆ ಈ ದೇಶಗಳಿಂದ ಬಂದಿದ್ದ ನೂರಾರು ಜನರನ್ನು ಅಮೆರಿಕದ ವಿಮಾನ ನಿಲ್ದಾಣಗಳಲ್ಲಿ ತಡೆದು ನಿಲ್ಲಿಸಲಾಗಿದೆ.

ಈ ನಗ್ನ ಮುಸ್ಲಿಂ-ವಿರೋಧಿ ಕ್ರಮಕ್ಕೆ ಜಗತ್ತಿನಾದ್ಯಂತ ಆಕ್ರೋಶ ವ್ಯಕ್ತವಾಗಿದೆ. ಅಮೆರಿಕದ ಯುರೋಪಿಯನ್ ಮಿತ್ರರಾದ ಜರ್ಮನಿ ಮತ್ತು ಫ್ರಾನ್ಸ್ ಈ ಕ್ರಮವನ್ನು ಟೀಕಿಸಿವೆ. ಮೆರಿಕಾದೊಳಗೂ ಈ ನಿಷೇಧವು ಅಸಂವಿಧಾನಿಕ ಮತ್ತು ಅಮೆರಿಕದ್ದಲ್ಲದ (ಅಮೆರಿಕ ಜಾಯಮಾನಕ್ಕೆ ಹೊರತಾದ) ಕ್ರಮ ಎಂದು ಖಂಡಿಸಿ ಸಾವಿರಾರು ಜನರು ಪ್ರಮುಖ ನಗರಗಳ ವಿಮಾನ ನಿಲ್ದಾಣಗಳ ಹೊರಗೆ ಪ್ರತಿಭಟನೆಗಳನ್ನು ನಡೆಸಿದ್ದಾರೆ.

ವಿರೋಧಾಭಾಸವೆನ್ನುವಂತೆ ಐಎಸ್‌ಐಎಸ್ (ಐಸಿಸ್) ಈ ಕ್ರಮವನ್ನು ಸ್ವಾಗತಿಸಿದೆ. ತನ್ನ ದೇಶದಲ್ಲಿ ಮುಸ್ಲಿಮರು ಬಾಳುವುದನ್ನು ಅಮೆರಿಕ ಸಹಿಸುವುದಿಲ್ಲ ಎಂಬ ತನ್ನ ವಾದವನ್ನು ಈ ಕ್ರಮ ಸಾಬೀತುಪಡಿಸಿದೆ ಎಂಬುದು ಐಸಿಸ್ ಅಂಬೋಣವಾಗಿದೆ. ಅಮೆರಿಕ ಅಧ್ಯಕ್ಷರ ಈ ಮುಸ್ಲಿಂ-ವಿರೋಧಿ ನಿಲವು ಜಿಹಾದಿ ಮತ್ತು ಉಗ್ರಗಾಮಿಗಳ ಶಕ್ತಿಗಳಿಗೆ ಗ್ರಾಸವಾಗುತ್ತದಷ್ಟೇ.

'ಅಮೆರಿಕ ಮೊದಲು' ಎಂಬ ತಮ್ಮ ನೀತಿಯನ್ನೂ ಟ್ರಂಪ್ ಕ್ರಿಯೆಗಿಳಿಸುತ್ತಿದ್ದಾರೆ. ಅವರ ಚುನಾವಣೆ ಪ್ರಚಾರದ ವೇಳೆ ನೀಡಿದ ಆಶ್ವಾಸನೆಗಳಂತೆ, ಟ್ರಾನ್ಸ್ ಪೆಸಿಫಿಕ್ ಸಹಭಾಗಿತ್ವ (ಟಿಪಿಪಿ)ದಿಂದ ಅಮೆರಿಕ ಹಿಂದೆ ಸರಿದಿದೆ. ಟಿಪಿಪಿ 12 ದೇಶಗಳ ವಾಣಿಜ್ಯ ಒಡಂಬಡಿಕೆಯಾಗಿದ್ದು ಈ 12 ದೇಶಗಳಲ್ಲಿ ಜಪಾನ್, ಆಸ್ಟ್ರೇಲಿಯಾ ಮತ್ತು ಆಸಿಯಾನ್ ದೇಶಗಳು ಒಳಗೊಂಡಿವೆ. ಚೀನಾವನ್ನು ಹೊರಗಿಡುವ ಮತ್ತು ನಿಯಂತ್ರಿಸುವ ಬಹಿರಂಗ' ಉದ್ದೇಶದಿಂದ ಬರಾಕ್ ಒಬಾಮಾ ಆಡಳಿತ ಈ ಒಪ್ಪಂದ ಮಾಡಿಕೊಂಡಿತ್ತು. ಟಿಪಿಪಿ ಮತ್ತು ಯುರೋಪಿಯನ್ ಒಕ್ಕೂಟ ಹಾಗೂ ಅಮೆರಿಕ ನಡುವಣ ಟ್ರಾನ್ಸ್‌ಅಟ್ಲಾಂಟಿಕ್ ವಾಣಿಜ್ಯ ಮತ್ತು ಹೂಡಿಕೆ ಸಹಭಾಗಿತ್ವ (ಟಿಟಿಐಪಿ) ಇವು ಸಂಬಂಧಪಟ್ಟ ದೇಶಗಳ ರಾಷ್ಟ್ರೀಯ ಸಾರ್ವಭೌಮತ್ವದ ಮೇಲೆ ಸವಾರಿ ಮಾಡಿ ಕಾರ್ಪೊರೇಟ್ ಶಕ್ತಿ ಹಾಗೂ ಹಣಕಾಸು ಬಂಡವಾಳ ಮೇಲುಗೈ ಪಡೆಯುವ ಸಾಧ್ಯತೆಯನ್ನು ಹೆಚ್ಚಿಸುತ್ತಿತ್ತು. ಕಾರ್ಪೊರೇಟ್ ಕಂಪೆನಿಗಳು ಸರಕಾರಗಳಿಗೆ ನಿರ್ದೇಶನ ನೀಡಲು ಅವಕಾಶ ಕಲ್ಪಿಸುವ ಮೂಲಕ ಮತ್ತು ಅವುಗಳ ಅಂದರೆ ಕಂಪೆನಿಗಳ ಹೂಡಿಕೆಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾದರೆ ಅಥವಾ ಪ್ರತಿಕೂಲ ಪರಿಣಾಮ ಉಂಟಾದರೆ ಅದಕ್ಕೆ ಆ ದೇಶದ ಸರಕಾರವನ್ನು ಕಾನೂನು ಪ್ರಕಾರ ಹೊಣೆ ಮಾಡುವ ಮೂಲಕ ಆ ರೀತಿ ಮಾಡಲು ಇದು ಅನುವು ಮಾಡಿಕೊಟ್ಟಿದೆ.

ಟಿಪಿಪಿ ರದ್ದತಿಯು ಅಮೆರಿಕದ ಒಂದು ಹಣಕಾಸು ಮತ್ತು ಕಾರ್ಪೊರೇಟ್ ಹಿತಗಳಿಗೆ ಅನುಗುಣವಾಗಿ ಇಲ್ಲದಿದ್ದರೂ ಟ್ರಂಪ್ ಅವರಿಗೆ ತೆರಿಗೆ ದರಗಳಲ್ಲಿ ಇಳಿಕೆ ಹಾಗೂ ಇತರ ರಿಯಾಯ್ತಿಗಳ ಭಾರೀ ಕೊಡುಗೆಗಳ ಆಕರ್ಷಣೆಯನ್ನು ಮುಂದೊಡ್ಡಿದ್ದಾರೆ. ಕಾರ್ಪೊರೇಟ್ ತೆರಿಗೆಯನ್ನು ಈಗಿರುವ 35 ಶೇಕಡಾದಿಂದ 15-20 ಶೇಕಡಾಕ್ಕೆ ಇಳಿಸುವ ತನ್ನ ಚುನಾವಣೆ ಪ್ರಚಾರದ ಭರವಸೆಗೆ ಬದ್ಧನಾಗಿರುವುದಾಗಿ ಸಿಇಓಗಳ ಸಭೆಯೊಂದರಲ್ಲಿ ಟ್ರಂಪ್ ಹೇಳಿದ್ದಾರೆ.

ಈ ಎಲ್ಲಾ ಆಡಳಿತಾತ್ಮಕ ಆದೇಶಗಳನ್ನು ಮೋದಿ ಸರಕಾರಕ್ಕೆ ಒಬ್ಬ ಮೂಕ ಪ್ರೇಕ್ಷಕನಾಗಿ ನೋಡಲು ಸಾಧ್ಯವಾಗಿದೆ. ನರೇಂದ್ರ ಮೋದಿ ಮತ್ತು ಬಿಜೆಪಿ ಟ್ರಂಪ್ ಗೆಲುವನ್ನು ಸ್ವಾಗತಿಸಿದ್ದರು. ಏಕೆಂದರೆ ಆತನಲ್ಲಿ ಒಬ್ಬ ರಾಜಕೀಯ ಹಾಗೂ ಸೈದ್ಧಾಂತಿಕ ಆತ್ಮೀಯನನ್ನು ಅವರು ಕಂಡಿದ್ದಾರೆ. ವಿಶೇಷವಾಗಿ ಟ್ರಂಪ್‌ರ ಮುಸ್ಲಿಂ-ವಿರೋಧಿ ಧೋರಣೆ ಇವರಿಗೆ ಆಕರ್ಷಕವಾಗಿದೆ.

ಆದರೆ, ಟ್ರಂಪ್ ಆಡಳಿತದ ತೀರಾ ಇತ್ತೀಚಿನ ಕ್ರಮವೊಂದನ್ನು ಭಾರತದಲ್ಲಿ ತೀರಾ ಹತಾಶೆ ಹಾಗೂ ಆತಂಕದಿಂದ ಗಮನಿಸಲಾಗಿದೆ. ಎಚ್1ಬಿ ವಿಸಾಗಳನ್ನು ನಿರ್ಬಂಧಿಸುವ ಹಾಗೂ ಭಾರತೀಯರು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗ ಅರಸಿ ಅಮೆರಿಕ್ಕೆ ಹೋಗುವುದನ್ನು ತಡೆಯುವ ಉದ್ದೇಶವನ್ನು ಟ್ರಂಪ್ ಆಡಳಿತ ಹೊರಗೆಡಹಿದೆ. ಇದರಿಂದಾಗಿ ಭಾರತದ ಐಟಿ ಶೇರುಗಳು ಕುಸಿದಿದ್ದು ಐಟಿ ಕ್ಷೇತ್ರದ ಐದು ಪ್ರಮುಖ ಕಂಪೆನಿಗಳು 33,000 ಕೋಟಿ ರೂಪಾಯಿ ಮಾರುಕಟ್ಟೆ ಮೌಲ್ಯವನ್ನು ಕಳಕೊಂಡಿವೆ.

ಅಮೆರಿಕದ ಒಬ್ಬ ವ್ಯೂಹಾತ್ಮಕ ಮಿತ್ರ ಎಂದರೆ ನಿಜವಾಗಿ ಏನು ಎಂಬ ಕಟು ವಾಸ್ತವ ಮೋದಿ ಸರಕಾಕ್ಕೆ ಎದುರಾಗಿದೆ. ಹಿಂದಿನ ಅಧ್ಯಕ್ಷ ಒಬಾಮಾ ವರ್ಣಿಸಿದಂತೆ ಏಷ್ಯಾದ 'ತಿರುಗಣೆ' ಗೂಟಕ್ಕೆ ತನ್ನನ್ನು ಬಿಗಿದುಕೊಂಡು ಮತ್ತು ಅಮೆರಿಕದ ಭೌಗೋಳಿಕ-ರಾಜಕೀಯ ವ್ಯೂಹದಲ್ಲಿ ಕಿರಿಯ ಪಾಲುದಾರ ಆಗಿರುವುದರಿಂದ ಮೋದಿ ಸರಕಾರ ಈಗ ಟ್ರಂಪ್ ಅಧ್ಯಕ್ಷತೆಯೊಂದಿಗೆ ಹೊಂದಿಕೊಳ್ಳಬೇಕಾಗಿದೆ. ಈ ಟ್ರಂಪ್‌ಗಂತೂ ಒಬಾಮಾ ಆಡಳಿತದ ವ್ಯೂಹಾತ್ಮಕ ದೃಷ್ಟಿಕೋನದ ಬಗ್ಗೆ ವ್ಯವಧಾನವಿಲ್ಲ. . ಸ್ವರಕ್ಷಣಾವಾದಿ ಹಾಗೂ ಅತಿ-ರಾಷ್ಟ್ರವಾದಿ ಟ್ರಂಪ್ ಆಡಳಿತ ಈ ವಿಚಾರದಲ್ಲಿ ಭಾರತದ ಕಾಳಜಿಗಳಿಗೆ ಹೆಚ್ಚು ಗಮನ ನೀಡುವುದಿಲ್ಲ.

ಭಾರತ ತನ್ನ ವಿದೇಶಾಂಗ ನೀತಿಯನ್ನು ಬಹುಮುಖಿಯಾಗಿಸಲು ಮತ್ತು ಜಗತ್ತಿನಲ್ಲಿ ಮೂಡಿ ಬರುತ್ತಿರುವ ಬಹುದೇಶೀಯ ಚೌಕಟ್ಟುಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಶಕ್ತಗೊಳ್ಳಬೇಕಾಗಿದೆ. ಆಸಿಯಾನ್ ದೇಶಗಳು ಮತ್ತು ಆಸ್ಟ್ರೇಲಿಯಾ, ಚೀನಾ, ಜಪಾನ್, ದಕ್ಷಿಣ ಕೊರಿಯಾ ಮತ್ತು ನ್ಯೂಝಿಲ್ಯಾಂಡ್ ಮತ್ತು ಭಾರತ ಒಳಗೊಂಡ 'ಪ್ರಾದೇಶಿಕ ಸಮಗ್ರ ಆರ್ಥಿಕ ಭಾಗೀದಾರಿಕೆ'(ರೀಜನಲ್ ಕಾಂಪ್ರಹೆನ್ಸಿವ್ ಇಕನಾಮಿಕ್ ಪಾರ್ಟ್‌ನರ್‌ಶಿಪ್ -ಆರ್‌ಸಿಇಪಿ) ಆ ಪೈಕಿ ಪ್ರಮುಖವಾದುದು. ಈ ಪ್ರಸ್ತಾವಿತ ಮುಕ್ತ ವಾಣಿಜ್ಯ ಒಡಂಬಡಿಕೆಯು ಅಮೆರಿಕವನ್ನು ಒಳಗೊಂಡಿರುವುದಿಲ್ಲ. ಬ್ರಿಕ್ಸ್ ಮತ್ತು 'ಷಾಂಘಾಯ್ ಸಹಕಾರ ಸಂಘಟನೆ'ಯಲ್ಲಿ ಕೂಡ ಭಾರತ ತನ್ನ ಪಾತ್ರವನ್ನು ಹೆಚ್ಚಿಸಬೇಕು. ಚೀನಾ ಮುಂದಿಟ್ಟಿರುವ 'ಒನ್ ಬೆಲ್ಟ್, ಒನ್ ರೋಡ್' (ಒಂದು ಪಟ್ಟಿ, ಒಂದು ರಸ್ತೆ)ಯೋಜನೆಗೆ ತನ್ನ ನಕಾರಾತ್ಮಕ ನಿಲುವನ್ನು ಭಾರತ ಕೈಬಿಡಬೇಕು.

ನಮ್ಮ ಆರ್ಥಿಕ ಮತ್ತು ವ್ಯೂಹಾತ್ಮಕ ಸಂಬಂಧಗಳನ್ನು ಬಹುಮುಖಿಯಾಗಿಸುವ ಮತ್ತು ಬಹುದೇಶೀಯ ವೇದಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕವೇ ಭಾರತ ತನ್ನ ವ್ಯೂಹಾತ್ಮಕ ಸ್ವಾಯತ್ತತೆ ಹಾಗೂ ವಿದೇಶ ನೀತಿಯ ಸ್ವತಂತ್ರ ಆಧಾರವನ್ನು ಮತ್ತೆ ಗಳಸಲು ಸಾಧ್ಯ. ಆದರೆ ಅಮೆರಿಕ ಕುರಿತ ತನ್ನ ಗೀಳನ್ನು ಮೋದಿ ಕೈಬಿಡಬಲ್ಲರೇ ಹಾಗೂ ತನ್ನ ನಿಲುವನ್ನು ಮರುರೂಪಿಸಿಯಾರೇ ಎನ್ನುವುದೇ ದೊಡ್ಡ ಪ್ರಶ್ನೆ.

ಅನು: ವಿಶ್ವ



ವ್ಯಂಗ್ಯಚಿತ್ರ: ಅಜಿತ್ ನೈನನ್, ಟೈಮ್ಸ್ ಆಫ್ ಇಂಡಿಯ

ನಮ್ಮ ಆರ್ಥಿಕ ಮತ್ತು ವ್ಯೂಹಾತ್ಮಕ ಸಂಬಂಧಗಳನ್ನು ಬಹುಮುಖಿಯಾಗಿಸುವ ಮತ್ತು ಬಹುದೇಶೀಯ ವೇದಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕವೇ ಭಾರತ ತನ್ನ ವ್ಯೂಹಾತ್ಮಕ ಸ್ವಾಯತ್ತತೆ ಹಾಗೂ ವಿದೇಶ ನೀತಿಯ ಸ್ವತಂತ್ರ ಆಧಾರವನ್ನು ಮತ್ತೆ ಗಳಸಲು ಸಾಧ್ಯ. ಆದರೆ ಅಮೆರಿಕ ಕುರಿತ ತನ್ನ ಗೀಳನ್ನು ಮೋದಿ ಕೈಬಿಡಬಲ್ಲರೇ ಹಾಗೂ ತನ್ನ ನಿಲುವನ್ನು ಮರುರೂಪಿಸಿಯಾರೇ ಎನ್ನುವುದೇ ದೊಡ್ಡ ಪ್ರಶ್ನೆ.

ಕನಿಷ್ಟ ಕೂಲಿಗಾಗಿ ಕಾರ್ಮಿಕರ ವಿಜಯಿ 'ಅಹೋರಾತ್ರಿ' ಹೋರಾಟ...





ಲಿಂಗರಾಜು

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು) ಜನವರಿ 31 ರಿಂದ ಪ್ರಮುಖ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಅನಿರ್ದಿಷ್ಟ ಅಹೋರಾತ್ರಿ ಹೋರಾಟವನ್ನು ಕಾರ್ಮಿಕರು ನಡೆಸಿದರು. ನಗರದ ಸಂಗೊಳ್ಳಿರಾಯಣ್ಣ ರೈಲ್ವೆ ನಿಲ್ದಾಣದಿಂದ ಆರಂಭಗೊಂಡ ಕಾರ್ಮಿಕರ ರ್‍ಯಾಲಿ ಫ್ರೀಡಂ ಪಾರ್ಕಿನಲ್ಲಿ ಸಮಾವೇಶಗೊಂಡಿತು. 30 ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರ ಬೃಹತ್ ರ್‍ಯಾಲಿ ನಡೆಸಿದರು.

ಕಾರ್ಮಿಕರ ಬೃಹತ್ ರ್‍ಯಾಲಿಯಲ್ಲಿ ಅಂಗನವಾಡಿ ನೌಕರರು, ಅಕ್ಷರ ದಾಸೋಹ ನೌಕರರು, ಆಶಾ, ಗ್ರಾಮ ಪಂಚಾಯತ್ ನೌಕರರು, ಹಮಾಲಿ ನೌಕರರು, ಮುನ್ಸಿಪಲ್ ಕಾರ್ಮಿಕರು, ಕಟ್ಟಡ ನಿರ್ಮಾಣ ಕಾರ್ಮಿಕರು, ಸಾರಿಗೆ ನೌಕರರು, ಆಟೋ ಚಾಲಕರು, ಕೈಗಾರಿಕಾ ಕಾರ್ಮಿಕರು, ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು, ವಿದ್ಯುತ್ ಕಾರ್ಮಿಕರು, ವಿವಿಧ ಕೈಗಾರಿಕೆಗಳ ಗುತ್ತಿಗೆ ಕಾರ್ಮಿಕರು, ಬೀಡಿ ಕಾರ್ಮಿಕರು, ಮನೆ ಕೆಲಸಗಾರರು, ಎಲ್ಐಸಿ ಏಜೆಂಟ್‌ರು, ಔಷದ ಮಾರಾಟ ಪ್ರತಿನಿಧಿಗಳು ವಿತರಕರು, ಹೀಗೆ ವಿವಿಧ ವಲಯಗಳ ಕಾರ್ಮಿಕರು ರಾಜ್ಯದ ಮೂಲೆ ಮೂಲೆಗಳಿಂದ ಆಗಮಿಸಿ ರಾಜಧಾನಿಯನ್ನು ಸೇರಿದ ಜನ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ಘೋಷಣೆಗಳನ್ನು ಕೂಗಿದರು.

ಈ ಹಿಂದೆ ದಿನಾಂಕ 2014 ಜನವರಿ 20 ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅವರು ನೀಡಿದ್ದ ನಿರ್ದೇಶನಗಳು ಜಾರಿಗೆ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಕಳೆದ ವರ್ಷ ಹೋರಾಟ ನಡೆಸಿದಾಗಲೂ ಮಾನ್ಯ ಕಾರ್ಮಿಕ ಸಚಿವರು ಕೆಲವು ಪ್ರಶ್ನೆಗಳನ್ನು ಕುರಿತು ನಮ್ಮ ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರೂ ಪ್ರಯೋಜನವಾಗಿಲ್ಲ ಅಂತೆಯೆ ಈ ಹಿಂದೆ ದಿನಾಂಕ 2016 ಏಪ್ರಿಲ್ 12 ರಂದು ತಮ್ಮ ಸಮುಖದಲ್ಲಿ ನಿಗದಿಯಾಗಿದ್ದರೂ ಸಭೆ ನಡೆದಿರುವುದಿಲ್ಲ. ಹೀಗಾಗಿ ರಾಜ್ಯದ ಕಾರ್ಮಿಕ ವರ್ಗದ ಹಲವು ಗಂಭೀರ ಸಮಸ್ಯೆಗಳು ಇತ್ಯರ್ಥವಾಗದೇ ಹಾಗೇ ಉಳಿದಿವೆ ಮಧ್ಯಪ್ರವೇಶ ಅಗತ್ಯವಿದೆ ಎಂಬುದು ಹೋರಾಟದ ಪ್ರಮುಖ ಒತ್ತಾಯವಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸಮಸ್ಯೆಗಳ ಇತ್ಯರ್ಥಕ್ಕಾಗಿ ಆಗ್ರಹಿಸಿ ಈ ಹೋರಾಟ ಹಮ್ಮಿಕೊಳ್ಳಲಾಗಿತ್ತು.

ಸಿಐಟಿಯು ರಾಜ್ಯ ಅಧ್ಯಕ್ಷೆ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಹಿರಿಯ ಉಪಾಧ್ಯಕ್ಷರಾದ ವಿಜೆಕೆ ನಾಯರ್, ಆರ್. ಶ್ರೀನಿವಾಸ್, ಕೆ. ಶಂಕರ್, ಎಚ್.ಎನ್. ಗೋಪಾಲಗೌಡ, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್.ಉಮೇಶ್, ಕೆ.ಮಹಾಂತೇಶ್, ಸೈಯ್ಯದ್ ಮುಜೀಬ್, ಬಾಲಕೃಷ್ಣಶೆಟ್ಟಿ, ಯಮುನಾ ಗಾಂವ್ಕರ್, ಸುನಂದಾ, ಮಾಲಿನಿ ಮೇಸ್ತಾ, ಆರ್.ಎಸ್. ಬಸವರಾಜ್, ಜೆ.ಬಾಲಕೃಷ್ಣಶೆಟ್ಟಿ, ಎಂ.ಬಿ.ನಾಡಗೌಡ, ಪ್ರತಾಪ್ ಸಿಂಹ ,ಮಹೇಶ ಪತ್ತಾರ್, ಮಾತನಾಡಿದರು.

ಅಹೋರಾತ್ರಿ ಧರಣಿ

ಸುಮಾರು 5 ಸಾವಿರಕ್ಕಿಂತ ಹೆಚ್ಚಿನ ಕಾರ್ಮಿಕರು ಫ್ರೀಡಂ ಪಾರ್ಕನಲ್ಲೇ ತಾವು ತಂದಿದ್ದ ಊಟವನ್ನು ಸ್ಥಳದಲ್ಲಿದ್ದ ನಾಯಕರಿಗೂ ನೀಡಿ ಅಲ್ಲೇ ರಾತ್ರಿ ವಾಸ್ತವ್ಯ ಮುಂದುವರೆಸಿದರು. ಎರಡನೇ ದಿನ ಕಾರ್ಮಿಕ ಸಚಿವ ಶ್ರೀ ಸಂತೋಷ್ ಲಾಡ್ ಸ್ಥಳಕ್ಕೆ ಬಂದರು ಮನವಿ ಸ್ವೀಕರಿಸಿದರು ಮತ್ತು ಕೆಲವು ಭರವಸೆ ನೀಡಿದರು. ಆದರೆ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ವಿವಿಧ ಇಲಾಖೆಗಳ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಭೆ ನಿಗದಿಯಾಗದ ಹೊರತು ಚಳವಳಿ ಹಿಂಪಡೆಯುವುದಿಲ್ಲ ಎಂದು ನಾಯಕರು ಸ್ಪಷ್ಟಪಡಿಸಿದ್ದರಿಂದ ಸಚಿವರು ಮುಖ್ಯಮಂತ್ರಿಗಳ ಜೊತೆ ಸಭೆ ನಿಗದಿಪಡಿಸುವ ಭರವಸೆಯೊಂದಿಗೆ ನಿರ್ಗಮಿಸಿದರು. ಈಮಧ್ಯ ಗ್ರಾಮೀಣಾಭಿವೃದ್ಧಿ, ವಿದ್ಯುತ್ ಮೊದಲಾದ ಇಲಾಖೆಗಳ ಅಧಿಕಾರಿಗಳು ಬಂದ ಮನವಿ ಸ್ವೀಕರಿಸಿದರು. ರಾಜ್ಯ ಸರಕಾರ ನಿರ್ದಿಷ್ಟ ಭರವಸೆ ಕೊಡುವವರೆಗೆ ಕಾರ್ಮಿಕರು ಅಲ್ಲಿಂದ ಕದಲಲಿಲ್ಲ.



ಕಾರ್ಮಿಕ ಸಚಿವರೊಂದಿಗೆ ಫಲಪ್ರದ ಮಾತುಕತೆ: ಅನಿರ್ಧಿಷ್ಟ ಹೋರಾಟ ಅಂತ್ಯ

ಮಹಾಂತೇಶ ಕೆ.

ಹೋರಾಟದ ಸ್ಥಳಕ್ಕೆ ಮೊದಲನೇ ದಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಉಮಾಶ್ರೀಯವರು ಹಾಗೂ ಎರಡನೇ ದಿನ ಕಾರ್ಮಿಕ ಸಚಿವರಾದ ಶ್ರೀ ಸಂತೋಷ ಲಾಡ್ ಅವರು ಬಂದು ಹೋರಾಟ ಹಿಂಪಡೆಯಲು ಕೋರಿದ್ದಾಗ್ಯೂ ಸಿಐಟಿಯು ನಾಯಕತ್ವ ಅದನ್ನು ವಿನಯಪೂರ್ವಕವಾಗಿ ನಿರಾಕರಿಸಿ ಮಾನ್ಯಸಚಿವರು ಮುಖ್ಯಮಂತ್ರಿಗಳೊಂದಿಗೆ ಕಾರ್ಮಿಕರ ಬೇಡಿಕೆಗಳ ಕುರಿತು ಮಾತುಕತೆ ನಡೆಸಬೇಕೆಂದು ಆಗ್ರಹಿಸಲಾಯಿತು. ಮತ್ತು ಹೋರಾಟವನ್ನು ಮುಂದುವರೆಸಲಾಯಿತು. ಈ ಬಗ್ಗೆ ಕಾರ್ಮಿಕ ಸಚಿವರು ಪ್ರಯತ್ನಿಸಿದರಾದರೂ ಮುಖ್ಯಮಂತ್ರಿಗಳು ಅನಾರೋಗ್ಯದ ನಿಮಿತ್ತ ಮೂರನೇ ದಿನ ಸಾಧ್ಯವಾಗಲಿಲ್ಲ. ಆದಾಗ್ಯೂ ಬಜೆಟ್ ಪೂರ್ವ ಮುನ್ನ ಅವರೊಂದಿಗೆ ಮಾತುಕತೆಗೆ ದಿನಾಂಕ ನಿಗದಿಪಡಿಸುವ ಭರವಸೆ ನೀಡಿ ಸಿಐಟಿಯು ರಾಜ್ಯ ನಿಯೋಗವನ್ನು ಮನೆಗೆ ಆಹ್ವಾನಿಸಿದರು. ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮೀ, ಉಪಾಧ್ಯಕ್ಷರಾದ ವಿಜೆಕೆ ನಾಯರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷೀ ಸುಂದರಂ, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್. ಉಮೇಶ್, ಕೆ. ಮಹಾಂತೇಶ ಅವರನ್ನೊಳಗೊಂಡ ನಿಯೋಗ ಸಚಿವರೊಂದಿಗೆ ಸುಧೀರ್ಘ ಮಾತುಕತೆ ನಡೆಸಿತು. ಅಲ್ಲದೇ ಈ ಕೆಳಕಂಡ ಪ್ರಮುಖ ಬೇಡಿಕೆಗಳ ಬಗ್ಗೆ ನಿರ್ಧಿಷ್ಟ ಭರವಸೆಯನ್ನು ಪಡೆಯುವಲ್ಲಿ ಯಶಸ್ವಿಯಾಯಿತು.



1. ಫೆಬ್ರವರಿ 24 ರೊಳಗಾಗಿ ಕನಿಷ್ಟ ವೇತನ ಸಲಹಾ ಮಂಡಳಿ ಶಿಫಾರಸ್ಸಿನ ಅನ್ವಯ 10 ಸಾವಿರಕ್ಕಿಂತ ಹೆಚ್ಚಿನ ಕನಿಷ್ಟ ವೇತನ ಕರಡು ಅಧಿಸೂಚನೆಯನ್ನು ಹೊರಡಿಸುವ ಸ್ಪಷ್ಟ ಭರವಸೆಯನ್ನು ಸಚಿವರು ನೀಡಿದರು. ಆದರೂ ಕನಿಷ್ಟ ವೇತನ 18 ಸಾವಿರ ಇರಬೇಕು ಎನ್ನುವ ಬೇಡಿಕೆಯನ್ನು ಸಿಐಟಿಯು ಪ್ರತಿಪಾದಿಸಿತು.
2. ಯೋಜನಾ (ಸ್ಕೀಂ) ನೌಕರರ ವೇತನವನ್ನು ಮುಂಬರುವ ಬಜೆಟ್‌ನಲ್ಲಿ ಏರಿಸುವ ಬಗ್ಗೆ ಸರಕಾರ ಚಿಂತನೆ ಎಂಬ ಅಂಶವನ್ನು ಸಚಿವರು ಸಿಐಟಿಯು ಗಮನಕ್ಕೆ ತಂದರು. ಆದರೆ ಸ್ಕೀಂ ನೌಕರರನ್ನು ಕನಿಷ್ಟ ವೇತನ ಶಡೂಲ್‌ಗೆ ತಂದು ಅವರ ಕನಿಷ್ಟ ವೇತನವನ್ನು ಕೇರಳದ ರೀತಿಯಲ್ಲಿ ಕನಿಷ್ಟ 10 ಸಾವಿರಕ್ಕಾದರೂ ಹೆಚ್ಚಸಲು ಕ್ರಮವಹಿಸಬೇಕು. ಇಲ್ಲದಿದ್ದಲ್ಲಿ ಸಿಐಟಿಯು ನೇತೃತ್ವದಲ್ಲಿ ಈ ವಿಭಾಗದ ನೌಕರರು ಬೀದಿಗಿಳಿಯಬೇಕಾಗುತ್ತದೆ ಎನ್ನುವುದನ್ನು ನಿಯೋಗ ಸ್ಪಷ್ಟಪಡಿಸಿತು.
3. ಗ್ರಾಮ ಪಂಚಾಯ್ತಿ ನೌಕರರ ಬಾಕಿ ಸಂಬಳ ಬಿಡುಗಡೆ ಅಗತ್ಯವಿರುವ ಅನುದಾನ ಬಿಡುಗಡೆಗೆ ಅಗತ್ಯ ಕ್ರಮವಹಿಸುವ ಮತು ಅದಕ್ಕಾಗಿ ಹಣ ಬಿಡುಗಡೆ ಮಾಡುವ ಸ್ಪಷ್ಟ ಭರವಸೆ ಗ್ರಾಮೀಣಾಭಿವೃದ್ದಿ ಇಲಾಖೆಯಿಂದ ಬಂತು. ಈ ಸಂಬಂಧ ಫೆಬ್ರವರಿ 8 ರಂದು ಸಭೆ ನಿಗದಿಯಾಗಿದೆ.
4. ಅಸಂಘಟಿತ ವಿಭಾಗದ ಹಮಾಲಿ, ಆಟೋ, ಮನೆಕೆಲಸ ಹಾಗೂ ಬೀದಿಬದಿ ವ್ಯಾಪಾರಿಗಳಿಗೆ ಪ. ಬಂಗಾಳ ಮಾದರಿಯಲ್ಲಿ ಭವಿಷ್ಯನಿಧಿ ಜಾರಿಗಳಿಗೊಳಿಸಲು ಮತ್ತು ಈ ಸಂಬಂಧ ಶಿಫಾರಸ್ಸು ಮಾಡಲು ನಿರ್ಧರಿಸಲಾಗಿದೆ.
5. ಅದೇ ರೀತಿ ಕಟ್ಟಡ ಕಾರ್ಮಿಕರಿಗೆ ಮತ್ತು ರೇಗಾ(ಉದ್ಯೋಗ ಖಾತ್ರಿ) ಕಾರ್ಮಿಕರಿಗೂ ಕಲ್ಯಾಣ ಮಂಡಳಿಯಿಂದ ಭವಿಷ್ಯನಿಧಿ ಮತ್ತು ಪಿಂಚಣಿ ಹಾಗೂ ವಸತಿ ಯೋಜನೆ ಜಾರಿಗೊಳಿಸುವ ಭರವಸೆ ಸಿಕ್ಕಿದೆ.
6. ಕಾರ್ಮಿಕ ಸಂಘಗಳ ಮಾನ್ಯತೆ ಸಂಬಂಧ ಶಾಸನ ರೂಪಿಸಲು, ಸ್ಥಾಯಿ ಸಮಿತಿ ಕಾನೂನಿಗೆ ತಿದ್ದುಪಡಿ ತಂದು ನಿವೃತ್ತಿ ವಯಸ್ಸನ್ನು 58 ರಿಂದ 60 ವರ್ಷಕ್ಕೆ ಹೆಚ್ಚಿಸಲು ಅಗತ್ಯ ಕ್ರಮವಹಿಸುವ ಭರವಸೆ ಸಿಕ್ಕಿದೆ.
7. 2017 ರ ಮೇ ತಿಂಗಳಲ್ಲಿ ಕಾರ್ಮಿಕ ವರ್ಗದ ಸಮಸ್ಯೆಗಳ ಚರ್ಚೆಗಾಗಿ ಅಖಿಲ ಭಾರತ ಕಾರ್ಮಿಕ ಸಮ್ಮೇಳನದಂತೆ ತ್ರಿಪಕ್ಷಿಯ

ಹಾಗೂ ಇತರೆ ರಾಜ್ಯ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗ್ರಾ.ಪ. ನೌಕರರ ಸಂಘದ ರಾಜ್ಯಧ್ಯಕ್ಷ ಮಾರುತಿ ಮಾನ್ಪಡೆ, ವಿದ್ಯುತ್ ಗುತ್ತಿಗೆ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಸತ್ಯಬಾಬು, ಕಟ್ಟಡ ಕಾರ್ಮಿಕ ಸಂಘದ ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಜನವಾದಿ ಮಹಿಳಾ ಸಂಘದ ಪ್ರಧಾನ ಕಾರ್ಯದರ್ಶಿ ಗೌರಮ್ಮ, ಆದಿವಾಸಿ ಹಕ್ಕುಗಳ ಸಮಿತಿ ಸಹ ಸಂಚಾಲಕ ಎಸ್. ವೈ ಗುರುಶಾಂತ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ. ವಿ. ಶ್ರೀರಾಮರೆಡ್ಡಿ, ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು, ಬಸವರಾಜ್ ಮುಂತಾದ ನಾಯಕರು ಮಾತನಾಡಿದರು.

ಮೂರು ದಿನಗಳ ಕಾಲ ಸಾವಿರಾರು ಸಂಖ್ಯೆಯಲ್ಲಿ ಫ್ರೀಡಂ ಪಾರ್ಕಿನಲ್ಲಿ ಅಹೋರಾತ್ರಿ ಧರಣಿ ನಡೆಸಿದರು. ಅದರಲ್ಲಿ ದೊಡ್ಡ ಸಂಖ್ಯೆಯಲ್ಲಿ ಕರ್ನಾಟಕದ ಮೂಲೆ ಮೂಲೆಗಳಿಂದ ಬಂದಿದ್ದ ಮಹಿಳಾ ಸ್ಕಿಂ ಕಾರ್ಮಿಕರು, ಗ್ರಾಮ ಪಂಚಾಯತ್, ಹಮಾಲಿ ಮತ್ತಿತರ ಕಾರ್ಮಿಕರು ಭಾಗವಹಿಸಿದ್ದರು. ಬೆಂಗಳೂರಿನ ಹೊರಗಿಂದ ಬಂದಿದ್ದ ಕಾರ್ಮಿಕರು ಅಲ್ಲೇ ರಾತ್ರಿ ವೇಳೆಯಲ್ಲಿ ಉಳಿಯುತ್ತಿದ್ದರು. ಬೆಂಗಳೂರಿನ ಮತ್ತು ಸುತ್ತ ಮುತ್ತದಿಂದ ಬಂದ ಕಾರ್ಮಿಕರು ಅವರನ್ನು ಸೇರಿಕೊಳ್ಳುತ್ತಿದ್ದರು. ದಿನವೀಡಿ ಹಾಡುಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಘೋಷಣೆಗಳು, ನಾಯಕರ ಭಾಷಣಗಳು ಸ್ಫೂರ್ತಿದಾಯಕವಾಗಿ ನಡೆಯುತ್ತಿದ್ದವು. ಈ ನಡುವೆ ಕೇಂದ್ರ ಬಜೆಟ್ ನಲ್ಲಿ ಕಾರ್ಮಿಕರು ನಿರೀಕ್ಷಿಸಿದ್ದ ಯಾವ ಕ್ರಮಗಳೂ ಇಲ್ಲದ್ದನ್ನು ಪ್ರತಿಭಟಿಸಲಾಯಿತು. ಮೂರು ದಿನಗಳ ಕಾಲ ಫ್ರೀಢಂ ಪಾರ್ಕಿನಲ್ಲಿ ಕರ್ನಾಟಕ ಕಾರ್ಮಿಕರ ಪ್ರತಿನಿಧಿಗಳ ಒಂದು 'ಪರಪಂಚ'ವೇ ನೆರೆದಿತ್ತು. ನಿರ್ದಿಷ್ಟ ಭರವಸೆಗಳು ಕೊಡದೆ ಧರಣಿ ವಾಪಸು ತೆಗೆದುಕೊಳ್ಳಲು ಮನವಿ ಮಾಡಲು ಬಂದ ಮಂತ್ರಿಗಳು, ಅಧಿಕಾರಿಗಳನ್ನು ಲೆಕ್ಕಿಸದೆ ಧರಣಿ ಮೂರು ದಿನಗಳ ಕಾಲ ಮುಂದುವರೆದಿತ್ತು. ಮೂರನೇ ದಿನ ಅಂದರೆ ಫೆಬ್ರುವರಿ 2ರಂದು ಸಾಯಂಕಾಲ ವಾಪಸು ತೆಗೆದುಕೊಳ್ಳಲಾಯಿತು. ■


'ಕರ್ನಾಟಕ ಕಾರ್ಮಿಕ ಸಮ್ಮೇಳವನ್ನು' ನಡೆಸಲು ಕ್ರಮವಹಿಸಲು ಭರವಸೆ ಸಿಕ್ಕಿದೆ.

8. ರಾಜ್ಯದಲ್ಲಿರುವ ತ್ರಿಪಕ್ಷೀಯ ಸಮಿತಿಗಳಲ್ಲಿ ಸಿಐಟಿಯು ಸೇರಿದಂತೆ ಕೇಂದ್ರ ಕಾರ್ಮಿಕ ಸಂಘಗಳಿಗೆ ಪ್ರಾತಿನಿಧ್ಯ ನೀಡಲು ಅಗತ್ಯ ಕ್ರಮದ ಭರವಸೆ ಸಿಕ್ಕಿದೆ.

ಇದಲ್ಲದೆ ಅಂಗನವಾಡಿ, ಅಕ್ಷರ ದಾಸೋಹ ಹಾಗೂ ಆಶಾ ಕಾರ್ಯಕರ್ತೆಯರ ವೇತನ ಹೆಚ್ಚಳ ಕುರಿತಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಳಾಖೆ ಪ್ರಧಾನ ಕಾರ್ಯದರ್ಶಿ ಜೊತೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮೀ, ರಾಜ್ಯ ಕಾರ್ಯದರ್ಶಿಗಳಾದ ಸುನಂದಾ ಮತ್ತು ಮಾಲೀನಿ ಮೇಸ್ತಾ ಭೇಟಿ ಮಾಡಿ ವೇತನ ಹೆಚ್ಚಳ ಕುರಿತು ಕೆಲವು ಸ್ಪಷ್ಟ ಭರವಸೆಯನ್ನು ಪಡೆದರು.

ಇದಾದ ನಂತರ ಸಭೆ ನಡೆಸಿ ಸಚಿವರು ಮತ್ತು ವಿವಿಧ ಇಲಾಖೆಗಳಲ್ಲಿ ಈ ಹೋರಾಟದಿಂದಾಗಿರುವ ಫಲಿತಗಳನ್ನು ಚರ್ಚಿಸಿದ ಸಿಐಟಿಯು ರಾಜ್ಯ ಪದಾಧಿಕಾರಿಗಳ ಸಭೆಯು ಹೋರಾಟವನ್ನು ಹಿಂಪಡೆಯುವ ನಿರ್ಧಾರ ಕೈಗೊಂಡಿತು. ಮತ್ತು ಅಂತಿಮವಾಗಿ ಪ್ರೀಡಂ ಪಾರ್ಕನಲ್ಲಿ ನರೆದಿದ್ದ ಕಾರ್ಮಿಕ ಸಮೂಹಕ್ಕೆ ಅದನ್ನು ಮನವರಿಕೆ ಮಾಡಿತು. ಮತ್ತು ಈ ಹೋರಾಟದಲ್ಲಿ ಭಾಗವಹಿಸಿದ ಎಲ್ಲಾ ವಿಭಾಗಗಳ ಕಾರ್ಮಿಕರಿಗೆ, ಸಹಕರಿಸಿದ ಸರಕಾರಕ್ಕೆ ಮತ್ತು ಎಲ್ಲಾರಿಗೂ ಅಭಿನಂದನೆ ಸಲ್ಲಿಸಿ ಘೋಷಣೆಗಳೊಂದಿಗೆ ಸಭೆ ಮುಕ್ತಾಯಗೊಳಿಸಿತು. ನಂತರ ಕೇಂದ್ರ ಬಜೆಟ್‌ನ್ನು ವಿರೋಧಿಸಿ ಮೋದಿ ಪ್ರತಿಕೃತಿ ದಹನಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ■

ಬಜೆಟ್ 2017 – ಜನಪರ ನಾಯಕರು, ಪರಿಣತರು ಕಂಡಂತೆ



ಬರ, ನೋಟು ರದ್ಧತಿ ಪರಿಣಾಮಕ್ಕೆ ಕುರುಡಾದ ಬಜೆಟ್

ಈ ವರ್ಷದ ಬಜೆಟಿನಲ್ಲಿ ಒಂದು ಪ್ರಮುಖ ನ್ಯೂನತೆಯಿದೆ. ಸಾಮಾನ್ಯವಾಗಿ ಬಜೆಟ್ ಮೂರನೇ (ಅಕ್ಟೋಬರ್–ಡಿಸೆಂಬರ್) ತ್ರೈಮಾಸಿಕದಲ್ಲಿ ದೇಶದ ಆರ್ಥಿಕದ ಅಂಕೆಸಂಖ್ಯೆಗಳನ್ನು ಒಳಗೊಂಡಿರುತ್ತದೆ. ಈ ಅಂಕೆಸಂಖ್ಯೆಗಳು ಫೆಬ್ರುವರಿ ಮೊದಲ ವಾರದ ಹೊತ್ತಿಗೆ ಸಿಗುತ್ತವೆ. ಮಳೆಯ ಪ್ರಮಾಣ, ಪರಿಣಾಮ ಮತ್ತು ಆರ್ಥಿಕದ ಬೆನ್ನೆಲುಬಾದ ಕೃಷಿ ಉತ್ಪನ್ನವನ್ನು ಪ್ರತಿಫಲಿಸುವ ದೃಷ್ಟಿಯಿಂದ ಮೂರನೇ ತ್ರೈಮಾಸಿಕ ಅಂಕೆಸಂಖ್ಯೆಗಳು ಯಾವಾಗಲೂ ಮಹತ್ವದಾಗಿರುತ್ತವೆ. ಈ ವರ್ಷ ಇದೇ ಅವಧಿಯಲ್ಲಿ ನೋಟು ರದ್ದತಿ ಮಾಡಿದ್ದರಿಂದ ಆರ್ಥಿಕದ ಮೇಲೆ ಅದರ ಪರಿಣಾಮಗಳ ದೃಷ್ಟಿಯಿಂದ ಇನ್ನೂ ಹೆಚ್ಚಿನ ಮಹತ್ವದ್ದಾಗಿತ್ತು. ಆದರೆ ಬಜೆಟ್ ಮಂಡನೆಯನ್ನು ಫೆಬ್ರುವರಿ 1 ರಂದು 4 ವಾರಗಳಷ್ಟು ಬೇಗನೇ ಮಾಡಿದ್ದರಿಂದ ಈ ಬಜೆಟ್ ಮೊದಲ ಅ ರ್ಥ ವರ್ಷದ ಆರ್ಥಿಕದ ಅಂಕೆಸಂಖ್ಯೆಗಳನ್ನು ಮಾತ್ರ ಒಳಗೊಂಡಿದೆ. ಆದ್ದರಿಂದ ಹಿಂದಿನ ವರ್ಷಧ ಆರ್ಥಿಕದ ಸ್ಥಿತಿ ಮತ್ತು ಅದರ ಆ ಧಾರದ ಮೇಲೆ ಮಾಡುವ ಮುಂದಿನ ವರ್ಷದ ಆದಾಯ–ಖರ್ಚುಗಳ ಅಂದಾಜುಗಳಲ್ಲಿ ಗಂಭೀರ ತಪ್ಪುಗಳ ಸಾಧ್ಯತೆ ಬಹಳ ಹೆಚ್ಚು.

ಉದಾಹರಣೆಗೆ ಬಜೆಟಿನಲ್ಲಿ ನೇರ ತೆರಿಗೆ ಸಂಗ್ರಹದಲ್ಲಿ (ಡಿಸೆಂಬರ್ ಪಾವತಿ ಆಧಾರದ ಮೇಲೆ) 1.3 ಲಕ್ಷ ಕೋಟ ರೂ. ಹೆಚ್ಚಳದ ಅಂದಾಜನ್ನೇ ತೆಗೆದುಕೊಳ್ಳಿ. ಡಿಸೆಂಬರ್ 15ರೊಳಗೆ ಪಾವತಿ ಮಾಡಬಹುದಾದ ಮುಂಗಡ ನೇರ ತೆರಿಗೆಯನ್ನು ಕಪ್ಪು ಹಣವನ್ನು ಬಿಳಿ ಮಾಡುವ ಸಾಧನವಾಗಿ ಬಳಸಲಾಯಿತು ಎಂಬುದು ಈಗ ಎಲ್ಲರಿಗೂ ಗೊತ್ತು. ಈ ವರ್ಷದ ಅಂತಿಮ ತೆರಿಗೆ ಫೈಲ್ ಮಾಡಿದ ಮೇಲೆ ಇದರ ದೊಡ್ಡ ಪ್ರಮಾಣ ವಾಪಸು ಹೋಗಬಹುದು. ಆದ್ದರಿಂದ ಇಂತಹ ಸಂದಿಗ್ಧ ಅಂಕೆಸಂಖ್ಯೆಗಳ ಮೇಲೆ ಆಧರಿಸಿದ ಅಂದಾಜುಗಳು ತಲೆಕೆಳಗಾಗಬಹುದು.

ನಮ್ಮ ಆರ್ಥಿಕದ ಅನೌಪಚಾರಿಕ ಕ್ಷೇತ್ರ ಜಿಡಿಪಿಯ ಅರ್ಧ ಮತ್ತು ಉದ್ಯೋಗದ ಮುಕ್ಕಾಲು ಭಾಗ ಕೊಡುತ್ತದೆ. ನೋಟು ರದ್ದತಿ ಈ ಕ್ಷೇತ್ರವನ್ನು ಬಹಳ ಒಭೀರವಾಗಿ ತಟ್ಟಿದ್ದು. ವಾರ್ಷಿಕ ವಹಿವಾಟು 50 ಕೋಟಿ ರೂ>ಗಳಿಗಿಂತ ಕಡಿಮೆ ಇರುವ ಉದ್ಯಮಗಳಿಗೆ ಕೊಡಲಾದ ತೆರಿಗೆ ಕಡಿತದ ಪ್ರಸ್ತಾವ ಸಹ ಈ ಕ್ಷೇತ್ರಕ್ಕೆ ಯಾವುದೇ ಪರಿಹಾರ ಕೊಡುವುದಿಲ್ಲ.

– ಸೀತಾರಾಂ ಯೆಚುರಿ (ಪ್ರಧಾನ **ಕಾರ್ಯದರ್ಶಿ, ಸಿಪಿಐ(ಎಂ))**

ಫೆ. 2 ರ 'ದಿ ಹಿಂದು' ಲೇಖನದಿಂದ

ಹಳೆಯ ನೇರ ತೆರಿಗೆ ಬಾಕಿ 6.59 ಲಕ್ಷ ಕೋಟಿ ರೂ. ವಸೂಲಿ ಮಾಡಲಾಗದ ಸರಕಾರ



ಜೈಟ್ಲಿ ದಂತಕಥೆಗಳನ್ನು ಹೆಣೆದು, ಜನರ ಸಂಕಷ್ಟಗಳನ್ನು ಇನ್ನಷ್ಟು ಗಂಭೀರಗೊಳಿಸುತ್ತಿದ್ದಾರೆ. ..ಬಜೆಟ್ ನೋಟು ರದ್ದತಿಯಿಂದ ಬಾಧಿತರಾದ ಕೋಟ್ಯಾಂತರ ಜನರಿಗೆ ಬಜೆಟ್ ಯಾವುದೇ ಪರಿಹಾರ ಒದಗಿಸುವುದಿಲ್ಲ. ಮಾತ್ರವಲ್ಲ, ಈ ವಾಸ್ತವವನ್ನು ಒಪ್ಪಿಕೊಳ್ಳಲು ಸಹ ನಿರಾಕರಿಸಿದೆ. ಆದ ನಷ್ಟ ತುಂಬಿಕೊಡುವ ಯಾವುದೇ ನಿರ್ದಿಷ್ಟ ಕ್ರಮವನ್ನೂ ತೆಗೆದುಕೊಳ್ಳುವುದಿಲ್ಲ. ಈ ಸನ್ನಿವೇಶದಲ್ಲಿ ಸಾರ್ವಜನಿಕ ಖರ್ಚಿನಲ್ಲಿ ಭಾರೀ ಹೆಚ್ಚಳ ಬೇಕಾಗಿತ್ತು. ಇದ–ಕ್ಕೆ ಯಾವುದೇ ಹಣಕಾಸು ಮಿತಿಗಳಿಗೆ ಕಟ್ಟಿಹಾಕಿಕೊಳ್ಳುವುದನ್ನು ನಿರಾಕರಿಸಬೇಕಿತ್ತು. ಇದಕ್ಕಾಗಿ ಬಜೆಟ್ ಮಾಡಬೇಕಾಗಿದ್ದು ಕಾರ್ಪೋರೆಟ್ ಮತ್ತು ಶ್ರೀಮಂತರಿಂದ ನೇರ ತೆರಿಗೆಗಳ ಮೂಲಕ ಸಂಪನ್ಮೂಲ ಕ್ರೋಢಿಕರಿಸಬೇಕಾಗಿತ್ತು.

ನೇರ ತೆರಿಗೆಗಳಿಗೆ ಬಂದರೆ, ಬಜೆಟ್ ಪ್ರಕಾರವೇ ನೇರ ತೆರಿಗೆಳ ಒಟ್ಟು ಹಳೆಯ ಬಾಕಿ 6.59 ಲಕ್ಷ ಕೋಟಿ ರೂ. ಕಪ್ಪು ಹಣ ನಾಶಕ್ಕೆ ಪಣ ತೊಟ್ಟಿದ್ದೇನೆ ಎಂದು ಹೇಳುವ ಸರ್ಕಾರ ಈ ಬಾಕಿ ವಸೂ;ಲಿಗೆ ಏನೂ ಮಾಡಿಲ್ಲ. ಯಾವುದೇ ವಿವಾದ ಇಲ್ಲದ 81.4 ಸಾವಿರ ಕೋಟಿ ರೂ. ಬಾಕಿ ವಸೂಲಿ ಮಾಡಲೂ ಈ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಬದಲಾಗಿ, ಕಾರ್ಪೋರೆಟ್ ಮತ್ತು ಶ್ರೀಮಂತರಿಗೆ ಕೊಟ್ಟ ರಿಯಾಯಿತಿಗಳು 30 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಾಗಿ ಜಿಡಿಪಿಯ ಶೇ. 2.1 ಮಟ್ಟ ಮುಟ್ಟಿದೆ.

ಮೋದಿ ಸರಕಾರ ಪ್ರಭುತ್ವ ಮಾಡಲೇಬೇಕಾದ ಕಲ್ಯಾಣ ಯೋಜನೆಗಳಿಂದ ಹಿಂದೆ ಸರಿಯಬಯಸುತ್ತದೆ. ಕಳೆದ ಎರಡು ಬಜೆಟುಗಳಲ್ಲಿ ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಶಿಶು ಕಲ್ಯಾಣ, ರೇಗಾ ಯೋಜನೆಗಳ ಖರ್ಚಿನಲ್ಲಿ ಕಡಿತ ಮಾಡಲಾಗಿತ್ತು. ಈ ಬಜೆಟಿನಲ್ಲೂ ಅದು ಮುಂದುವರೆದಿದೆ. ಸಾಮಾಜಿಕ ಕ್ಷೇತ್ರಗಳಲ್ಲಿ ಸಣ್ಣ ಏರಿಕೆ ಮಾತ್ರ ಇದೆ. 7ನೇ ವೇತನ ಆಯೋಗದ ವೇತನ ಏರಿಕೆಗಷ್ಟೇ ಅದು ಸಾಕಾದೀತು.

– ಪ್ರಕಾಶ್ ಕಾರಟ್, ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯ

ಫೆ. 2 ರ 'ಬಿಸಿನೆಸ್ ಲೈನ್' ಲೇಖನದಿಂದ



ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ 2015–16ರಲ್ಲಿ ಆದ ಖರ್ಚು 2.06 ಲಕ್ಷ ಕೊಟಿ ರೂ. ಎರಡು ವರ್ಷಗಳ ನಂತರ 2017–18ರ ಬಜೆಟಿನಲ್ಲಿ ಅಂದಾಜು ವೆಚ್ಚ 2.06 ಲಕ್ಷ ಕೋಟಿ ರೂ. ಇದು ಬೆಲೆಏರಿಕೆ ಗಣನೆಗೆ ತೆಗೆದುಕಕೊಂಡರೆ ಕಡಿತ ಎಂತಲೇ ಹೇಳಬೇಕು. ಇನ್ನು ಕೃಷಿ ಬೆಳೆ ಸಂವರ್ಧನೆಯಂತಹ ಉಪಕ್ಷೇತ್ರಗಳನ್ನು ತೆಗೆದುಕೊಂಡರೆ, 2016–17ರ ನಿಜವಾದ ಖರ್ಚು 39.4 ಸಾವಿರ ಕೋಟಿ ರೂ. ನಿಂದ 30.9 ಸಾವಿರ ಕೋಟಿ ರೂ. ಗೆ ಅಂದರೆ ಶೇ. 6.8ರಷ್ಟು ಕಡಿತವಾಗಿದೆ. ರೇಗಾಕ್ಕೆ ಹೆಚ್ಚಿಸಿದ ಹಣ ಕೇವಲ ಶೇ. 1.1. ರಸಗೊಬ್ಬರಗಳ ಬೆಲೆ ಏರುತ್ತಿರುವಾಗ ರಸಗೊಬ್ಬರ ಸಬ್ಸಿಡಿ 70 ಸಾವಿರ ಕೋಟಿ ರೂ.ನಲ್ಲೆ ಸ್ಥಗಿತವಾಗಿದೆ.


ಹಣಕಾಸು ಮಂತ್ರಿಗಳು ರೆವಿನೂ ಖರ್ಚು ಕಡಿಮೆಯಾಗಿರಬಹುದು. ಆದರೆ ಕ್ಯಾಪಿಟಲ್ ಖರ್ಚು ಹೆಚ್ಚಾಗಿದೆ ಎಂದು ಹೇಳಬಹುದು. ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಕ್ಯಾಪಿಟಲ್ ಖರ್ಚು ಕಳೆದ ವರ್ಷ ರೂ. 1465 ಕೋಟಿ ಇದ್ದರೆ, ಈ ವರ್ಷ ರೂ. 3676 ಕೋಟಿ ರೂ. ಕೊಡಲಾಗಿದೆ. ಅಂದರೆ ರೂ. 2211 ಕೋಟಿ! ಆದರೆ ಈ ವಾದ ಒಂದು ಪ್ರಮುಖ ವಾಸ್ತವವನ್ನು ಮರೆಮಾಚುತ್ತದೆ. ಬಜೆಟಿನಲ್ಲಿರುವ ಹೆಚ್ಚಳ ಪೂರ್ತಿಯಾಗಿ "ಕೃಷಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ" ಎಂಬ ಒಂದೇ ಉಪಕ್ಷೇತ್ರಕ್ಕೆ ಕೊಡಲಾಗಿದೆ. ಇಲ್ಲಿ ಕಳೆದ ವರ್ಷದ ರೂ. 1405 ಕೋಟಿ ಯಿಂದ ರೂ. 3568 ಕೋಟಿ ಗೆ ಹೆಚ್ಚಿದೆ. ಅಂದರೆ ರೂ. 2164 ಕೋಟಿ ಹೆಚ್ಚಳ. ಬಜೆಟ್ ಭಾಷಣ ಗಮನಿಸಿದರೆ ಇಡೀ ಹಣ ನಾಬಾರ್ಡ್ (NABARD – ಗ್ರಾಮೀಣ ಬ್ಯಾಂಕಿ) ನ 63 ಸಾವಿರ ಪ್ರಾಥಮಿಕ ಕೃಷಿ ಸಾಲ ಸೊಸೈಟಿಗಳ ಕಂಪ್ಯೂಟರೀಕರಣ ಮತ್ತು ಅವನ್ನು ಜಿಲ್ಲಾ ಕೇಂದ್ರೀಯ ಸಹಕಾರಿ ಬ್ಯಾಂಕುಗಳ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯ ಕಂಪ್ಯೂಟರ್ ಜಾಲದೊಂದಿಗೆ ಜೋಡಿಸುವ ಯೋಜನೆಗೆ ಖರ್ಚಾಗುತ್ತದೆ. ಅಂದರೆ ಕೃಷಿಗೆ ನೇರವಾಗಿ ಯಾವುದೇ ಕ್ಯಾಪಿಟಲ್ ಖರ್ಚಿನ ಯೋಜನೆಯೇ ಇಲ್ಲ ಎಂದಲ್ಲವೇ?

– ಪ್ರೊ. ರಾಮಕುಮಾರ್, ಟಾಟಾ ಇನ್ಸ್ಟಿಟ್ಯೂಟ್ ಆಫ್ ಸೋಶಿಯಲ್ ಸಾಯನ್ಸ್

ಹಣಕಾಸು ಮಂತ್ರಿಗಳು ತೆರಿಗೆಕಳ್ಳತನ ಇದೆ ಅಂತಾರೆ. ಕಾರ್ಪೊರೆಟ್ ಗಳ ತೆರಿಗೆಕಳ್ಳತನ ಹೇಗೆ ನಿಭಾಯಿಸುತ್ತಾರೆ ಎಂದು ಮಾತ್ರ ಅವರು ಹೇಳುತ್ತಿಲ್ಲ.

– ಮಹಮ್ಮದ್ ಸಲೀಂ





ಕಾರ್ಮಿಕರ ಹಿತಗಳಿಗೆ, ಹಕ್ಕುಗಳಿಗೆ ಮೋಸ ಮಾಡುವ ಬಜೆಟ್: ಸಿಐಟಿಯು ಖಂಡನೆ

ಕೇಂದ್ರ ಹಣಕಾಸು ಮಂತ್ರಿಗಳು ಮಂಡಿಸಿರುವ 2017–18ರ ಬಜೆಟ್ ಅತ್ಯಂತ ನಿರಾಶಾದಾಯಕ ಮತ್ತು ಹಲವಾರು ಅಂಶಗಳಲ್ಲಿ ಮೋಸಗಳಿಂದ ಕೂಡಿದೆ ಎಂದು ಸಿಐಟಿಯು ಖಂಡಿಸಿದೆ.

ಆರಂಭದಲ್ಲೇ ಹಣಕಾಸು ಮಂತ್ರಿಗಳು ಸಾಮಾನ್ಯವಾಗಿ ಬಜೆಟ್ ದಸ್ತಾವೇಜಿನಲ್ಲಿ ಯೋಜನಾ (ಬಂಡವಾಳ ಹೂಡಿಕೆ)ವೆಚ್ಚ ಮತ್ತು ಯೋಜನೇತರ (ಆಡಳಿತ) ವೆಚ್ಚ ಎಂದು ವಿಂಗಡಿಸಿರುವುದನ್ನು ತಾನು ನಿಲ್ಲಿಸಿದ್ದೇನೆ ಎಂದು ಅದೊಂದು ಮಹಾಸಾಧನೆಯೆಂಬಂತೆ ಹೇಳಿಕೊಂಡರು. ಆದರೆ ವಾಸ್ತವವಾಗಿ ಈ ಮೂಲಕ ಸರಕಾರ ಆರ್ಥಿಕದ ಬೆಳವಣಿಗೆಗಾಗಿ ಎಷ್ಟು ಖರ್ಚು ಮಾಡುತ್ತಿದೆ ಎಂಬ ಬಗ್ಗೆ ಜನಗಳಲ್ಲಿ ಗೊಂದಲ ಹಟ್ಟಿಸುದಕ್ಕೇ ಇದನ್ನು ಮಾಡಿದಂತಿದೆ ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಹಣಕಾಸು ಮಂತ್ರಿಗಳು ದೇಶದ ಆರ್ಥಿಕದಲ್ಲಿ ಖಾಸಗಿ ಹೂಡಿಕೆಯಿಲ್ಲದೆ ಮಬ್ಬು ಕವಿದಿದೆ ಎಂದು ಒಪ್ಪಿಕೊಂಡರೂ ಅದನ್ನು ನಿವಾರಿಸಲು ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಲು, 7ನೇ ವೇತನ ಆಯೋಗದಶಿಫಾರಸುಗಳನ್ನು ಒಪ್ಪುವ ಮೂಲಕ ತಾನೇ ಒಪ್ಪಿಕೊಂಡ 18,000 ರೂ. ಕನಿಷ್ಟ ಕೂಲಿಯನ್ನು ಪ್ರಕಟಿಸಿ ಜನಗಳ ಖರೀದಿ ಶಕ್ತಿಯನ್ನು ಹೆಚ್ಚಿಸುವುದು ಮತ್ತಿತರ ನೇರವಾಗಿ ಮಧ್ಯಪ್ರವೇಶಿಸುವ ಮೂರ್ತ ಕ್ರಮಗಳನ್ನು ಸೂಚಿಸುವ ಗೊಡವೆಗೂ ಹೋಗಿಲ್ಲ, ಬದಲಾಗಿ ತದ್ವಿರುದ್ಧವಾದುದನ್ನೇ ಮಾಡಿದೆ. ಆರ್ಥಿಕ ವ್ಯವಸ್ಥೆ ಮುಳುಗದಂತೆ ತಡೆದಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗಿಯವರಿಗೆ ಮಾರುವ ನೀತಿಯನ್ನು ಪುನರುಚ್ಚರಿಸಿದೆ, ಆಮೂಲಕ ಆರ್ಥಿಕ ಅಸಮಾನತೆಯನ್ನು ಮತ್ತಷ್ಟು ಉಲ್ಬಣಗೊಳಿಸಲು, ಪರಿಸ್ಥಿತಿಯನ್ನು ಇನ್ನಷ್ಟು ಮಂಕುಗೊಳಿಸಲು ಹೊರಟಿದೆ. ಐಸಿಡಿಎಸ್ ಮತ್ತಿತರ ಕೇಂದ್ರೀಯ ಯೋಜನೆಗಳಿಗೆ ತುಸು ಹೆಚ್ಚು ಹಣ ನೀಡಿದ್ದರೂ ಸ್ಕೀಮ್ ಕಾರ್ಮಿಕರ ಸಂಬಳವನ್ನು ಹೆಚ್ಚಿಸುವ ಐಎಲ್‌ಸಿಯ ಒಮ್ಮತದ ಶಿಫಾರಸನ್ನೂ ಉಪೇಕ್ಷಿಸಿದೆ ಎಂದು ಸಿಐಟಿಯು ಆಕ್ರೋಶ ವ್ಯಕ್ತಪಡಿಸಿದೆ.

ಹಣಕಾಸು ಮಂತ್ರಿಗಳು ಕಾರ್ಪೊರೇಟ್ ಮಂದಿ ಮತ್ತು ವ್ಯಾಪಾರೀ ಜಗತ್ತು ತೆರಿಗೆಗಳ್ಳತನ ಮಾಡುತ್ತಿದೆ ಎಂದು ಒಪ್ಪಿಕೊಂಡರೂ, ಬಜೆಟಿನಲ್ಲಿ (ಅನುಬಂಧ–10) ನೇರ ತೆರಿಗೆಗಳ ಬಾಕಿ ಮೊತ್ತ 6.59ಲಕ್ಷ ಕೋಟಿ ರೂ.ಗಳನ್ನು ತಲುಪಿದೆ ಎಂದು ಹೇಳಿದ್ದರೂ ಅದರ ವಸೂಲಿಗೆ ಯಾವ ಕ್ರಮವನ್ನೂ ಸೂಚಿಸಿಲ್ಲ. ಅಷ್ಟೇ ಅಲ್ಲ, 81406 ಕೋಟಿ ರೂ. ಬಾಕಿಗಳ ಬಗ್ಗೆ ಯಾವ ವಿವಾದ ಇಲ್ಲ ಎಂದೂ ಹೇಳಿದೆ. ಅದರ ವಸೂಲಿಯ ಬಗ್ಗೆಯೂ ಏನೂ ಹೇಳಿಲ್ಲ ಎಂಬ ಸಂಗತಿಯತ್ತ ಸಿಐಟಿಯು ಗಮನ ಸೆಳೆದಿದೆ.

ಕಾರ್ಪೊರೇಟ್ ಸುಸ್ತಿ ಸಾಲಗಳಿಂದಾಗಿ ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ ಆಗಿರುವ ಕಷ್ಟಗಳಿಗೆ ಪರಿಹಾರ ನೀಡುವ ಬಗ್ಗೆ ಹೇಳಿದರೂ ಹಣಕಾಸು ಮಂತ್ರಿಗಳು ಆ ಸಾಲಗಳನ್ನು ವಸೂಲಿ ಮಾಡುವ ಬಗ್ಗೆ ದಿವ್ಯಮೌನವನ್ನೇ ಮುಂದುವರೆಸಿದ್ದಾರೆ. ಅಷ್ಟೇ ಅಲ್ಲ, ಹಿಂದಿನ ದಿನ ಆರ್ಥಿಕ ಸರ್ವೇಕ್ಷಣೆ ಖಾಸಗಿ ವಲಯದ ಹೊರೆಯನ್ನು ಹಂಚಿಕೊಳ್ಳುವ, ಕ್ಷಮಿಸುವ ಮಾತನ್ನೂ ಆಡಿರುವುದು ಈ ಸರಕಾರದ ನಿಜ ಬಣ್ಣವನ್ನು ತೋರಿಸುತ್ತದೆ ಎಂದು ಸಿಐಟಿಯು ಹೇಳಿದೆ.

ಹಣಕಾಸು ಮಂತ್ರಿಗಳು ನೋಟುರದ್ಧತಿ ಪರಿಣಾಮಕಾರಿಯಾಗಿದೆ ಎಂದು ಜಂಭ ಕೊಚ್ಚಿಕೊಂಡರೂ ಎಷ್ಟು ಕಪ್ಪು ಹಣ ವಸೂಲಾಯಿತು, ಎಷ್ಟು ಖೋಟಾ ನೋಟುಗಳು, ಭಯೋತ್ಪಾದಕರ ಹಣಸಂಗ್ರಹ ಪತ್ತೆಯಾಯಿತು ಎಂಬುದರ ಲೆಕ್ಕ ಕೊಡುವ ಪರಿವೆಗೇ ಹೋಗಿಲ್ಲ.

ಇಂತಹುದೇ ಮೋಸದ ನಿಲುವು ಅವರು 'ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ' ಬಗ್ಗೆ ಮಾತಾಡಿದಾಗಲೂ ಕಾಣ ಬಂದಿದೆ. ಹಾಗೆ ಮಾತಾಡುತ್ತಲೇ ಅವರು ಎಲ್ಲ ಮೂಲ ಕಾರ್ಮಿಕ ಕಾನೂನುಗಳಲ್ಲಿ ತಮ್ಮ ಸರಕಾರ ಮಾಡಹೊರಟಿರುವ ಕಾರ್ಮಿಕ–ವಿರೋಧಿ ಬದಲಾವಣೆಗಳನ್ನು ಪುನರುಚ್ಚರಿಸಿದರು! ಇದು ಮೋಸ, ವಂಚನೆಯಲ್ಲದೆ ಬೇರೇನು ಎಂದು ಸಿಐಟಿಯು ಪ್ರಶ್ನಿಸಿದೆ.

ಕೇಂದ್ರ ಬಜೆಟ್ 2017–18 ಪ್ರದರ್ಶಿಸಿರುವ ಕಾರ್ಮಿಕರ ಹಿತಗಳು ಮತ್ತು ಹಕ್ಕುಗಳನ್ನು ಕುರಿತಂತೆ ಇಂತಹ ಮೋಸದ ನಿಲುವನ್ನು ದುಡಿಯುವ ಜನಗಳು ವಿರೋಧಿಸಬೇಕು ಮತ್ತು ದೇಶವ್ಯಾಪಿಯಾಗಿ ಪ್ರತಿಭಟಿಸಬೇಕು ಎಂದು ಸಿಐಟಿಯು ಕರೆ ನೀಡಿದೆ.

ರೈಲ್ವೆ ವಿಸ್ತರಣೆಗೆ, ಸುರಕ್ಷಿತತೆಗೆ ಒತ್ತು ಇಲ್ಲ

ರೈಲ್ವೆ ಬಜೆಟನ್ನೂ ಒಳಗೊಂಡಿರುವುದು ಈ ಬಜೆಟಿನ ಒಂದು ವಿಶೇಷತೆ. ಏಕೆಂದರೆ ಹಿಂದಿನ ವರ್ಷಗಳಂತೆ ಇನ್ನು ಮುಂದೆ ಪ್ರತ್ಯೇಕ ರೈಲು ಬಜೆಟ್ ಸಲ್ಲಿಸುವುದಿಲ್ಲ ಎಂದು ಈ ಸರಕಾರ ನಿರ್ಧರಿಸಿದೆ. ಇದೂ ಅದರ ರಭಸದ ಖಾಸಗೀಕರಣದ ಒಂದು ಭಾಗ ಎಂದು ವಿಶ್ಲೇಷಿಸಲಾಗಿದೆ.

ಈ ಬಜೆಟಿನಲ್ಲಂತೂ ರೈಲ್ವೆಯ ವಿಸ್ತರಣೆಗಾಗಿ, ಇತ್ತೀಚಿನ ಸರಣಿ ಅಪಘಾತಗಳ ನಂತರವೂ ಅಥವ ಸುರಕ್ಷಿತತೆ ಹೆಚ್ಚಿಸಲು ಯಾವುದೇ ಅರ್ಥಪೂರ್ಣ ಕ್ರಮ ಕೈಗೊಳ್ಳದಿರುವುದು ಬಹಳಷ್ಟು ಜನರ ಗಮನಕ್ಕೆ ಬರದಂತಾಗಿದೆ. ಒಟ್ಟು ಕೇವಲ 10ಸಾವಿರ ಕೋಟಿ ರೂ.ಗಳನ್ನು ಹೆಚ್ಚಿಸಿರುವುದರಿಂದ ಹೊಸ ಲೈನುಗಳಿರಲಿ, ಈಗ ಕೈಗೊಂಡಿರುವ ಲೈನುಗಳ ಕಾಮಗಾರಿಗಳೂ ಪೂರ್ಣಗೊಳ್ಳುವ ಬಗ್ಗೆ ಸಂದೇಹ ಉಂಟಾಗಿದೆ ಎಂದು ಸಿಐಟಿಯು ಹೇಳಿದೆ.

ಇನ್ನೊಂದೆಡೆಯಲ್ಲಿ ರೈಲ್ವೆಯನ್ನು ಸ್ಪರ್ಧಾತ್ಮಕಗೊಳಿಸುವ ಹೆಸರಿನಲ್ಲಿ ರೈಲ್ವೆ ದರಗಳಲ್ಲಿ ಏರಿಕೆ ಮತ್ತು ರೈಲ್ವೆ ಸೇವೆಗಳ ಖಾಸಗೀಕರಣದ ಸಾಧ್ಯತೆಗಳು ಬಹಳ ಇವೆ ಎಂದು ಸಿಐಟಿಯು ಹೇಳಿದೆ.

ನೋಟುರದ್ಧತಿಯ ಹೊರೆ ಹೊತ್ತಿರುವ ಬಡವರು ಮತ್ತು ಮಹಿಳೆಯರಿಗೆ ಅವಮಾನ ಮಾಡುವ ಬಜೆಟ್: ಎಐಡಿಡಬ್ಲ್ಯುಎ

ನೋಟುನಿಷೇಧದಿಂದಾಗಿ ಉಂಟಾಗಿರುವ ಸಂಕಟಗಳನ್ನು ಹೆಚ್ಚಾಗಿ ಅನುಭವಿಸುತ್ತಿರುವವರು ಈ ದೇಶದ ಬಡಜನರು ಮತ್ತು ಮಹಿಳೆಯರು. ಹಣಕಾಸು ಮಂತ್ರಿಗಳು ತಮ್ಮ ಬಜೆಟ್ ಬಡಜನ–ಪರ, ರೈತಪರ ಎಂದು ಹೇಳಿಕೊಂಡರೂ, ಅದು ಬಡಜನರಿಗೆ ಮತ್ತು ಮಹಿಳೆಯರಿಗೆ ಅವಮಾನ ಮಾಡಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಟೀಕಿಸಿದೆ.

ಬಹಳಷ್ಟು ಮಹಿಳೆಯರಿಗೆ ಜೀವನಾಧಾರ ಒದಗಿಸಿರುವ ಹೈನು ಅಭಿವೃದ್ಧಿ ಮತ್ತು ಮೀನುಗಾರಿಕೆಗೆ 8000 ಕೋಟಿರೂ. ನೀಡಿ ಭಾರೀ ಬೆಳವಣಿಗೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಹಣಕಾಸು ಮಂತ್ರಿಗಳು ಹೇಳಿದ್ದಾರೆ. ಆದರೆ ಇದರಲ್ಲಿ ನಿರ್ದಿಷ್ಟವಾಗಿ ಮಹಿಳೆಯರಿಗೆಂದೇ ಹಣ ನೀಡಿಲ್ಲ.

ಕೃಷಿ ವಲಯದಲ್ಲಿ ಮಹಿಳೆಯರಿಗೆಂದೇ ಹಣನೀಡಿಕೆಯಿರುವ ಯೋಜನೆಯೆಂದರೆ ರಾಷ್ಟ್ರೀಯ ಆಹಾರ ಭದ್ರತಾ ಮಿಶನ್. ಆದರೆ ಲಿಂಗ ಬಜೆಟಿನಲ್ಲಿ ಇದಕ್ಕೆ ಮಾಡಿರುವ ಹೆಚ್ಚಳ ಕೇವಲ 60ಕೋಟಿ ರೂ. ವಾಸ್ತವವಾಗಿ ಇದು ಲಿಂಗ ಬಜೆಟಿನ ಬಿ ಭಾಗದಲ್ಲಿ ಕೂಡ ಇರಬೇಕಾಗಿಲ್ಲ, ಆದರೂ ಅದನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಬಹುಪಾಲು ಮಹಿಳೆಯರು ತಮ್ಮ ಬದುಕು ನಿರ್ವಹಿಸಲು ಕೃಷಿಯನ್ನು ಅವಲಂಬಿಸಿದ್ದಾರೆ. ಆದಕ್ಕೆ ಇಷ್ಟೇ ಹಣ ಒದಗಿಸಿರುವುದು, ಮುದ್ರಾ ಮತ್ತು ಇತರ ಸಾಲ ಗ್ಯಾರಂಟು ಸ್ಕೀಮುಗಳಿಗೆ 50ಶೇ. ಕಡಿತ ಮಾಡಿರುವುದು ಮಹಿಳೆಯರು ಮತ್ತು ಕೃಷಿಯ ಬಗ್ಗೆ ಈ ಸರಕಾರ ಹೊಂದಿರುವ ಉಪೇಕ್ಷೆಯ ಮುಂದುವರಿಕೆಯೇ ಆಗಿದ ಎಂದು ಎಐಡಿಡಬ್ಲ್ಯುಎ ಆಕ್ರೋಶ ವ್ಯಕ್ತಪಡಿಸಿದೆ.

ಆಹಾರ, ಸೀಮೆ ಎಣ್ಣೆ ಮತ್ತು ಅಡುಗೆ ಅನಿಲ ಸಬ್ಸಿಡಿಗಳು ಮಹಿಳೆಯರ ಮೇಲೆ ನೇರ ಪರಿಣಾಮ ಬೀರುವಂತವು. ಈ ಬಾಬ್ತುಗಳಿಗೆ 2015–16ರಲ್ಲಿ ಒಟ್ಟು ಬಜೆಟಿನ 9.ಶೇ. ಕೊಡಲಾಗಿತ್ತು. ಅದು ಈ 2017–18ರ ಬಜೆಟಿನಲ್ಲಿ 7.9ಶೇ.ಕ್ಕೆ ಇಳಿದಿದೆ. ಅಲ್ಲದೆ ಲಿಂಗ ಬಜೆಟಿನಲ್ಲಿ ಆಹಾರ ಮತ್ತು ಸೀಮೆ ಎಣ್ಣೆಯ ಭಾಗಗಳಿಲ್ಲ, ಅಡುಗೆ ಅನಿಲಕ್ಕೆ ಕೇವಲ 3200 ಕೋಟಿ ರೂ. ಕೊಡಲಾಗಿದೆ.

ಮಹಿಳೆಯರ ಸಮಸ್ಯೆಗಳನ್ನು ಗುರುತಿಸುವ ಪ್ರಯತ್ನಗಳೂ ಇಲ್ಲ. ಅಂಗನವಾಡಿ ,ಆಶ ಮುಂತಾದ ಸ್ಕೀಮ್ ಕೆಲಸಗಾರರ ಹಿತಗಳತ್ತ ಗಮನವನ್ನೇ ಕೊಟ್ಟಿಲ್ಲ

ಸರಕಾರ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರದ ಸಂದರ್ಭಕ್ಕೆ ಸ್ಪಂದಿಸಲು ಕೂಡ ವಿಫಲವಾಗಿದೆ. 2016–17ರ ಪರಿಷ್ಕೃತ ಅಂದಾಜಿನ ಪ್ರಕಾರ 'ನಿರ್ಭಯ ನಿಧಿಗೆ ನೀಡಿದ ಹಣ 585 ಕೋಟಿ ರೂ. ಅದನ್ನು ಈಗ 400 ಕೋಟಿ ರೂ.ಗೆ ಇಳಿಸಲಾಗಿದೆ. ಈ ಬಗ್ಗೆ ವಿವಿಧ ರಾಷ್ಟ್ರೀಯ ಮಹಿಳಾ ಸಂಘಟನೆಗಳು ಸಲ್ಲಿಸಿರುವ ಹಲವು ಸೂಚನೆಗಳನ್ನೆಲ್ಲ ಹಣಕಾಸು ಮಂತ್ರಿಗಳು ಉಪೇಕ್ಷಿಸಿದ್ದಾರೆ.

ಒಟ್ಟಿನಲ್ಲಿ, ಈ ಬಜೆಟ್ ನೋಟುರದ್ದತಿಯಿಂದ ಅಪಾರ ಕಷ್ಟಗಳನ್ನು ಅನುಭವಿಸಿರುವ ಮಹಿಳೆಯರ ಸಂಕಟಗಳ ಬಗ್ಗೆ ಅತೀವ ನಿರ್ಲಕ್ಷ್ಯವನ್ನು ತೋರಿದೆ ಎಂದಿರುವ ಎಐಡಿಡಬ್ಲ್ಯುಎ ಇದರ ವಿರುದ್ಧ ಮಹಿಳೆಯರು ತಮ್ಮ ದನಿಯೆತ್ತಬೇಕು, ಬಜೆಟನ್ನು ಹೆಚ್ಚು ಮಹಿಳಾ–ಸ್ನೇಹಿಯಾಗಿಸಲು ಸರಕಾರದ ಮೇಲೆ ಒತ್ತಡ ತರಬೇಕು ಎಂದು ಕರೆ ನೀಡಿದೆ.

ಗ್ರಾಮೀಣ ಬಡವರು ಮತ್ತು ಕೃಷಿಕಾರ್ಮಿಕರನ್ನು ನಿರ್ಲಕ್ಷಿಸಿ ಕಾರ್ಪೊರೇಟ್ ಕೃಷಿಕರಿಗೆ ನೆರವಾಗುವ ಬಜೆಟ್

ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ(ಎಐಎಡಬ್ಲ್ಯುಯು) 2017–18ರ ಬಜೆಟ್ ಗ್ರಾಮೀಣ ಬಡವರು ಮತ್ತು ಕೃಷಿಕಾರ್ಮಿಕರಿಗೆ ನಿರಾಶಾದಾಯಕ ಬಜೆಟ್ ಎಂದು ಟೀಕಿಸಿದೆ.

ಅದು ಗಾಮೀಣ ಭಾರತದ ಈ ವಿಭಾಗಗಳನ್ನು ನಿರ್ಲಕ್ಷಿಸಿದೆ. ಮನರೇಗಕ್ಕೆ, ಗ್ರಾಮೀಣ ಮೂಲರಚನೆಗೆ ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಹೆಚ್ಚಿನ ಹಣ ನೀಡಲಾಗಿದೆ ಎಂದು ಹೇಳಿದರೂ ಅದು ನೋಟುರದ್ಧತಿ ಮತ್ತು ನೈಸರ್ಗಿಕ ವಿಪತ್ತುಗಳಿಂದ ತತ್ತರಿಸುತ್ತಿರುವ ಗ್ರಾಮೀಣ ಬಡವರ ಸಮಸ್ಯೆಗಳ ಪರಿಹಾರಕ್ಕೆ ಏನೇನೂ ಸಾಲದಾಗಿದೆ. ರೈತರಿಗೆ–ಂದು ಬಜೆಟಿನಲ್ಲಿ ಸೂಚಿಸಿರುವ ಪರಿಹಾರಗಳು ಶ್ರೀಮಂತ ಮತ್ತು ಕಾರ್ಪೊರೇಟ್ ಕೃಷಿಕರಿಗೆ ಮಾತ್ರ ನೆರವಾಗುವಂತದ್ದು, ಬಡ ರೈತರಿಗೆ ಅದರಿಂದೇನೂ ಪ್ರಯೋಜನವಿಲ್ಲ ಎಂದು ಎಐಎಡಬ್ಲ್ಯುಯು ಹೇಳಿದೆ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕೊಟ್ಟಿರುವ ಹಣ ಸುಮಾರಾಗಿ ಕಳೆದ ವರ್ಷದಷ್ಟೇ ಇದೆ. ಇದರಲ್ಲಿ ಬಹುಪಾಲು ಹಿಂದಿನ ವರ್ಷದ ಕೂಲಿ ಬಾಕಿಗೇ ಹೋಗುತ್ತದೆ. ವಾಸ್ತವವಾಗಿ ನೋಟು ರದ್ದತಿಯಿಂದಾಗಿ ಈ ಕಾಯ್ದೆಯ ಸರಿಯಾದ ಜಾರಿಗೆ ಹಣನೀಡಿಕೆಯನ್ನು ಇಮ್ಮಡಿಗೊಳಿಸಬೇಕಾಗಿತ್ತು ಎಂದು ಎಐಎಡಬ್ಲ್ಯುಯು ಹೇಳಿದೆ.

ಬಹಳಷ್ಟು ಬಡವರನ್ನು ಆಹಾರ ಭದ್ರತೆಯ ಪಟ್ಟಿಗೆ ಸೇರಿಸಲಾಗಿಲ್ಲ. ಅವರಿಗೆ ಈ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಬಜೆಟ್ ಏನೂ ಹೇಳಿಲ್ಲ. ಸಾರ್ವಜನಿಕ –ಖಾಸಗಿ–ಪಾಲುದಾರಿಕೆ(ಪಿಪಿಪಿ) ಮೇಲೆ ಒತ್ತು ಮತ್ತು ಮೂಲರಚನೆಗೆ ಹೆಚ್ಚಿನ ಹಣನೀಡಿಕೆ ಕಾರ್ಪೊರೇಟ್‌ಗಳಿಗಷ್ಟೆ ಪ್ರಯೋಜನಕಾರಿ, ಡಿಜಿಟಲ್ ಆರ್ಥಿಕಕ್ಕೆ ನೀಡಿರುವ ಹೆಚ್ಚಿನ ಒತ್ತು ಕೂಡ ಮೂಲ ಅಗತ್ಯಗಳಿಂದಲೇ ವಂಚಿತರಾಗಿರುವ ಗ್ರಾಮೀಣ ಬಡವರಿಗೆ ಮತ್ತು ಪರಿಶಿಷ್ಟ ಜಾತಿ/ ಬುಡಕಟ್ಟು ಜನಗಳಿಗೆ ನಿರರ್ಥಕ ಎಂದಿರುವ ಎಐಎಡಬ್ಲ್ಯುಯು ಬಿಜೆಪಿ ಸರಕಾರದ ಈ ಶ್ರೀಮಂತ–ಪರ ಧೋರಣೆಗಳ ವಿರುದ್ಧ ಗ್ರಾಮೀಣ ಬಡವರನ್ನು ಅಣಿನೆರೆಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಮತ್ತು ಕಾರ್ಯಕರ್ತರಿಗೆ ಕರೆ ನೀಡಿದೆ.

ದಲಿತರ ಪರಿಸ್ಥಿತಿಯನ್ನು ಸುಧಾರಿಸುವ ಪ್ರಧಾನಿ ಭರವಸೆ ಹುಸಿಯಾಗಿದೆ– ಡಿಎಸ್‌ಎಂಎಂ

ದಲಿತರ ಕಲ್ಯಾಣ ಮತ್ತು ಅಭಿವೃದ್ಧಿಗೆ ಸಂಬಂಧಪಟ್ಟಂತೆ 2017–18ರ ಕೇಂದ್ರ ಬಜೆಟ್ ಸಂಪೂರ್ಣ ನಿರಾಶಾದಾಯಕ ಎಂದು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಅಭಿಪ್ರಾಯ ಪಟ್ಟಿದೆ.

ಪುಟ 14 ನೋಡಿ

ಆತ್ಮವಂಚನೆಯ ಕಸರತ್ತು : ಎಸ್‌ಎಫ್‌ಐ ಟೀಕೆ

ಕೇಂದ್ರ ಬಜೆಟ್ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಆತ್ಮವಂಚನೆಯ ಕಸರತ್ತು ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಸಮಿತಿ ವರ್ಣಿಸಿದೆ. ಇದು ಜನಸಮೂಹಗಳ ವಾಸ್ತವತೆಯನ್ನು ತಿಳಿಯಲು ನಿರಾಕರಿಸಿರುವ ಬಜೆಟ್. ಈಗ ಭಾರತದ ಜನಸಂಖ್ಯೆಯಲ್ಲಿ ಯುವಜನರ ಭಾಗ ಬಹಳ ದೊಡ್ಡದು, ಅದರ ಪೂರ್ಣ ಪ್ರಯೋಜನ ಪಡೆಯಲು ದೊಡ್ಡ ಪ್ರಮಾಣದಲ್ಲಿ ಶಿಕ್ಷಣದ ವಿಸ್ತರಣೆ ಅಗತ್ಯವಾಗಿರುವಾಗ ಸರಕಾರ ಈ ಬಜೆಟಿನಲ್ಲಿ ಪ್ರದರ್ಶಿಸಿರುವ ನಿಲುವೇ ಬೇರೆ. ಅದು ಶಿಕ್ಷಣದ ಎಲ್ಲ ವಿಭಾಗಗಳಲ್ಲೂ ಗುಣಮಟ್ಟವನ್ನು ಇಳಿಸುತ್ತದೆ ಎಂದು ಎಸ್‌ಎಫ್‌ಐ ಅಭಿಪ್ರಾಯ ಪಟ್ಟಿದೆ. ಯಾವ ವಿಭಾಗಕ್ಕೂ ಹಣನೀಡಿಕೆಯನ್ನು ಹೆಚ್ಚಿಸಿಲ್ಲ, ಕೇವಲ ಭರವಸೆಗಳಿವೆಯಷ್ಟೇ.

ಹಣಕಾಸು ಮಂತ್ರಿಗಳು ಯುಜಿಸಿಯನ್ನು ಸುಧಾರಿಸುವ, ಕಾಲೇಜುಗಳು, ವಿಶ್ವ ವಿದ್ಯಾಲಯಗಳಿಗೆ ಸ್ವಾಯತ್ತೆ ಕೊಡುವ ಬಗ್ಗೆ ಮಾತಾಡಿದ್ದಾರೆ. ಇದು ಈಗಾಗಲೇ ಶಿಕ್ಷಣದ ವಿವಧ ರಂಗಗಳಲ್ಲಿ ವಿಪರೀತ ಅಂತರಗಳನ್ನು ಉಂಟುಮಾಡಿರುವ ಯುಪಿಎ ಸರಕಾರ ಆರಂಬಿಸಿದ ಶೈಕ್ಷಣಿಕ ಧೋರಣೆಗಳ ಮುಂದುವರಿಕೆಯೇ ಆಗಿದೆ.

100 ಅಂತರ್ರಾಷ್ಟ್ರೀಯ ಕೌಶಲಕೇಂದ್ರಗಳನ್ನು ತೆರೆಯುವ ಬಗ್ಗೆ ಹೇಳಲಾಗಿದೆ. ಆದರೆ ಇದು ಕೂಡ ಈ ಸರಕಾರದ 'ಕೌಶಲ ಶಿಕ್ಷಣ' ಎಂಬ ಟೊಳ್ಳು ಘೋಷಣೆಗೆ ಅನುಗುಣವಾಗಿಯೇ ಇದೆ, ಏಕೆಂದರೆ ವಾಸ್ತವವಾಗಿ ಯುವಜನರ ಕೌಶಲಗಳನ್ನು ಇಲ್ಲದಂತೆ ಮಾಡುವುದೇ ಈ ಸರಕಾರದ ಧೋರಣೆಯ ದಿಕ್ಕು ಎಂದು ಎಸ್‌ಎಫ್‌ಐ ಹೇಳಿದೆ.

ಸಾರ್ವಜನಿಕ ವಲಯ ಉಳಿಸಿ, ಭಾರತ ಉಳಿಸಿ ಬೆಂಗಳೂರಿನಲ್ಲಿ ನೌಕರರ ಭಾರೀ ಪ್ರತಿಭಟನೆ ಮತ್ತು ಅಖಿಲ ಭಾರತ ಸಮಾವೇಶ

– ಕೆ. ಮಹಾಂತೇಶ



ಜಂಟಿ ಕ್ರಿಯಾ ರಂಗದ ನೇತೃತ್ವದಲ್ಲಿ ಸಾರ್ವಜನಿಕ ವಲಯದ ಸಾವಿರಾರು ಕಾರ್ಮಿಕರು ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಸಭೆಯನ್ನು ಬೆಂಗಳೂರು ನಗರದಲ್ಲಿ ನಡೆಸಿದರು. ನಗರದ ಸಿಟಿ ರೈಲ್ವೆ ನಿಲ್ದಾಣದಿಂದ ಪ್ರಾರಂಭವಾದ ಮೆರವಣಿಗೆಯು ಸ್ವಾತಂತ್ರ್ಯ ಉದ್ಯಾನವನದದಲ್ಲಿ ಕೊನೆಗೊಂಡಿತು. ಬೆಮೆಲ್, ಎಚ್‌ಎಎಲ್, ಬಿಇಎಲ್, ಬಿಎಚ್‌ಇಎಲ್, ಐಟಿಐ ಮತ್ತು ಭದ್ರಾವತಿಯ ವಿಐಎಸ್‌ಎಲ್ ಕಾರ್ಮಿಕರು ಮತ್ತು ಅಧಿಕಾರಿಗಳು ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮೋದಿ ಸರ್ಕಾರದ ಸಾರ್ವಜನಿಕ ವಲಯ ವಿರೋಧಿ ನೀತಿಯನ್ನು ಖಂಡಿಸಿ ಮತ್ತು ದೇಶದ ಹೆಮ್ಮೆಯ ಸಾರ್ವಜನಿಕ ಉದ್ಯಮಗಳ ಬಂಡವಾಳ ಹಿಂಪಡೆಯುವ ನೀತಿಗಳ ವಿರುದ್ಧ ನಡೆಸಲಾದ ಈ ಹೋರಾಟದಲ್ಲಿ ಸುಮಾರು 10 ಸಾವಿರಕ್ಕಿಂತ ಹೆಚ್ಚಿನ ನೌಕರರು ಭಾಗವಹಿಸಿದ್ದರು. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಉದ್ಯಮಗಳ ನೌಕರರು ನಡೆಸಿದ ಭಾರೀ ಪ್ರತಿಭಟನೆ ಇದಾಗಿತ್ತು.

ಸಾರ್ವಜನಿಕ ಉದ್ಯಮಗಳ ಮೇಲೆ ನೇರ ದಾಳಿ

ಮೋದಿ ಸರಕಾರ ಅಧಿಕಾರಕ್ಕೆ ಬಂದ ನಂತರ ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಮೇಲೆ ನೇರ ದಾಳಿ ಆರಂಭವಾಗಿದೆ. ಕಳೆದ ಮೂರು ತಿಂಗಳಲ್ಲಿ, ಬಯ್ ಬ್ಯಾಕ್ ಎಂಬ ವಿಚಿತ್ರವಾದ ಕ್ರಮದ ಮೂಲಕ ಕೇಂದ್ರ ಸರ್ಕಾರ ಎಚ್‌ಎಎಲ್ ಸಂಸ್ಥೆಯ 2300ಕೋಟಿ ರೂಗಳನ್ನು ತನ್ನ ಖರ್ಚಿಗೆ ತೆಗೆದುಕೊಂಡಿದೆ. ಈಗ ಬೆಮೆಲ್ ಸಂಸ್ಥೆಯನ್ನು ಖಾಸಗಿಯವರಿಗೆ ಹಸ್ತಾಂತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಸರ್ಕಾರವು ಬೆಮೆಲ್‌ನಲ್ಲಿ ತನ್ನ ಹೂಡಿಕೆಯನ್ನು ಶೇ.26ರಷ್ಟು ಖಾಸಗಿಯವರಿಗೆ ಮಾರಾಟ ತೀರ್ಮಾನಿಸಿ. ಅದನ್ನು ಖಾಸಗಿ ಸಂಸ್ಥೆಯನ್ನಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳುತ್ತಿದೆ. ಅದೇ ರೀತಿ ಜನರಲ್ ಇನ್ಶೂರೆನ್ಸ್ ಉದ್ಯಮದಲ್ಲೂ ಶೇರು ವಿಕ್ರಯ ಮಾಡಲು ತೀರ್ಮಾನಿಸಿದೆ. ಈ ನೀತಿಯ ಭಾಗವಾಗಿ ಬಿ.ಎಸ್.ಎನ್.ಎಲ್.ನ್ನು ಖಾಸಗೀಕರಿಸಿಸುವ ಹುನ್ನಾರ ನಡೆದಿದೆ. ಅದೇ ರೀತಿಯಲ್ಲಿ ಭದ್ರಾವತಿಯಲ್ಲಿರುವ ಸರ್.ವಿಶ್ವೇಶ್ವರಯ್ಯರವರ ಕನಸಿನ ಕೂಸಾದ ಸ್ಟೀಲ್ ಅಂಡ್ ಐರನ್ ಲಿ.(ವಿ.ಎಸ್.ಐ.ಎಲ್.) ಕಾರ್ಖಾನೆಗೆ ಅಗತ್ಯವಿರುವ ಕಬ್ಬಿಣದ ಅದಿರನ್ನು ಪೂರೈಸಲು ಗಣಿ ಒಂದನ್ನು ರಾಜ್ಯ ಸರ್ಕಾರ ನೀಡಿದಲ್ಲಿ. ಈ ಪ್ರಖ್ಯಾತ ಕಾರ್ಖಾನೆಯನ್ನು ಸಾರ್ವಜನಿಕ ಉದ್ದಿಮೆಯಾಗಿ ಉಳಿಸಲು ಸಾಧ್ಯವಿದೆ. ಆದರೆ ಈ ಕಾರ್ಖಾನೆಯನ್ನು ಖಾಸಗೀಕರಣ ಮಾಡಲು ಕೇಂದ್ರ ಸರ್ಕಾರ ನೇರ ದಾಳಿಗೆ ಇಳಿದಿದೆ.

ವ್ಯಾಪಕ ಪ್ರಚಾರಾಂದೋಲನ

ಕೇಂದ್ರ ಸರಕಾರದ ಈ ಧೋರಣೆಗಳ ವಿರುದ್ಧ ರಾಜ್ಯದ ಕೆ.ಜಿ.ಎಫ್, ಭದ್ರಾವತಿ, ಮೈಸೂರು ಹಾಗೂ ಬೆಂಗಳೂರಿನ ಹೆಚ್.ಎ.ಎಲ್, ಬಿ.ಇ.ಎಲ್, ಬಿ.ಎಚ್.ಇ.ಎಲ್, ಹೆಚ್.ಎ.ಎಲ್, ಬಿಇಎಂಎಲ್ ಮುಂತಾದ ಸಾರ್ವಜನಿಕ ಉದ್ಯಮಗಳ ಗೇಟ್‌ಗಳ ಮುಂದೆ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಂಜೆ ಹೊತ್ತಿನ ಗೇಟ್ ಮೀಟಿಂಗುಗಳನ್ನು ಜಂಟಿ ಕ್ರಿಯಾ ರಂಗ (ಜೆ.ಎ.ಎಫ್.) ನೇತೃತ್ವದಲ್ಲಿ ನಡೆಸಲಾಯಿತು ಮತ್ತು ಅಲ್ಲೆಲ್ಲಾ ನೌಕರರು ಮತ್ತು ವಿವಿಧ ಯೂನಿಯನ್‌ಗಳ ನಾಯಕರು ಪಕ್ಷಭೇಧ ಮರೆತು ಕೇಂದ್ರ ಸರಕಾರ ನಡೆಯನ್ನು ಖಂಡಿಸಿದರು. ಮತ್ತು ಈ ಎಲ್ಲಾ ಸಭೆಗಳಲ್ಲೂ ಸಾವಿರಾರು ಕಾರ್ಮಿಕರು ಭಾಗವಹಿಸಿ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಫ್ರೀಡಂ ಪಾರ್ಕನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಕೈಗೊಂಡ ಪ್ರತಿಜ್ಞಾವಿಧಿ

ನಾವು ಸಾರ್ವಜನಿಕ ಉದ್ಯಮಗಳ ಕಾರ್ಮಿಕರು, ದೇಶದ ಪ್ರಜ್ಞಾವಂತ ಪ್ರಜೆಗಳಾಗಿ ಈ ದಿನ ಕೆಳಕಂಡ ಸ್ವೀಕರಿಸುತ್ತಿದ್ದೇವೆ... "ದೇಶದ ಆರ್ಥಿಕತೆಗೆ, ತಂತ್ರಜ್ಞಾನಕ್ಕೆ ಹಾಗೂ ಭದ್ರತೆಗೆ ಪ್ರಮುಖ ಕೊಡುಗೆಯನ್ನು ಕೊಡುತ್ತಿರುವ ಸಾರ್ವಜನಿಕ ಉದ್ಯಮಗಳ ಖಾಸಗೀಕರಣವನ್ನು ವಿರೋಧಿಸುತ್ತೇವೆ. ಎಂತಹುದೇ ಸವಾಲುಗಳು ಎದುರಾದರೂ ದೇಶದ ಜನರ ಆಸ್ತಿಯಾಗಿರುವ ಸಾರ್ವಜನಿಕ ಉದ್ಯಮಗಳನ್ನು ಯಾವುದೇ ಸ್ವರೂಪದಲ್ಲಿಯೂ ಖಾಸಗೀ ಕಾರ್ಪೋರೇಟ್ ಕಂಪನಿಗಳಿಗೆ ಹಸ್ತಾಂತರಿಸಲು ಬಿಡುವುದಿಲ್ಲ ಎಂಬ ಎಚ್ಚರಿಕೆಯನ್ನು ಆಳುವ ಸರಕಾರಗಳಿಗೆ ನೀಡುತ್ತಿದ್ದೇವೆ. ದೇಶದ ಸಂಪತ್ತನ್ನು ಉಳಿಸುತ್ತೇವೆ ಮತ್ತು ಖಾಸಗೀಕರಣದ ಪಿತೂರಿಗಳನ್ನು ಹಿಮ್ಮೆಟ್ಟಿಸುತ್ತೇವೆ."

ಈ ಎಲ್ಲಾ ಸಭೆಗಳಲ್ಲೂ ಜೆಎಎಫ್ ಸಂಚಾಲಕ ಮೀನಾಕ್ಷೀ ಸುಂದರಂ ಮತ್ತಿತರೆ ನಾಯಕರು ಪಾಲ್ಗೊಂಡು ಮೋದಿ ಸರಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಜನವರಿ 28 ರ ಭಾರೀ ಪ್ರತಿಭಟನೆ

ಬೆಂಗಳೂರು ನಗರದ ಸಿಟಿ ರೈಲ್ವೆ ನಿಲ್ದಾಣದಿಂದ ಪ್ರಾರಂಭವಾದ ಮೆರವಣಿಗೆಯು ಸ್ವಾತಂತ್ರ್ಯ ಉದ್ಯಾನವನದದಲ್ಲಿ ಕೊನೆಗೊಂಡಿತು. ನಂತರ ನಡೆದ ಸಭೆಯಲ್ಲಿ ಮಾತನಾಡಿದ ಇಂಟಕ್‌ನ ರಾಷ್ಟ್ರೀಯ ಅಧ್ಯಕ್ಷ ಡಾ॥ ಸಂಜೀವ ರೆಡ್ಡಿ ಅವರು ಪ್ರತಿಭಟನಾಕಾರರನ್ನು ಉದ್ದೇಶಿಸಿ, ಮೋದಿ ಸರ್ಕಾರವು ನೋಟು ರದ್ದು ಮಾಡಿ ಜನತೆಯ ಬದುಕನ್ನು ನರಕ ಮಾಡಿದೆ. ಮೋದಿ ಅವರು ದೇಶವನ್ನು ಜೂಜುಕೋರ ಬಂಡವಾಳಗಾರರಿಗೆ ವ್ಯಾಪಾರ ಮಾಡುತ್ತಿದ್ದಾರೆ. ಸಾರ್ವಜನಿಕ ವಲಯದ ಕಾರ್ಮಿಕರು ಐಕ್ಯತೆಯಿಂದ ಇದ್ದು, ಹೋರಾಟವನ್ನು ತೀವ್ರಗೊಳಿಸಬೇಕೆಂದು ಅವರು ಕರೆ ನೀಡಿದರು. ಸಾರ್ವಜನಿಕ ವಲಯದ ಮಹತ್ವವನ್ನು ಜನಸಾಮಾನ್ಯರಿಗೆ ತಿಳಿಸಿಕೊಡಲು ಬೃಹತ್ ಜಾಗ್ರತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಅವರು ಕರೆ ನೀಡಿದರು.

ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಸಭಾ ಸದಸ್ಯ ತಪನ್ ಸೇನ್, ಬಂಡವಾಳಗಾರರಿಗೆ ಸಹಾಯ ಮಾಡ ಹೊರಟಿರುವ ಕಾರ್ಮಿಕರು ಮೋದಿ ಸರ್ಕಾರದ ಹುನ್ನಾರವನ್ನು ಸೋಲಿಸಬೇಕೆಂದು ಕರೆನೀಡಿದರು. ಸಾರ್ವಜನಿಕ ಉದ್ಯಮಗಳನ್ನು ಖರೀದಿಸಲು ಮುಂದಾಗುವ ಅನೇಕ ಬಂಡವಾಳಗಾರರೂ ನಮ್ಮ ದೇಶದಲ್ಲಿ ಸಹಾ ವಾಸವಾಗಿಲ್ಲ. ಬೆಮೆಲ್ ಸಂಸ್ಥೆಯ ಮಾರಾಟ ಮತ್ತು ಎಚ್‌ಎಎಲ್ ಮತ್ತು ಬಿಇಎಲ್‌ನ್ನು ದುರ್ಬಲ ಗೊಳಿಸಿದರೆ ರಾಷ್ಟ್ರದ ಸಾರ್ವಭೌಮತೆಗೆ ಅಪಾಯವಿದೆ ಎಂದು ಅವರು ನುಡಿದರು. ಎಐಟಿಯುಸಿ ರಾಷ್ಟ್ರೀಯ ಮುಖಂಡ ಹೆಚ್. ಮಹಾದೇವನ್, ವಿಮಾ ನೌಕರರ ಸಂಘದ ಅಖಿಲ ಭಾರತ ಅಧ್ಯಕ್ಷರಾದ ಅಮಾನುಲ್ಲಾ ಖಾನ್ ಸೇರಿದಂತೆ ಜೆಎಎಫ್ ಮುಖಂಡರು ಈ ಸಭೆಯನ್ನುದ್ದೇಶಿಸಿ ಮಾತನಾಡಿದರು. ಈ ಸಭೆಯಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಸ್ವದೇಶ ದೇವರಾಯ್, ಮೀನಾಕ್ಷಿ ಸುಂದರಮ್, ಅಧಿಕಾರಿಗಳ ರಾಷ್ಟ್ರೀಯ ಸಂಘಟನೆಯ ಮಹಾಪೋಷಕ ಅಶೋಕ್ ರಾವ್, ಮತ್ತಿತರು ಉಪಸ್ಥಿತರಿದ್ದರು.

ಜನವರಿ 29ರ ರಾಷ್ಟ್ರೀಯ ಸಮಾವೇಶ

ಸಾರ್ವಜನಿಕ ವಲಯದ ಕಾರ್ಮಿಕರ ರಾಷ್ಟ್ರೀಯ ಜಂಟಿ ಸಮಾವೇಶವು ಜನವರಿ 29 ರಂದು ಜಾಲಹಳ್ಳಿಯಲ್ಲಿರುವ ಭಾರತ್ ಎಲೆಕ್ಟ್ರಾನಿಕ್ಸ್ ನಲ್ಲಿರುವ ಕುವೆಂಪು ಸಭಾಂಗಣದಲ್ಲಿ ನಡೆಯಿತು. ಈ ಸಮಾವೇಶದಲ್ಲಿ ದೇಶದ ವಿವಿಧ ಮೂಲೆಗಳಿಂದ ಆಗಮಿಸಿದ್ದ ಸುಮಾರು 400 ಕಾರ್ಮಿಕ ಮುಖಂಡರು ಪಾಲ್ಗೊಂಡಿದ್ದರು. ಪಾಲ್ಗೊಂಡ ಪ್ರತಿನಿಧಿಗಳೆಲ್ಲರೂ ಮೋದಿ ಸರ್ಕಾರದ ಜನವಿರೋಧಿ ಖಾಸಗೀಕರಣ ನೀತಿಯನ್ನು ಖಂಡಿಸಿದರಲ್ಲದೆ, ಅದರ ವಿರುದ್ಧ ಹೋರಾಟ ಮಾಡಲು ತೀರ್ಮಾನಿಸಿದ್ದಾರೆ. ಮೋದಿ ಅವರ ನೀತಿಗಳಿಂದ ರಾಷ್ಟ್ರೀಯ ಸಾರ್ವಭೌಮತೆಗೆ ಧಕ್ಕೆಯಾಗುತ್ತಿದ್ದು, ಸಾರ್ವಜನಿಕ ವಲಯವನ್ನು ನಾಶ ಮಾಡಿ, ಫ್ಯಾಸಿಸ್ಟ್ ಹಿಂದು ರಾಷ್ಟ್ರವನ್ನು ನಿರ್ಮಿಸುವ ಕಾರ್ಯದಲ್ಲಿ ಸರ್ಕಾರ ತೊಡಗಿದೆ ಎಂದು ಪಾಲ್ಗೊಂಡ ಪ್ರತಿನಿಧಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ನೀತಿ ಆಯೋಗದ ಶಿಫಾರಸಿನಂತೆ ಬೆಮೆಲ್ ಮತ್ತು ಭದ್ರಾವತಿಯ ಉಕ್ಕಿನ ಕಾರ್ಖಾನೆಗಳಲ್ಲದೆ ಅನೇಕ ಸಾರ್ವಜನಿಕ ಉದ್ಯಮಗಳ ಬಂಡವಾಳ ಹಿಂತೆಗೆತವನ್ನು ಅವರು ಖಂಡಿಸಿದ್ದರಲ್ಲದೆ, ಅದರ ವಿರುದ್ಧ ಶತಾಯ–ಗತಾಯ ದೃಢ ಹೋರಾಟ ಮಾಡಬೇಕೆಂದು ನಿಶ್ಚಯಿಸಿದ್ದಾರೆ.

ಸಾರ್ವಜನಿಕ ವಲಯದ ಕಾರ್ಮಿಕರ ವೇತನವು ಈ ವರ್ಷದ ಜನವರಿ 1ರಿಂದ ಪರಿಷ್ಕರಣೆಯಾಗಬೇಕಿದ್ದು, ಆ ಬಗ್ಗೆಯೂ ಈ ಸಮಾವೇಶ ಚರ್ಚಿಸಿತು. ಅತೀ ಶೀಘ್ರದಲ್ಲಿಯೇ ಐದು ವರ್ಷಗಳ ವೇತನ ಪರಿಷ್ಕರಣೆಯನ್ನು ಸಾಧಿಸಬೇಕೆಂದು ಈ ಸಮಾವೇಶವು ನಿರ್ಧರಿಸಿದೆ.

ಕೈಗಾರಿಕಾ ಮಟ್ಟದ / ವಲಯ ಮಟ್ಟದ ಸಾರ್ವಜನಿಕ ಉದ್ಯಮ ಮಟ್ಟದ ಸಮಾವೇಶಗಳನ್ನು ಎಲ್ಲಾ ಹಂತದಲ್ಲಿಯೂ ಫೆಬ್ರವರಿ 28ರೊಳಗೆ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಬೆಂಗಳೂರಿನಲ್ಲಿ ಬೆಮೆಲ್ ಉಳಿಸಲು ನಡೆಯುತ್ತಿರುವ ಸಹಿ ಸಂಗ್ರಹ ಚಳವಳಿಯನ್ನು ತೀವ್ರಗೊಳಿಸಲು ನಿರ್ಧರಿಸಲಾಗಿದೆ. ಧರಣಿ ಮತ್ತು ಇತರ ಬಗೆಯ ಸತ್ಯಾಗ್ರಹ ಕಾರ್ಯಕ್ರಮಗಳನ್ನು 2017ರ ಮಾರ್ಚ್ 20ರೊಳಗೆ ಕೈಗೊಳ್ಳಬೇಕು. ಮಾರ್ಚ್ 30ರಂದು ಅಖಿಲ ಭಾರತ ಪ್ರತಿಭಟನಾ ದಿನ, ನವದೆಹಲಿಯಲ್ಲಿ ಬಜೆಟ್ ಅಧಿವೇಶನದ ಉತ್ತರಾರ್ಧದಲ್ಲಿ ರಾಷ್ಟ್ರೀಯ ಸಮಾವೇಶವನ್ನು ಯೋಜಿಸಲಾಗಿದೆ. ಅಖಿಲ ಭಾರತ ಮುಷ್ಕರದ ದಿನಾಂಕವನ್ನು ಸದ್ಯದಲ್ಲಿಯೇ ನಿರ್ಧರಿಸಿ ಪ್ರಕಟಿಸಲಾಗುವುದೆಂದು ಈ ಸಮಾವೇಶದಲ್ಲಿ ನಿರ್ಧರಿಸಲಾಯಿತು.





ಜಾಲಹಳ್ಳಿಯಲ್ಲಿರುವ ಭಾರತ್ ಎಲೆಕ್ಟ್ರಾನಿಕ್ಸ್ ನಲ್ಲಿರುವ ಕುವೆಂಪು ಸಭಾಂಗಣದಲ್ಲಿ ಸಿಐಟಿಯುವಿನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಸಭಾ ಸದಸ್ಯ ತಪನ್ ಸೇನ್ ಮಾತನಾಡುತ್ತಿರುವುದು.

ನೋಟು ರದ್ಧತಿಯ ನಂತರ ಈಗ 'ಯುಬಿಐ' ವಿಚಾರ



ಈ ಬಾರಿಯ ಆರ್ಥಿಕ ಸರ್ವೇಕ್ಷಣೆಯಲ್ಲಿ ಹೊಸದೊಂದು ಸಂಗತಿಯನ್ನು ತೇಲಿ ಬಿಡಲಾಗಿದೆ– ಯುಬಿಐ. ಕನಿಷ್ಟಕೂಲಿಗೆ ಕಾನೂನು ತರಲು ಹಿಂಜರಿಯುವವರು ಈಗ ಅದಕ್ಕೆ ಪರ್ಯಾಯವೆನ್ನುವಂತೆ ಈ ಯುಬಿಐ ಅಂದರೆ 'ಸಾರ್ವತ್ರಿಕ ಮೂಲ ಆದಾಯ'(ಯುನಿವರ್ಸಲ್ ಬೇಸಿಕ್ ಇನ್‌ಕಂ–ಯುಬಿಐ) ಎಂಬ ಬಗ್ಗೆ ಮಾತಾಡಲಾರಂಭಿಸಿದ್ದಾರೆ. 'ಒಳ್ಳೆಯ ದಿನ'ಗಳ ರೂವಾರಿಗಳೂ ಈಗ ಈ ಪರಿಕಲ್ಪನೆಯ ಬಗ್ಗೆ ಒಲವು ತೋರಿಸಲಾರಭಿಸಿದ್ದಾರೆ.

ಏನಿದು ಸಾರ್ವತ್ರಿಕ ಮೂಲ ಆದಾಯ, ಅಥವ ಯುಬಿಐ? ಸರಳವಾಗಿ ಇದು ಎಲ್ಲ ನಾಗರಿಕರಿಗೆ ಕನಿಷ್ಟ ಮಟ್ಟದ ಆದಾಯ ಲಭ್ಯವಾಗುವಂತೆ ಮಾಡಬೇಕು ಎಂಬ ವಿಚಾರ. ತಲಾ ಆದಾಯ ಬಡತನದ ರೇಖೆಗಿಂತ ಕೆಳಗೆ ಇದ್ದರೆ, ನಿಜವಾದ ಆದಾಯ ಮತ್ತು ಬಡತನದ ರೇಖೆಯ ಆದಾಯದ ನಡುವಿನ ಸರಾಸರಿ ಅಂತರವನ್ನು ಅಂದಾಜು ಮಾಡಿ ಸರಕಾರ ಅಂತವರ ಖಾತೆಗೆ ನಗದು ವರ್ಗಾವಣೆ ಮಾಡುವುದು ಅಥವ ಒಂದು ಕನಿಷ್ಟ ಘನತೆಯ ಬದುಕಿಗೆ ಬೇಕಾಗುವ ಆದಾಯವನ್ನು ಅಂದಾಜು ಮಾಡಿ ಅಷ್ಟು ಲಭ್ಯವಾಗುವಂತೆ ಮಾಡುವುದು ಈ ಪರಿಕಲ್ಪನೆಯ ಸಾರಾಂಶ.

ಮೇಲ್ನೋಟಕ್ಕೆ ಇದು ಆಕರ್ಷಕವೆನಿಸುತ್ತದೆ. ಕಪ್ಪುಹಣ ನಿಮೂಲ ಮಾಡಲು ನಿಟುರದ್ದತಿಯ ಪ್ರಹಾರದಂತೆ. ಆದರೆ ಇದನ್ನು ಬಡತನದ ಸಮಸ್ಯೆಗೆ ಪರಿಹಾರ ಒದಗಿಸುವ ಒಂದು ಧೋರಣೆಯೆಂದು ಕಾಣಲು ಸಾಧ್ಯವಿಲ್ಲ ಎನ್ನುತ್ತಾರೆ ವಾಸ್ತವಾಂಶಗಳ ಆಧಾರದಲ್ಲಿ ವಿಶ್ಲೇಷಣೆ ಮಾಡಿರುವ ಪರಿಣಿತರು.

ಮೂಲಭೂತವಾಗಿ ಆದಾಯ ಎಂದರೆ ಅದು ಉತ್ತಮ ಬದುಕಿನ ಗುರಿಯತ್ತ ಸಾಗುವ ಸಾಧನ ಮಾತ್ರ. ಆದಾಯ ಹೆಚ್ಚಿಸಿದ ಮಾತ್ರಕ್ಕೆ ಉತ್ತಮ ಬದುಕು ಸಿಗುತ್ತದೆ ಎಂದು ಹೇಳುವಂತಿಲ್ಲ. ಇದು ಒಂದು ಸಮಾಜ ಅಥವ ದೇಶ ತನ್ನ ನಾಗರಿಕರಿಗೆ ಒದಗಿಸುವ ಸೌಲಭ್ಯಗಳನ್ನು ಅವಲಂಬಿಸಿರುತ್ತದೆ. ಒಂದು ಸರಕಾರ ತನ್ನ ನಾಗರಿಕರಿಗೆ ಉತ್ತಮ ಬದುಕಿನ ಶಿಕ್ಷಣ , ಆರೋಗ್ಯ ಮುಂತಾದ ಮೂಲ ಸೌಲಭ್ಯಗಳನ್ನು ಕೊಡದೆ ನಗದು ವರ್ಗಾವಣೆ ಮಾಡಿದರೆ ಅವನ್ನೆಲ್ಲ ನಾಗರಿಕರು ಬೇಕಾದರೆ 'ಮಾರುಕಟ್ಟೆ'ಯಿಂದ ಖರೀದಿಸಲಿ ಎಂದು ಹೇಳಿದಂತೆ. ಅವು ಮಾರುಕಟ್ಟೆಯಲ್ಲಿ ಲಭ್ಯವಾಗಿರದಿದ್ದರೆ, ಅಥವ ಲಭ್ಯವಾಗಿದ್ದೂ ಖಾಸಗಿಯವರ ಕೈಗಳಲ್ಲಿದ್ದು ಸಾಮಾಜಿಕ ಕಾರಣಕ್ಕೋ, ಆರ್ಥಿಕ ಕಾರಣಕ್ಕೋ ಅವರ ಕೈಗೆಟಿಕದಂತಿದ್ದರೆ? ಇಯತಹ ನಗದು ವರ್ಗಾವಣೆ ಆಗ ಕನಿಷ್ಟ ಜೀವನ ಮಟ್ಟವನ್ನು ಹೇಗೆ ಲಭ್ಯಗೊಳಿಸಬಲ್ಲುದು?.

ಈ ಕಾರಣಕ್ಕೆ ಸಿಪಿಐ(ಎಂ) ಮತ್ತು ಇತರ ಪ್ರಗತಿಶೀಲರು ಭಾರತದ ವಾಸ್ತವತೆಗಳ ಸಂದರ್ಭದಲ್ಲಿ ಈ ವಿಚಾರವನ್ನು ವಿರೋಧಿಸುತ್ತಿದ್ದಾರೆ. ಆದರೆ ಇದೇ ಕಾರಣಕ್ಕಾಗಿ ಮೋದಿ ಸರಕಾರ ಈ ವಿಚಾರವನ್ನು ಈಗ ತೇಲಿ ಬಿಟ್ಟಿದೆ ಎಂದು ಬೇರೆ ಹೇಳಬೇಕಾಗಿಲ್ಲ.

ಈಗ ದೇಶದ ಕೋಟ್ಯಂತರ ಬಡವರಿಗೆ ಸ್ವಲ್ಪವಾದರೂ ಪರಿಹಾರ ಒಗದಗಿಸುತ್ತಿರುವ ಪಡಿತರ ವ್ಯವಸ್ಥೆ, ಮನರೇಗ, ಸರ್ವ ಶಿಕ್ಷಾ ಅಭಿಯಾನ್, ಮಧ್ಯಾಹ್ನದ ಊಟ ಮುಂತಾದವು ಭ್ರಷ್ಟಾಚಾರಗಳಿಂದ ತುಂಬಿವೆ, ಅದರಲ್ಲಿ ಸರಕಾರದ ಸಂಪನ್ಮೂಲಗಳು ಸೋರಿ ಹೋಗುತ್ತಿವೆ, ಅದಕ್ಕೆ ಒಂದೇ ಪರಿಹಾರವೆಂದರೆ ಇವನ್ನೆಲ್ಲ ರದ್ದು ಮಾಡುವುದು, ಮತ್ತು ಅದರ ಬದಲಿಗೆ ಅದಕ್ಕೆ ಸಮನಾದ ಹಣವನ್ನು ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡುವುದು ಈ ಯುಬಿಐನ ವಾಸ್ತವ ರೂಪ.

ಅಂದರೆ ಸರಕಾರ ನಾಗರಿಕರಿಗೆ ಮೂಲಭೂತ ಸೇವೆ–ಸೌಕರ್ಯಗಳನ್ನು ಒದಗಿಸುವ ಹೊಣೆಯಿಂದ ಮುಕ್ತಗೊಂಡು(ತಪ್ಪಿಸಿಕೊಂಡು) ಅವನ್ನೆಲ್ಲ ಖಾಸಗಿಯವರಿಗೆ ವಹಿಸುವುದು, ಆ ಸೌಕರ್ಯಗಳ ಒಂದಂಶವನ್ನು ಸಬ್ಸಿಡಿಯಾಗಿ ಹಣದ ರೂಪದಲ್ಲಿ ನಗದು ವರ್ಗಾವಣೆ ಮಾಡಿ ಕೈತೊಳೆದುಕೊಳ್ಳುವುದು.

ಅಂದರೆ ಮೂಲತಃ ಇದು ನಗದು ವರ್ಗಾವಣೆಯ ಮೇಲೆ ನಿಂತಿರುವ ವಿಚಾರ, ಬಡತನದ ಪ್ರಶ್ನೆಗೆ ನವ–ಉದಾರವಾದಿ ಪರಿಹಾರ. ಈಗ ನಾವು ಕಾಣುತ್ತಿರುವ 'ಒಳ್ಳೆಯ ದಿನ'ಗಳ ವಾಸ್ತವತೆಗೆ ಅನುಗುಣವಾದ ವಿಚಾರ. ಆದ್ದರಿಂದಲೇ ಅದಕ್ಕೆ ಈಗ ನಮ್ಮ ದೇದಲ್ಲಿ ಅಧಿಕೃತ ಮಾನ್ಯತೆ ಸಿಗುವ ಲಕ್ಷಣಗಳಿವೆ.

ಇಲ್ಲಿ ಸಹಜವಾಗಿ ಏಳುವ ಪ್ರಶ್ನೆ ಸರಕಾರದ ನಗದು ವರ್ಗಾವಣೆಯಿಂದ ಬಡಜನರಿಗೆ ಮೂಲ ಸೌಕರ್ಯಗಳನ್ನು 'ಖರೀದಿಸಲು' ಸಾಧ್ಯವೇ? ಹಣದುಬ್ಬರದಿಂದ ಅಥವ ಬೇರೆ ಕಾರಣಗಳಿಂದ ಅವು ತುಟ್ಟಿಯಾದರೆ ಸರಕಾರ ಅದಕ್ಕೆ ಅನುಗುಣವಾಗಿ ನಗದು ವರ್ಗಾವಣೆಯನ್ನು ತಂತಾನೇ ಹೆಚ್ಚಿಸುವುದೇ? ಇದುವರೆಗಿನ ಅನುಭವಗಳ ಪ್ರಕಾರ ಇವುಗಳೆಲ್ಲದರ ಉತ್ತರಗಳು 'ಇಲ್ಲ' ಎಂದೇ ತಾನೇ?


ಅಲ್ಲದೆ ನಗದು ವರ್ಗಾವಣೆ ಅವನ್ನು ಯಾವ ಸೇವೆಗಳಿಗಾಗಿ ಕೊಡಲಾಗುತ್ತಿದೆಯೋ ಅವಕ್ಕೆ ಬಳಕೆಯಾಗದಿರಬಹುದ, ಅಥವ ಸೇವೆಗಳ ಲಭ್ಯತೆಗೆ ಅಂದರೆ ಶಿಕ್ಷಣ, ಆರೋಗ್ಯ ಮುಂತಾದವುಗಳನ್ನು ಪಡೆಯವುದಕ್ಕೆ ಸಮನಾಗದು. ಮನೆಗಳನ್ನು ವಾಸ್ತವವಾಗಿ ನಡೆಸುವ ಮಹಿಳೆಯರು ಸಾಮಾನ್ಯವಾಗಿ ನಗದಿಗಿಂತ ವಸ್ತುರೂಪದಲ್ಲೇ ,ಅಂದರೆ ರೇಶನ್‌ನಿಂದ ಅಕ್ಕಿ, ಮಕ್ಕಳಿಗೆ ಶಾಲೆಗಳಲ್ಲಿ ಮಧ್ಯಾಹ್ನದ ಊಟ, ಪುಕ್ಕಟೆ ಕಡ್ಡಾಯ ಶಿಕ್ಷಣ ಮೂಮತಾದವುಗಳನ್ನು ಬಯಸುತ್ತಾರೆ ಎಂದು ಅಧ್ಯಯನಗಳಿಮದ ಕಂಡು ಬಂದಿದೆ ಎಂದು ಪರಿಣಿತರು ಹೇಳುತ್ತಾರೆ.

ಮತ್ತೊಂದು ಆಂಶವೆಂದರೆ, ಈ ಯುಬಿಐ ಮಾದರಿಗಳು ಅಭಿವೃದ್ಧಿ ಹೊಂದಿರುವ ಆರ್ಥಿಕ ವ್ಯವಸ್ಥೆಗಳಲ್ಲಿ ಯಶಸ್ವಿಯಾಗಿವೆ, ನಮ್ಮಂತಹ ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕ ವಯವಸ್ಥೆಗಳಲ್ಲಿ ಯಶಸ್ವಿಯಾಗಿಲ್ಲ. ಎಂದೂ ಅಧ್ಯಯನಗಳು ತಿಳಿಸುತ್ತವೆ. ನಮ್ಮ ಇದುವರೆಗಿನ ಅನುಭವಗಳೂ ಇದನ್ನೇ ತೋರಿಸುತ್ತವೆ.

ಕೊನೆಯದಾಗಿ, ಸರಕಾರದ ಕಾರ್ಯಕ್ರಮಗಳಲ್ಲಿ ನಾವೀಗಾಗಲೇ ಬಹಳಷ್ಟು ವಿಳಂಬಗಳನ್ನು ಕಾಣುತ್ತಿದ್ದೇವೆ. ಪೆನ್ಶನ್‌ನ ಅಲ್ಪ ಹಣಗಳನ್ನು ಪಡೆಯಲೂ ಬಡವರು ಹಲವು ಬಾರಿ ಬ್ಯಾಂಕುಗಳು, ಪೋಸ್ಟಾಫೀಸುಗಳಿಗೆ ಅಲೆದಾಡುವುದನ್ನು ಕಾಣುತ್ತಿದ್ದೇವೆ. ಈ ಯುಬಿಐ ವರ್ಗಾವಣೆಗಲಲ್ಲಿ ಹಾಗಾಗುವುದಿಲ್ಲ ಎಂದು ಹೇಲಲು ಸಾದ್ಯವಿಲ್ಲ. ಹಾಗಾದಾಗ, ಫಲಾನುಭವಿಗಳ ಮುಂದೆ ಎರಡೇ ದಾರಿಗಳಿರುತ್ತವೆ: ಶಿಕ್ಷಣ, ಆರೋಗ್ಯ ಮುಂತಾದವುಗಳ "ಖರೀದಿ'ಯನ್ನು ಕೈಬಿಡಬೇಕು ಅಥವ ಸಾಲ ತರಬೇಕು, ಅದಕ್ಕೆ ಬಡ್ಡಿ ತೆರಬೇಕು, ಅಂದರೆ ನಗದಿನ ಮೌಲ್ಯ ಇನ್ನಷ್ಟು ಕಡಿಮೆಯಾಗುತ್ತದೆ. ಇದು ಕೇವಲ ಕಲ್ಪನೆಯಲ್ಲ ಎಂಬುದು ನಮ್ಮ ಸುತ್ತಲಿನ ವಾಸ್ತವತೆಯ ಅರಿವಿದ್ದವರಿಗೆ ಖಂಡಿತಾ ಅನಿಸಲಾರದು.

ಆರ್ತಿಕ ಸರ್ವೆ ಈ ವಿಚಾರವನ್ನು ಸರಕಾರದ ಸಾಮಾಜಿಕ ಪಾತ್ರವನ್ನು ಪುನರ್‍ರೂಪಿಸುವ ಒಮದು ಸಾಧನವಾಗಿ ಕಂಡಿರುವಂತೆ ಕಾಣುತ್ತದೆ. ಸರಕಾರ ತಾನಾಗಿ ಯಾವುದೇ ಸೇವೆಗಳನ್ನು ನೇರವಾಗಿ ಒದಗಿಸುವುದಿಲ್ಲ, 'ಮುಕ್ತ' ಮಾರುಕಟ್ಟೆಯಿಂದ ಅದನ್ನು "ಖರೀದಿಸಲು' ಭಾಗಶಃ ನಗದು ವರ್ಗಾವಣೆ ಮಾಡುತ್ತದೆ.

ಈ ಯುಬಿಐ ತರುವುದಾದರೆ ಅದನ್ನು ಕಟ್ಟುನಿಟ್ಟಾಗಿ ಈಗಿರುವ ಸೌಲಭ್ಯಗಳ ಜೊತೆಗೆ ಇನ್ನೊಂದು ಪೂರಕ ವ್ಯವಸ್ಥೆಯಾಗಿ ತರಲಿ, ಈಗಿರುವ ಅಲ್ಪಸೌಲಭ್ಯಗಳ ಬದಲಾಗಿಯಲ್ಲ. ಾದರೆ 'ಒಳ್ಳೆಯ ದಿನ'ಗಳ ಬಗ್ಗೆ ತನ್ನದೇ ಕಲ್ಪನೆಗಳಿರುವ ಮಂದಿಯಿಂದ ಇದನ್ನು ನಿರೀಕ್ಷಿಸಬಹುದೇ?



ನೋನಿ ಅಂದರೆ ನೋಟು ನಿಷೇಧ
ಯುಬಿಐ ಅಂದರೆ ಸಾರ್ವತ್ರಿಕ ಮೂಲ ಆದಾಯ

ವ್ಯಂಗ್ಯಚಿತ್ರ:
ಸಂದೀಪ ಅಧ್ವರ್ಯು,
ಟೈಂಸ್ ಆಫ್ ಇಂಡಿಯ

ತಿರುಗುಬಾಣವಾದ 'ರಾಷ್ಟ್ರ–ವಿರೋಧಿ' : 370ನೇ ವಿಧಿಯ ವಿರೋಧಿಗಳ ಬಗ್ಗೆ ಜಮ್ಮು–ಕಾಶ್ಮೀರ ಮುಖ್ಯಮಂತ್ರಿ

ಜಮ್ಮು–ಕಾಶ್ಮೀರದ ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡಬೇಕೆನ್ನುವುದು ಒಂದು ದೊಡ್ಡ ರಾಷ್ಟ್ರ–ವಿರೋಧಿ ಕೃತ್ಯ ಎಂದು ಟಿಪ್ಪಣಿ ಮಾಡಿರುವುದು 'ಒಳ್ಳೆಯ ದಿನ'ಗಳ ಮಂದಿಗೆ ಭಾರೀ ಮುಜುಗರ ಉಂಟು ಮಾಡಿದೆ.

"ನಮ್ಮ ಸಂಸ್ಕೃತಿ ಮತ್ತು ರಾಜ್ಯದ ವಿರುದ್ಧ ಒಂದು ಸಂಚು ಹೂಡಲಾಗುತ್ತಿದೆ. 370ನೇ ವಿಧಿಯ ವಿರುದ್ಧ ಮಾತಾಡುವವರಿಗೆ ನಮ್ಮ ವಿಶೇಷ ಸ್ಥಾನಮಾನವಾದ 370ನೇ ವಿಧಿ, ನಮ್ಮ ಚಾರಿತ್ರ್ಯ, ಅದರಿಂದಾಗಿಯೇ ನಾವು ಎರಡು ಸೈದ್ಧಾಂತಿಕ ಮತ್ತು ಧರ್ಮದ ವ್ಯಾಖ್ಯಾನಗಳನ್ನು ತಿರಸ್ಕರಿಸಿದ್ದೇವೆ, ಭಾರತದೊಡನೆ ಕೈಕುಲುಕಿದ್ದೇವೆ... ಯಾರಾದರೂ ಇದನ್ನು ದುರ್ಬಲಗೊಳಿಸುತ್ತಿದ್ದರೆ ಅವರು ಅತಿ ದೊಡ್ಡ ರಾಷ್ಟ್ರ–ವಿರೋಧಿ ಕೃತ್ಯ ಮಾಡುತ್ತಿದ್ದಾರೆ... 370ನೇ ವಿಧಿಯನ್ನು ರದ್ದು ಮಾಡಿದರೆ ಕಾಶ್ಮೀರ ಸಮಸ್ಯೆ ಪರಿಹಾರವಾಗುತ್ತದೆ, ಎಲ್ಲವೂ ಸರಿಯಾಗುತ್ತದೆ ಎಂದು ಯೋಚಿಸುವ ಶಕ್ತಿಗಳು ಈ ದೇಶದಲ್ಲಿವೆ" ಎಂದು ಮೆಹಬೂಬ ಮುಫ್ತಿಯುವರು ವಿಧಾನ ಸಭೆಯಲ್ಲಿಯೇ ಹೇಳಿದ್ದರು.

ಈ ಟಿಪ್ಪಣಿಯನ್ನು ಕಡತದಿಂದ ತೆಗೆದು ಹಾಕಬೇಕು ಎಂದು ಬಿಜೆಪಿ ಸದಸ್ಯರುಗಳು ಸದನದಲ್ಲಿ ಗಲಭೆ ಎಬ್ಬಿಸಿದರು. ಪ್ರತಿಪಕ್ಷಗಳು ಮತ್ತು ಆಳುವ ಪಕ್ಷ'ಪಿಡಿಪಿ ಸದಸ್ಯರು ಅದನ್ನು ವಿರೋಧಿಸಿದರು.

ಆದರೆ ಬಿಜೆಪಿಗೆ ಸೇರಿದ ಸ್ಪೀಕರ್ ಮುಖ್ಯಮಂತ್ರಿಗಳ ಟಿಪ್ಪಣಿಯನ್ನು ಕಡತದಿಮದ ತೆಗೆದು ಹಾಕಲು ಆದೇಶಿಸಿದರು. ಇದು ಮತ್ತಷ್ಟು ಗಲಭೆಗಳಿಗೆ ಕಾರಣವಾಯ್ತು. ಹೇಗೆ ತಾನೇ ಮುಖ್ಯಮತ್ರಿಗಳ ಟಿಪ್ಪಣಿಯನ್ನು ಹಾಗೆ ತೆಗೆದು ಹಾಕಲು ಸಾಧ್ಯ, ಹಾಗೆ ತೆಗೆದು ಹಾಕುವದೆಂದರೆ ಸರಕಾರದ ವಿರುದ್ಧ ಅವಿಶ್ವಾಸದಂತೆ ಆಗುತ್ತದೆ, ಈ ಸಮ್ಮಿಶ್ರ ಸರಕಾರ ರಾಜೀನಾಮೆ ಕೊಡಬೇಕು ಎಂದು ಪ್ರತಿಪಕ್ಷಗಳವರು ವಾದಿಸಿದರು. ಆಳುವ ಪಕ್ಷಗಳಲ್ಲಿ ಒಂದಾದ ಪಿಡಿಪಿ ಸದಸ್ಯರು ಸ್ಪೀಕರ್ ಅವರ ಕ್ರಮ ಕಾನೂನುಬಾಹಿರ, ಅವರು ಸದನದ ಅಪಹಾಸ್ಯ ಮಾಡುತ್ತಿದ್ದಾರೆ ಎಂದು ಬಲವಾಗಿ ಖಂಡಿಸಿದರು.

ಗದ್ದಲದ ನಡುವೆ ಸದನವನ್ನು ಮುಂದೂಡಲಾಯಿತು. ಈ ನಡುವೆ ಸಭಾಧ್ಯಕ್ಷರಿಗೆ ತಮ್ಮ ತಪ್ಪಿನ ಅರಿವಾಯಿತೇನೋ. ಮುಖ್ಯಮಂತ್ರಿಗಳೇ ಈ ಬಗ್ಗೆ ವಿವರಣೆ ನೀಡುತ್ತಾರೆ ಎಂದರು. ನಂತರ ಅವರ ಟಿಪ್ಪಣಿಯ ಅರ್ಥ ಅದನ್ನು ವ್ಯಾಖ್ಯಾನಿಸದಂತೆ ಅಲ್ಲ ಎಂದು ಕಡತಗಳನ್ನು ನೋಡಿದಾಗ ತನಗನಿಸಿದೆ ಎಂದರು. ಅವರು ಹೇಳಿದಂತೆ ಮುಖ್ಯಮಂತ್ರಿಗಳನ್ನು ವಿವರಣೆ ಕೊಡಲು ಕರೆಯಬೇಕು ಎಂದು ಪ್ರತಿಪಕ್ಷಗಳು ಮತ್ತೆ–ಮತ್ತೆ ಒತ್ತಾಯಿಸಿದರೂ ಅವರು ತಾವು ಹೇಳಿದಂತೆ ಮಾಡಲಿಲ್ಲ. ಕೊನೆಗೆ ಸದನವನ್ನೇ ಅನಿರ್ದಿಷ್ಟ ಕಾಲ ಮುಂದೂಡಿದರು.

ಇದು ಜಮ್ಮು–ಕಾಶ್ಮೀರ ವಿಧಾನ ಸಭೆಗೆ ಒಂದು ಕೆಟ್ಟ ದಿನ ಎಂದು ಸಿಪಿಐ(ಎಂ) ಶಾಸಕ ಯೂಸುಫ್ ತರಿಗಾಮಿಯವರು ಖೇದ ವ್ಯಕ್ತ ಪಡಿಸಿದ್ದಾರೆ. ಇದು ಸದನಕ್ಕೆ ಮಾಡಿರುವ ಅವಮಾನ ಎಂದು ಅವರು ಹೇಳಿದ್ದಾರೆ. ಸಭಾಧ್ಯಕ್ಷರಿಗೆ ಈ ಬಿಕ್ಕಟ್ಟನ್ನು ಪರಿಹರಿಸಲು ದಾರಿಗಳಿದ್ದವು. ಸದನ ವ್ಯವಹಾರ ಸಲಹಾ ಸಮಿತಿಯ ಸಬೆ ಕರೆಯಬಹುದಾಗಿತ್ತು, ಅಥವ ಆಳುವ ಮತ್ತು ಪ್ರತಿಪಕ್ಷಗಳ ಸಭೆ ಕರೆದು ಪರಸ್ಪರ ಒಪ್ಪಿಗೆಯ ನಿರ್ಧಾರಕ್ಕೆ ಬರಬಹುದಾಗಿತ್ತು. ಆದರೆ ಸದನದ ಸಂಪ್ರದಾಯಗಳನ್ನು, ವಿಧಿ–ವಿಧಾನಗಳನ್ನು ಪಾಲಿಸದೆ ಸಭೆಯನ್ನು ಅನಿರ್ದಿಷ್ಟ ಕಾಲ ಮುಂದೂಡಿದ್ದು ಜಮ್ಮು–ಕಾಶ್ಮೀರದಲ್ಲಿ ಪ್ರಜಾಪ್ರಭುತ್ವಕ್ಕೆ ಕೇಡು ತರುವಂತದ್ದು ಎಂದು ತರಿಗಾಮಿಯವರು ಹೇಳಿದ್ದಾರೆ.

ವಾಸ್ತವವಾಗಿ ಈ ರಾಜ್ಯದಲ್ಲಿ ಕೇಂದ್ರದ ಆಳುವ ಪಕ್ಷ ಕೇವಲ ಆಧಿಕಾರಕ್ಕಾಗಿ ಮೈತ್ರಿ ಮಾಡಿಕೊಂಡಿದೆ ಎಂಬುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಿದೆ. ಈಗ 'ರಾಷ್ಟ್ರ–ವಿರೋಧಿ' ಎಂಬ ತಮ್ಮ ಪೇಟೆಂಟ್ ಆಯುಧವನ್ನು ತಮ್ಮ ವಿರುದ್ಧವೇ ಬಳಸಿರುವುದು ಅವರನ್ನು ತಬ್ಬಿಬ್ಬಾಗಿಸಿರಬೇಕು. ಆದ್ದರಿಂದಲೇ ಅವರ ಪಕ್ಷದ ಸಭಾಧ್ಯಕ್ಷರು ಹಾಸ್ಯಾಸ್ಪದ ರೀತಿಯಲ್ಲಿ ವರ್ತಿಸಿದ್ದಾರೆ ಎಂದು ಕಾಣುತ್ತದೆ.

ಅತ್ತ ಮುಖ್ಯಮಂತ್ರಿಗಳಿಗೂ ಈ ಮಂದಿಯ ಸಿದ್ದಾಂತ ಚೆನ್ನಾಗಿ ಗೊತ್ತಿದ್ದರೂ ಈ ಮೈತ್ರಿ ಏಕೆ ಮಾಡಿಕೊಂಡರು ಎಂಬ ಪ್ರಶ್ನೆಯೂ ಸಹಜ.


ಅಂತೂ ಅಧಿಕಾರಕ್ಕಾಗಿ ಸಮಯಸಾಧಕತೆ 'ಒಳ್ಳೆಯ ದಿನಗಳ' ಒಂದು ಪ್ರಮುಖ ಲಕ್ಷಣ ಎಂದು ಸಾಬೀತಾಗುತ್ತಿದೆ.

ಉತ್ತರ ಪ್ರದೇಶದ ವಿಧಾನಸಭಾ ಚುನಾವಣೆಗಳ ಬಿಜೆಪಿ ಪ್ರಣಾಳಿಕೆಯಲ್ಲಿ ಶ್ರೀರಾಮದೇವಸ್ಥಾನ ಕಟ್ಟುವ ಪ್ರಶ್ನೆಯನ್ನು ಒಂದು ಪ್ರಮುಖ ಪ್ರಶ್ನೆಯಾಗಿ ಮತ್ತೆ ಎತ್ತಲಾಗಿದೆ-ಸುದ್ದಿ



ವ್ಯಂಗ್ಯಚಿತ್ರ:ಸತೀಶ್ ಆಚಾರ್ಯ

ಡಿಜಿಟಲ್ ವ್ಯವಸ್ಥೆಗೆ ಪರಿವರ್ತನೆಯಾದರೆ ಬಿಕ್ಕಟ್ಟಿನಿಂದ ಪಾರಾಗಲು ಸಾಧ್ಯವೇ?



ಕೆ.ಎಂ.ನಾಗರಾಜ್

ಅನೇಕ ವರ್ಷಗಳಿಂದಲೂ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವ ಬಂಡವಾಳಶಾಹಿ ವ್ಯವಸ್ಥೆಯು ಡಿಜಿಟಲ್ ಅರ್ಥವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಬಿಕ್ಕಟ್ಟಿನಿಂದ ಹೊರ ಬರಲು ಪ್ರಯತ್ನಿಸುತ್ತಿದೆ. ನರೇಂದ್ರ ಮೋದಿಯವರು ಕಪ್ಪು ಹಣದ ಮೇಲೆ ಸಮರದ ಹೆಸರಲ್ಲಿ 'ಧೈರ್ಯ'ದಿಂದ ತಂದ ನೋಟು ನಿಷೇಧ ವಾಸ್ತವವಾಗಿ ಇಂತಹ ಪ್ರಯತ್ನದ ಭಾಗ ಎಂಬುದು ಕೆಲವು ವಿಶ್ಲೇಷಕರ ಅಭಿಪ್ರಾಯ, ಕಪ್ಪು ಹಣದ ವಿರುದ್ಧ ಸಮರ ಹಿಂದಕ್ಕೆ ಸರಿದು ನಗದುರಹಿತತೆಯ ಪ್ರಚಾರ ನಡೆಯುತ್ತಿರುವುದು ಇದಕ್ಕೆ ಪುಷ್ಟಿ ಕೊಡುತ್ತದೆ. ಏಕೆ ಈಗ ಬಂಡವಾಳಶಾಹಿಗೆ ಈ ನಗದು ರಹಿತ ವ್ಯವಸ್ಥೆಯ ಗೀಳು? ಅರ್ಥಶಾಸ್ತ್ರಜ್ಞ ಆರ್.ಅರುಣ್ ಕುಮಾರ್ ಇದನ್ನು ವಿಶ್ಲೇಷಿಸಿದ್ದಾರೆ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಆರ್. ಅರಣ್ ಕುಮಾರ್ ಅವರ Digital Economy as a Way Out of Crisis **ಲೇಖನದಲ್ಲಿ . ಆ ಲೇಖನದ ಭಾವಾನುವಾದ ನಮ್ಮ ಓದುಗರಿಗಾಗಿ.**

2008ರಲ್ಲಿ ಆರಂಭವಾದ ವಿಶ್ವ ಆರ್ಥಿಕ ಬಿಕ್ಕಟ್ಟಿನಿಂದ ಹೊರ ಬರಲು ಅಂತರಾಷ್ಟ್ರೀಯ ಹಣಕಾಸು ಬಂಡವಾಳವು ಶತ ಪ್ರಯತ್ನ ಮಾಡುತ್ತಿದೆ. ವಿಶ್ವದ ಎಲ್ಲೆಡೆಯಲ್ಲೂ ಎಲ್ಲ ಆರ್ಥಿಕ ವ್ಯವಹಾರಗಳೂ ನಗದು ರಹಿತವಾಗಿಯೇ ನಡೆಯುವ ಪರಿವರ್ತನೆಗೆ ಸಜ್ಜುಗೊಳಿಸುವ ಅದರ ಪ್ರಯುತ್ನ ಬಹಳ ಮುಖ್ಯವಾದದ್ದು. ಈ ನಿಟ್ಟಿನಲ್ಲಿ ಅದು ಕಳೆದ ನಾಲ್ಕಾರು ವರ್ಷಗಳಿಂದಲೂ ಕಾರ್ಯನಿರತವಾಗಿದೆ. ಈ ಸಂಬಂಧವಾಗಿ, Better Than Cash Alliance ಎಂಬ ಒಂದು ಕೂಟವನ್ನು ಅದು ಹುಟ್ಟುಹಾಕಿದೆ. ಈ ದುಷ್ಟ ಕೂಟದಲ್ಲಿ ಬ್ಯಾಂಕ್‌ಗಳು, ಕ್ರೆಡಿಟ್ ಕಾರ್ಡ್ ಸಂಸ್ಥೆಗಳು, ಹಣಕಾಸು ಸೇವೆ ಅವಲಂಬಿತ ಟೆಕ್ನಾಲಜಿ ಕಂಪೆನಿಗಳು, ಸರ್ಕಾರಗಳು ಮತ್ತು ಕೇಂದ್ರ ಬ್ಯಾಂಕ್‌ಗಳು ಒಟ್ಟಾಗಿ ಸೇರಿವೆ. ಎಲ್ಲ ವ್ಯವಹಾರಗಳೂ ನಗದು ರಹಿತವಾಗಿ ನಡೆದರೆ, ಈ ಎಲ್ಲ ಸಂಸ್ಥೆಗಳಿಗೂ ಅಪಾರ ಲಾಭವಿದೆ.

ವ್ಯವಹಾರಗಳಲ್ಲಿ ನಗದು ಅಂದರೆ ನೋಟುಗಳ ಮತ್ತು ನಾಣ್ಯಗಳ ಬಳಕೆಯನ್ನು ಸಂಪೂರ್ಣವಾಗಿ ರದ್ದುಮಾಡಿ ಅದರ ಬದಲಾಗಿ ಡಿಜಿಟಲ್ ಅಂದರೆ, ಇಂಟರ್‌ನೆಟ್ ಅಥವಾ ಮೊಬೈಲ್ ಫೋನುಗಳ ಮೂಲಕವೇ ಹಣ ಸ್ವೀಕರಿಸುವ ಅಥವಾ ಪಾವತಿ ಮಾಡುವ ವ್ಯವಸ್ಥೆಯನ್ನು ಜಾರಿಮಾಡುವ ಗುರಿಯನ್ನು Better Than Cash Alliance ಇಟ್ಟುಕೊಂಡಿದೆ.

ನಮ್ಮ ದೇಶದ ಸರ್ಕಾರವೂ ಈ ಕೂಟದಲ್ಲಿ ಸಹಭಾಗಿಯಾಗಿದೆ. ಈ ಕಾರ್ಯಾಚರಣೆಯ ಅಂಗವಾಗಿಯೇ, ಮೋದಿ ಸರ್ಕಾರವು ನವೆಂಬರ್ ಎಂಟರಂದು 500 ಮತ್ತು 1000 ರೂ ನೋಟುಗಳನ್ನು ರದ್ದು ಮಾಡಿರುವುದು. ಈ ಸಂಬಂಧವಾಗಿ ಮೋದಿ ಸರ್ಕಾರ ವ್ಯಾಪಕ ತಯಾರಿ ನಡೆಸಿತ್ತು. ಆದರೆ, ಅದನ್ನು ಬಹಿರಂಗಗೊಳಿಸಿರಲಿಲ್ಲ.


2008ರ ವಿಶ್ವ ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ, ಕೆಲವು ಬ್ಯಾಂಕ್ ಮತ್ತು ಕೆಲವು ಹಣಕಾಸು ಸಂಸ್ಥೆಗಳು ಮುಳುಗಿಹೋದವು. ಆ ಬೆಳವಣಿಗೆಯಿಂದಾಗಿ, ಜನರಲ್ಲಿ ಬ್ಯಾಂಕ್‌ಗಳ ಬಗ್ಗೆ ಇದ್ದ ವಿಶ್ವಾಸಾರ್ಹತೆ ಕುಸಿಯಿತು. ಆಗ, ಜನ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ಠೇವಣಿ ಹಣವನ್ನು ಹಿಂಪಡೆದು ತಮ್ಮ ಬಳಿಯೇ ಇಟ್ಟುಕೊಳ್ಳಲು ಆರಂಭಿಸಿದರು. ಪರಿಣಾಮವಾಗಿ, ಚಲಾವಣೆಯಲ್ಲಿದ್ದ ನೋಟುಗಳ ಪ್ರಮಾಣ ಹೆಚ್ಚಿತು. ಆಸ್ಟ್ರೇಲಿಯಾದಲ್ಲಿ, 2008ರ ಕೊನೆಯ ಭಾಗದಲ್ಲಿ, ಈ ಪ್ರಮಾಣ ಶೇ.12ರಷ್ಟು ಹೆಚ್ಚಾಯಿತು. ಯೂರೋಪಿನ ಹಲವು ದೇಶಗಳಲ್ಲಿಯೂ ಚಲಾವಣೆಯಲ್ಲಿರುವ ನೋಟುಗಳ ಪ್ರಮಾಣ ಹೆಚ್ಚಿತು. ಸ್ಪೇನ್ ದೇಶದಲ್ಲಿ, ಈಗಿಂದೀಗಲೇ ಡಿಪಾಸಿಟ್ ಹಣ ಹಿಂತಿರುಗಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದರು. ಇಟಲಿ ದೇಶದಲ್ಲಿ, 2016ರ ಆದಿ ಭಾಗದಲ್ಲಿ, ಇದೇ ವಿದ್ಯಮಾನ ಕಂಡುಬಂತು.

ಜನರು ಹಣವನ್ನು ಬ್ಯಾಂಕ್‌ಗಳಲ್ಲಿ ಠೇವಣಿಯಾಗಿಡುತ್ತಾರೆ. ಬ್ಯಾಂಕ್‌ಗಳು ಆ ಹಣವನ್ನು ಬಳಸಿಕೊಂಡು ಜನರಿಗೆ ಸಾಲ ಕೊಡುತ್ತವೆ. ಅದರಿಂದ ಬ್ಯಾಂಕ್‌ಗಳು ಲಾಭ ಪಡೆಯುತ್ತವೆ. ಜೊತೆಗೆ, ದೇಶದ ಆರ್ಥಿಕ ಅಭಿವೃದ್ಧಿಯೂ ಆಗುತ್ತದೆ. ಆದರೆ, ಜನರಲ್ಲಿ ಬ್ಯಾಂಕ್‌ಗಳ ಮೇಲಿರುವ ವಿಶ್ವಾಸಾರ್ಹತೆ ಕುಗ್ಗಿ ಜನರು ತಮ್ಮ ಹಣವನ್ನು ಹಿಂಪಡೆದರೆ, ಬ್ಯಾಂಕ್‌ಗಳು ಸಾಲ ಕೊಡಲು ಸಾಧ್ಯವಾಗುವುದಿಲ್ಲ. ನಷ್ಟಕ್ಕೊಳಗಾಗುತ್ತವೆ. ಜೊತೆಗೆ, ದೇಶದ ಅಭಿವೃದ್ಧಿಗೂ ಧಕ್ಕೆಯಾಗುತ್ತದೆ. ಆದ್ದರಿಂದ, ಜನರು ತಮ್ಮ ಹಣವನ್ನು ಹಿಂಪಡೆಯದಂತೆ ಅವರ ಮನ ಒಲಿಸಿ, ಅದನ್ನು ಬ್ಯಾಂಕ್‌ಗಳು ತಮ್ಮ ಬಳಿಯೇ ಉಳಿಸಿಕೊಂಡು, ಕಾರ್ಪೋರೇಟ್‌ಗಳಿಗೆ ಅಗ್ಗದ ಬಡ್ಡಿಯಲ್ಲಿ ಸಾಲ ದೊರೆಯುವಂತೆ ಮಾಡುವುದು ಬ್ಯಾಂಕ್‌ಗಳ ಆದ್ಯತೆಯಾಗುತ್ತದೆ. 'ಆರ್ಥಿಕ ಒಳಗೊಳ್ಳುವಿಕೆ'ಯ ಹೆಸರಿನಲ್ಲಿ, ಜನರಿಂದ ಸಂಗ್ರಹಿಸಿದ ಹಣಕಾಸು ಸಂಪನ್ಮೂಲಗಳನ್ನು ಕೆಲವೇ ಕಾರ್ಪೋರೇಟ್‌ಗಳಿಗೆ ವರ್ಗಾಯಿಸುವುದು ಇನ್ನೊಂದು ಹೆಜ್ಜೆ. ನಮ್ಮ ದೇಶದಲ್ಲಿ ಆರಂಭಿಸಿರುವ 'ಜನಧನ ಯೋಜನೆ'ಯ ಉದ್ದೇಶವೂ ಇದೇ. 'ಆರ್ಥಿಕ ಒಳಗೊಳ್ಳುವಿಕೆ'ಯ ಮೂಲಕ ಜನರು ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವುದರ ಬದಲಾಗಿ, ಅವರು ಕಷ್ಟಪಟ್ಟು ಸಂಪಾದಿಸಿದ ಅಲ್ಪ ಸ್ವಲ್ಪ ಹಣವನ್ನು ಹೀರಿಕೊಳ್ಳುವ ಸಲುವಾಗಿ ಅವರನ್ನು ಬ್ಯಾಂಕಿಗ್ ವ್ಯವಸ್ಥೆಯೊಳಗೆ ಹಿಡಿದಿಟ್ಟುಕೊಳ್ಳುವ ಕೆಲಸ ನಡೆಯುತ್ತಿದೆ. ಒಮ್ಮೆ ಹಣವನ್ನು ಬ್ಯಾಂಕಿಗ್ ವ್ಯವಸ್ಥೆಯ ಒಳಗೆ ತಂದರೆ, ನಂತರ, ಜನ ಭಯ ಭೀತಿಗೊಳಗಾಗಿ ಅದನ್ನು ಹಿಂಪಡೆಯದಂತೆ(run on bank) ತಡೆಗಟ್ಟುವುದೇ ಡಿಜಿಟಲ್ ಅರ್ಥವ್ಯವಸ್ಥೆಯ ಉದ್ದೇಶ.

ಜಿವನ್ ಲಿವಿಸ್ ಎಂಬುವರು (ಮಾಜಿ ಅರ್ಥಶಾಸ್ತ್ರಜ್ಞ, ಬ್ಯಾಂಕ್ ಆಫ್ ಇಂಗ್ಲೆಂಡ್) 2015ರ ಮೇ 13 ರಂದು ಲಂಡನ್ ಟೆಲೆಗ್ರಾಫ್ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಹೀಗೆ ಹೇಳಿದ್ದರು: **"ಭೌತಿಕ ರೂಪದ ಕರೆನ್ಸಿಯನ್ನು ರದ್ದುಮಾಡಬೇಕು. ಅದು, ಅರ್ಥವ್ಯವಸ್ಥೆಯ ಏರಿಳಿತಗಳನ್ನು ನಿಯಂತ್ರಿಸಲು ಸರ್ಕಾರಗಳಿಗೆ ಒಂದು ಅಸ್ತ್ರವಾಗುತ್ತದೆ."** . . . ಎಲ್ಲ ಹಣವೂ ಒಮ್ಮೆ ಬ್ಯಾಂಕ್ ಖಾತೆಗಳಿಗೆ ಜಮೆಯಾದರೆ, ಸರ್ಕಾರ ಮತ್ತು ಕೇಂದ್ರ ಬ್ಯಾಂಕ್ ಅದನ್ನು ನಿಯಂತ್ರಿಸುತ್ತವೆ. ಅರ್ಥವ್ಯವಸ್ಥೆಯು ಮಂಕಾದರೆ ಹೆಚ್ಚು ಹಣ ಖರ್ಚುಮಾಡು ಎನ್ನುತ್ತಾರೆ; ಬೆಲೆಗಳು ನಾಗಾಲೋಟದಲ್ಲಿ ಏರಿದರೆ ಖರ್ಚು ಮಾಡುವುದು ಬೇಡ ಎನ್ನುತ್ತಾರೆ. . . . ಅರ್ಥವ್ಯವಸ್ಥೆಯು ಮಂಕಾದರೆ (ನಿಧಾನ ಗತಿಯಲ್ಲಿದ್ದರೆ), ಜನರನ್ನು ಚೆನ್ನಾಗಿ ಖರ್ಚುಮಾಡುವಂತೆ ಉತ್ತೇಜಿಸುವ ಉದ್ದೇಶದಿಂದ ಅವರ ಬ್ಯಾಂಕ್ ಖಾತೆಯಲ್ಲಿಯುವ ಠೇವಣಿ ಹಣಕ್ಕೆ ಬಡ್ಡಿ ಕೊಡುವುದರ ಬದಲು ಅವರಿಂದಲೇ ಶುಲ್ಕ ವಸೂಲು ಮಾಡುವ ರೀತಿಯ ಋಣಾತ್ಮಕ ಬಡ್ಡಿ ಹಾಕಲಾಗುವುದು. ತಮ್ಮ ಹಣವನ್ನು ಕಬಳಿಸುತ್ತಿದ್ದಾರೆ ಎನ್ನುವ ಆಯಾಸದ ಭಾವನೆಯಲ್ಲಿ ಜನರು ಗತ್ಯಂತರವಿಲ್ಲದೆ ತಮ್ಮ ಖಾತೆಯಲ್ಲಿರುವ ಹಣವನ್ನು ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಅಥವಾ ಮಜಾ ಮಾಡಲು ಉಡಾಯಿಸುತ್ತಾರೆ. ವಾಸ್ತವವಾಗಿ, ಇದು ಉಳಿತಾಯಗಳ ಮೇಲೆ ತೆರಿಗೆ ಹೇರಿದಂತಾಗುತ್ತದೆ. ಈ ಪರಿಸ್ಥಿತಿಗೆ ವಿರುದ್ಧವಾಗಿ, ಅರ್ಥವ್ಯವಸ್ಥೆಯು ಹುಚ್ಚೆದ್ದು ಕುಣಿಯುತ್ತಿದ್ದರೆ, ಬೆಲೆಗಳು ನಾಗಾಲೋಟದಲ್ಲಿ ಏರುತ್ತವೆ. ಆಗ, ಋಣಾತ್ಮಕ ಬಡ್ಡಿ ಹಾಕುವುದನ್ನು ನಿಲ್ಲಿಸಿ, ಅದರ ಬದಲಾಗಿ, ಹೆಚ್ಚು ಹಣ ಖರ್ಚು ಮಾಡುವುದಕ್ಕೆ ತೊಡರುಗಾಲು ಹಾಕುವ ರೀತಿಯಲ್ಲಿ, ಜನರು ತಮ್ಮ ಬ್ಯಾಂಕ್ ಖಾತೆಯಿಂದ ತೆಗೆಯುವ ಹಣದ ಮೇಲೆ ತೆರಿಗೆ ವಿಧಿಸಲಾಗುತ್ತದೆ. ನಿಮಗೆ ಬೇಕಾದ ವಸ್ತುವನ್ನು ಕೊಳ್ಳಲು ನಿಮ್ಮದೇ ಹಣವನ್ನು ಖರ್ಚುಮಾಡಿದರೆ ದಂಡ ತೆರುವ ರೀತಿಯಲ್ಲಿ ತೆರಿಗೆ ಕೊಡಬೇಕಾಗುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ಜನರು ಖರ್ಚುಗಳನ್ನು ಮಿತಗೊಳಿಸಿ, ಉಳಿತಾಯ ಮಾಡಲು ತೊಡಗುತ್ತಾರೆ. ಈ ಪ್ರಕ್ರಿಯೆಯು, ಹುಚ್ಚೆದ್ದು ಕುಣಿಯುವ ಅರ್ಥವ್ಯವಸ್ಥೆಯನ್ನು ನಿಯಂತ್ರಿಸಲು ಕೇಂದ್ರ ಬ್ಯಾಂಕ್‌ಗಳು ಬಡ್ಡಿ ದರ ಏರಿಸುವ ಕ್ರಮಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ."

ಇಂತಹ ಕ್ರಮಗಳನ್ನು ಜಾರಿಮಾಡುವ ಮೂಲಕ ಉಸುಕಿನಲ್ಲಿ ಸಿಲುಕಿರುವ ಅರ್ಥವ್ಯವಸ್ಥೆಯನ್ನು ಮೇಲಕ್ಕೆತ್ತಬಹುದು ಎಂಬುದು ಹಣಕಾಸು ಬಂಡವಾಳದ ಭಾವನೆ. ಈಗಾಗಲೇ ಸುಲಭದ ಬಡ್ಡಿಯ ಮೇಲೆ ಹೇರಳವಾದ ಸಾಲ ಕಾರ್ಪೋರೇಟ್‌ಗಳಿಗೆ ದೊರೆಯುತ್ತಿದೆ. ಆದರೂ, ಗ್ರಾಹಕರು ಧಾರಾಳವಾಗಿ ಖರ್ಚುಮಾಡುತ್ತಿಲ್ಲ. ಅವರನ್ನು ಖರ್ಚುಮಾಡುವಂತೆ ಪ್ರಚೋದಿಸಲು ಅನೇಕ ಬ್ಯಾಂಕ್‌ಗಳು ಠೇವಣಿಗಳ ಮೇಲೆ ಶೂನ್ಯ ಬಡ್ಡಿ ವಿಧಿಸುವ ನೀತಿ ಅನುಸರಿಸುತ್ತಿವೆ. ಅದೂ, ನಿರೀಕ್ಷಿತ ಫಲಿತಾಂಶ ನೀಡುತ್ತಿಲ್ಲ. ಹಾಗಾಗಿ, ಬ್ಯಾಂಕ್‌ಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಠೇವಣಿಗಳ ಮೇಲೆ ಋಣಾತ್ಮಕ ಬಡ್ಡಿ ಹಾಕುವ ಆಲೋಚನೆಯಲ್ಲಿವೆ. ಹಣ ನಗದು ರೂಪದಲ್ಲಿ ಚಲಾವಣೆಯಲ್ಲಿರುವವರೆಗೂ ಇಂತಹ ಯಾವ ಕ್ರಮಗಳೂ ಫಲ ಕೊಡುವುದಿಲ್ಲ ಎಂಬುದು ಸ್ಪಷ್ಟವಾಗುತ್ತಿದೆ. ಆದ್ದರಿಂದ, ಹತಾಶೆಗೊಂಡ ಅಂತರಾಷ್ಟ್ರೀಯ ಹಣಕಾಸು ಬಂಡವಾಳದ ವಕ್ತಾರರು ಹೇಳುತ್ತಾರೆ: ನಗದು ಹಣ ಅಸ್ತಿತ್ವದಲ್ಲಿದ್ದರೆ, ಕುಗ್ಗಿದ ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕೇಂದ್ರ ಬ್ಯಾಂಕಿನ ಸಾಮರ್ಥ್ಯವನ್ನು ಅದು ಮಿತಿಗೊಳಿಸುತ್ತದೆ ಮತ್ತು ಭೌತಿಕ ರೂಪದ ಕರೆನ್ಸಿ ಅಲ್ಪ ಪ್ರಮಾಣದಲ್ಲಿದ್ದರೂ ಅದು ಅರ್ಥವ್ಯವಸ್ಥೆಯನ್ನು ವಿರೂಪಗೊಳಿಸುತ್ತದೆ.

ಬ್ಯಾಂಕ್‌ಗಳು ಠೇವಣಿಗಳಿಗೆ ಬಡ್ಡಿ ಕೊಡದಿದ್ದರೆ, ನಗದು ಹಣ ಚಲಾವಣೆಯಲ್ಲಿರುವವರೆಗೂ ಜನರು ತಮ್ಮ ಹಣವನ್ನು ಬ್ಯಾಂಕ್‌ಗಳಲ್ಲಿ ಇಡುವುದಿಲ್ಲ. ಒಂದೋ ತಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳುತ್ತಾರೆ ಇಲ್ಲವೆ ಸುರಕ್ಷಿತ ತಾಣಗಳಲ್ಲಿಡುತ್ತಾರೆ. ಶೂನ್ಯ ಬಡ್ಡಿ ದರ ಇಲ್ಲವೇ ಋಣಾತ್ಮಕ ಬಡ್ಡಿ ದರಗಳನ್ನು ಜಾರಿಗೊಳಿಸುವ ಮೊದಲು ಹಣಕಾಸು ಬಂಡವಾಳವು ಇಂತಹ ನುಣಿಚಿಕೊಳ್ಳುವ ಮಾರ್ಗಗಳನ್ನು ಬಂದ್ ಮಾಡಲು ಬಯಸುತ್ತದೆ. ನುಣಿಚಿಕೊಳ್ಳುವ ಮಾರ್ಗಗಳನ್ನು ಬಂದ್ ಮಾಡುವುದು ಅಂದರೆ ಎಲ್ಲ ಆರ್ಥಿಕ ವ್ಯವಹಾರಗಳೂ ನಗದು ರಹಿತವಾಗಿಯೇ ನಡೆಯುವಂತಹ ವ್ಯವಸ್ಥೆಗೆ ಒಗ್ಗಿಕೊಳ್ಳುವುದೇ ಆಗಿರುತ್ತದೆ. ಅಂದರೆ, ಇಡೀ ಅರ್ಥವ್ಯವಸ್ಥೆಯು ಡಿಜಿಟಲ್ ಆಗಿ ಪರಿವರ್ತನೆಗೊಳ್ಳುವುದು ಎಂದಾಗುತ್ತದೆ. ವಸ್ತುಗಳನ್ನು ಮತ್ತು ಸೇವೆಗಳನ್ನು ಕೊಳ್ಳುವಂತೆ ಜನರನ್ನು ಬಲವಂತವಾಗಿ ತಳ್ಳಿ ಅವರನ್ನು ಗ್ರಾಹಕ ಸಂಸ್ಕೃತಿಯ ದಾಸರಾಗುವಂತೆ ಮಾಡುವುದೇ ಋಣಾತ್ಮಕ ಬಡ್ಡಿಯ ಉದ್ದೇಶ. ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಲು ಹೋದರೆ ತನ್ನ ಲಾಭದ ಪಾಲು ಕಡಿಮೆಯಾಗುತ್ತದೆ ಎಂದು ಹಣಕಾಸು ಬಂಡವಾಳ ಭಾವಿಸುತ್ತದೆ. ಅದಕ್ಕೆ ಬದಲಾಗಿ, ಜನರು ಕಷ್ಟಪಟ್ಟು ಸಂಪಾದಿಸಿದ ಹಣದಲ್ಲಿ ಸ್ವಲ್ಪವೂ ಉಳಿತಾಯವಾಗದಂತೆ ನೋಡಿಕೊಂಡು ಅದನ್ನು ಅವರು ಮನಬಂದಂತೆ ಖರ್ಚುಮಾಡುವಂತೆ ಮಾಡುವುದೇ ಅದರ ಉದ್ದೇಶ. ಈ ರೀತಿಯಾಗಿ ಹಣ ಸದಾಕಾಲವೂ ಹರಿದಾಡುತ್ತಿರುವಂತೆ ನೋಡಿಕೊಂಡು, ಅರ್ಥವ್ಯವಸ್ಥೆಯನ್ನು ಪುನಶ್ಚೇತನಗೊಳಿಸಿ, ಕಾರ್ಪೋರೇಟ್‌ಗಳ ಲಾಭವನ್ನು ಕಾಪಾಡಿ, ಬಿಕ್ಕಟ್ಟಿನಿಂದ ಹೊರಬರಲು ಹಣ ಕಾಸು ಬಂಡವಾಳವು ಹವಣಿಸುತ್ತಿದೆ.



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಹಣ ಉಳಿತಾಯುವಾಗದಂತೆ ನೋಡಿ ಕೊಳ್ಳುವುದರಲ್ಲಿ ಮತ್ತೊಂದು ಲಾಭವೂ ಇದೆ. ಖಾಯಿಲೆ, ಸಾವು, ಬೆಳೆ ನಾಶ, ಮದುವೆ ಮುಂತಾದ ಅನಿರೀಕ್ಷಿತ ಮತ್ತು ತುರ್ತು ಸಂದರ್ಭಗಳಲ್ಲಿ ಹಣದ ಅವಶ್ಯಕತೆ ಇರುವ ಕಾರಣದಿಂದ ಜನ ಉಳಿತಾಯ ಮಾಡುತ್ತಾರೆ. ಇಂತಹ ಕಾರಣಗಳಿಗೂ ಉಳಿತಾಯದ ಅವಶ್ಯಕತೆ ಇಲ್ಲ ಎನ್ನುತ್ತದೆ ಹಣಕಾಸು ಬಂಡವಾಳ. ಏಕೆಂದರೆ, ಅವಶ್ಯಕತೆ ಬಂದಾಗ ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದಲ್ಲ! ಬ್ಯಾಂಕ್‌ಗಳು ಲಾಭ ಗಳಿಸುವುದು ಸಾಲ ಕೊಡುವ ಮೂಲಕವೇ!

ಭೌತಿಕ ರೂಪದ ಕರೆನ್ಸಿಯನ್ನು (ನಗದು ಹಣ) ರದ್ದುಮಾಡಲು ಇರುವ ಇನ್ನೊಂದು ಕಾರಣವೆಂದರೆ, ಅದರ ಚಲನ ವಲನಗಳ ಬಗ್ಗೆ ಸುಳಿವು ಸಿಕ್ಕುವುದಿಲ್ಲ. ನಮ್ಮ ಹಣವನ್ನು ನಾವು ಎಲ್ಲೆಲ್ಲಿ ಮತ್ತು ಯಾವ ರೀತಿಯಲ್ಲಿ ಖರ್ಚುಮಾಡುತ್ತೇವೆ ಎಂಬುದರ ವಿವರಗಳು ಹಣಕಾಸು ಬಂಡವಾಳ ಮತ್ತು ಸರ್ಕಾರ ಎರಡಕ್ಕೂ ಬೇಕಾಗಿದೆ. ಏಕೆಂದರೆ, ಕಾರ್ಪೋರೇಟ್‌ಗಳು ಈ ವಿವರಗಳನ್ನು ಬಳಸಿಕೊಂಡು ಅವರ ಉತ್ಪನ್ನಗಳಿಗೆ ಹೊಂದಿಕೊಳ್ಳುವ ರೀತಿಯಲ್ಲಿ ನಮ್ಮ ಅಭಿರುಚಿಯನ್ನು ಮಾರ್ಪಡಿಸಲು ಸೂಕ್ತವಾದ ಜಾಹಿರಾತು ಮತ್ತು ಪ್ರಚಾರಗಳನ್ನು ಅವು ಕೈಗೊಳ್ಳಬಹುದು. ಅವು ನಮ್ಮ ಅಗತ್ಯಗಳಿಗೆ ಅನುಗುಣವಾದ ಉತ್ಪನ್ನಗಳನ್ನು ತಯಾರಿಸುವುದಿಲ್ಲ. ಹೌದು, ಅವುಗಳಿಗೆ ಹೆಚ್ಚು ಲಾಭ ಕೊಡುವ, ಅವು ತಯಾರಿಸಿದ ವಸ್ತುಗಳಿಗೆ ನಮ್ಮ ಅವಶ್ಯಕತೆ ಮತ್ತು ಅಭಿರುಚಿಗಳನ್ನು ಮಾರ್ಪಡಿಸಿಕೊಳ್ಳಬೇಕು! ಇಂತಹ ವಿವರಗಳನ್ನು ಕಲೆಹಾಕಲು ಡಿಜಿಟಲ್ ಅರ್ಥವ್ಯವಸ್ಥೆ ಸಹಾಯುವಾಡುತ್ತದೆ! ಹೊಸ ತೆರಿಗೆಗಳ ಬಗ್ಗೆ ನಿರ್ಧರಿಸಲು ಸರ್ಕಾರಕ್ಕೂ ಅದು ಸಹಾಯಕವಾಗುತ್ತದೆ. ಹಾಗಾಗಿ, ನಗದು ರೂಪದಲ್ಲಿ ಹಣ ಹೊಂದಿರುವವರನ್ನು 'ದೇಶದ್ರೋಹಿ' 'ರಾಷ್ಟ್ರವಿರೋಧಿ' ಅಥವಾ 'ಕಾಳ ಧನಿಕರ ಬೆಂಬಲಿಗ' ಎಂದು ಹಣೆಪಟ್ಟಿ ಹಚ್ಚಬಹುದು.

ನಗದು ರಹಿತ ಅರ್ಥವ್ಯವಸ್ಥೆಯೆಂದು ಹೇಳುವ ಸ್ವೀಡನ್‌ದೇಶದಲ್ಲಿ ಮತ್ತು ಡೆನ್ಮಾರ್ಕ್, ಸ್ವಿಜ಼ರ್‌ಲ್ಯಾಂಡ್ ದೇಶಗಳಲ್ಲಿ ಬಡ್ಡಿ ದರ ಋಣಾತ್ಮಕವಾಗಿದೆ. ಆದರೆ, ಋಣಾತ್ಮಕ ಬಡ್ಡಿ ವಿಧಿಸಿದರೆ ಆ ದೇಶಗಳ ಜನರು ತಮ್ಮ ಠೇವಣಿ ಹಿಂಪಡೆಯುತ್ತಾರೆ ಎಂಬ ಭಯದಲ್ಲಿ, ಸದ್ಯಕ್ಕೆ ಆ ದೇಶದ ಬ್ಯಾಂಕ್‌ಗಳು ಋಣಾತ್ಮಕ ಬಡ್ಡಿಯ(–0.35%) ಭಾರವನ್ನು ನುಂಗಿಕೊಳ್ಳುತ್ತಿವೆ.

ಅನೇಕ ವರ್ಷಗಳಿಂದಲೂ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡಿರುವ ಬಂಡವಾಳಶಾಹಿ ವ್ಯವಸ್ಥೆಯು ಡಿಜಿಟಲ್ ಅರ್ಥವ್ಯವಸ್ಥೆಯನ್ನು ಜಾರಿಗೆ ತರುವ ಮೂಲಕ ಬಿಕ್ಕಟ್ಟಿನಿಂದ ಹೊರ ಬರಲು ಪ್ರಯತ್ನಿಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆಯೊಳಗೆ ಎಷ್ಟೇ ಸುಧಾರಣೆಗಳನ್ನು ತಂದರೂ ಅದು ಬಿಕ್ಕಟ್ಟಿನಿಂದ ಹೊರ ಬರಲು ಸಾಧ್ಯವಿಲ್ಲ. ಅನೇಕ ಸಂದರ್ಭಗಳಲ್ಲಿ ಇದು ಸಾಬೀತಾಗಿದೆ ಎಂಬುದನ್ನು ಚರಿತ್ರೆ ತಿಳಿಸುತ್ತದೆ. ಬಿಕ್ಕಟ್ಟುಗಳು ಬಂಡವಾಳಶಾಹಿಗೆ ಸ್ವಭಾವಜನ್ಯವಾಗಿವೆ. ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನೆ ಸಾಮಾಜಿಕವಾಗಿದೆ; ಸಾಮಾಜಿಕ ಉತ್ಪಾದನೆಯ ಸ್ವಾಧೀನತೆ ವ್ಯಕ್ತಿಗತವಾಗಿರುವುದು ಒಂದು ದ್ವಂದ್ವ. ಈ ದ್ವಂದ್ವವನ್ನು ಪರಿಹರಿಸುವವರೆಗೂ ಬಂಡವಾಳಶಾಹಿಗೆ ಬಿಕ್ಕಟ್ಟಿನಿಂದ ಹೊರ ಬರಲು ದಾರಿಯೇ ಇಲ್ಲ. ●

ಪಶ್ಚಿಮ ಬಂಗಾಳ: ಭಾಂಗರ್ ದಮನಕ್ಕೆ ಪ್ರತಿಭಟನೆಗಳ ಮಹಾಪೂರ

ಭಾಂಗರ್‌ನಲ್ಲಿ ನಡೆಯುತ್ತಿರುವ ದೌರ್ಜನ್ಯದ ವಿರುದ್ಧ ಸಿಪಿಐ(ಎಂ) ಮತ್ತು ಇತರಎಡಪಕ್ಷಗಳು ಬೀದಿ-ಬೀದಿಗಳಲ್ಲಿ ಪ್ರತಿಭಟನೆ ನಡೆಸಿದ್ದಾರೆ ಪೋಲೀಸರ ಗುಂಡಿನ ಧಾಳಿಯಲ್ಲಿ ಈಗಾಗಲೇ ಎರಡು ಗ್ರಾಮಸ್ಥರು ಸಾವನ್ನಪ್ಪಿದ್ದಾರೆ. ಆಡಳಿತ ಪಕ್ಷ ಮತ್ತು ಪೋಲೀಸರು ಬಲವಂತವಾಗಿ ಗ್ರಾಮವನ್ನು ಪ್ರವೇಶಿಸಿ ಅವರನ್ನು ಹೆದರಿಸುತ್ತಿದ್ದಾರೆ, ಆಕಾರಣ-ಕ್ಕಾಗಿ ಎಡಪಕ್ಷಗಳು ರಾಜ್ಯದಾದ್ಯಂತ ಜನರನ್ನು ಅಣಿನೆರೆಸಿ ಭಾಂಗರ್‌ನಲ್ಲಿ ಹೋರಾಡುತ್ತಿರುವ ಜನರಿಗೆ ಸೌಹಾರ್ದ ಬೆಂಬಲ ನೀಡುತ್ತಿದ್ದಾರೆ.

ನೂರಾರು ಸಿಪಿಐ(ಎಂ) ಕಾರ್ಯಕರ್ತರು ಕೊಲ್ಕಾತಾದ ಮಿಲನ್‌ಮೇಲಾದಲ್ಲಿ ನಡೆಯುತ್ತಿದ್ದ ಬಂಗಾಲ್ ಗ್ಲೋಬಲ್ ಬಿಸಿನೆಸ್ ಸಮಿಟ್‌ನ ಮುಂದೆ ಬೃಹತ್ ಪ್ರತಿಭಟನೆ ನಡೆಸಿದರು. ರಸ್ತೆತಡೆ ನಡೆಸಿ ಭಾಂಗರ್ ದೌರ್ಜನ್ಯದ ವಿರುದ್ಧ ಘೋಷಣೆ ಕೂಗಿದರು. ಪ್ರಮುಖ ಮುಖಂಡರೂ ಸೇರಿದಂತೆ 130 ಕಾರ್ಯಕರ್ತರನ್ನು ಪೋಲೀಸರು ಸ್ಥಳದಲ್ಲೇ ಬಂಧಿಸಿದರು. ಅವರನ್ನು ಬಿಡಗಡೆ ಮಾಡದೆ ಕಾಕಪ್‌ಗೆ ಹಾಕಲಾಯಿತು. ಪ್ರತಿಭಟನಾಕಾರರು ವೈಯುಕ್ತಿಕ ಬಾಂಡಿನಮೇಲೆ ಜಾಮೀನನ್ನೂ ಕೇಳಲಿಲ್ಲ. ಮರುದಿನ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಅಲ್ಲಿ ಬೃಹತ್ ಸಂಖ್ಯೆಯಲ್ಲಿ ಪಕ್ಷದ ಕಾರ್ಯಕರ್ಯರು ಜಮಾಯಿಸಿದ್ದರು. ನ್ಯಾಯಾಲಯ ಯಾವುದೇ ಶರತ್ತುಗಳನ್ನು ವಿಧಿಸದೇ ಪೋಲೀಸ್ ಮೊಕದ್ದಮೆಯನ್ನು ತಿರಸ್ಕರಿಸಿತು.

ರಾಜ್ಯದಾದ್ಯಂತ ಮುಖಂಡರ ಬಂಧನದ ವಿರುದ್ಧ ಪ್ರತಿಭಟನಾ ಮೆರವಣಿಗೆಯನ್ನು ಕೈಗೊಳ್ಳಲಾಯಿತು. ಜನವರಿ 25ರಂದು ಬುದ್ದಿಜೀವಿಗಳು, ವಕೀಲರು, ಕಲಾವಿದರು, ಮತ್ತು ಅನೇಕ ಜನವಿಭಾಗಗಳಿಂದ ಬಂದ ಉದ್ಯೋಗಸ್ಥರು ದಕ್ಷಿಣ 24 ಪರಗಣ ಜಿಲ್ಲೆಯ ಕೇಂದ್ರವಾದ ಅಲಿಪುರ್‌ನಲ್ಲಿ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ ಕಿಸಾನ್ ಸಭಾ ಜಿಲ್ಲಾ ಸಮ್ಮೇಳನಗಳ ಸಂದರ್ಭದಲ್ಲಿ ನಡೆಯುತ್ತಿರುವ ಬೃಹತ್ ರೈತ ಸಭೆಗಳಲ್ಲಿ ಮಾತಾಡುತ್ತ ರಾಜ್ಯ ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು 'ಭಾಂಗರ್'ಗಳನ್ನು ಕಾಣಲಿದೆ ಎಂದು ಎಚ್ಚರಿಸುತ್ತಿದ್ದಾರೆ. ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ, ಭೂಮಿಯನ್ನು ಮಾಫಿಯಾಗಳು ಕಸಿದು ಕೊಳ್ಳುತ್ತಿದ್ದಾರೆ, ಪಂಚಾಯತುಗಳು ಭ್ರಷ್ಟಾಚಾರದ ಕೇಂದ್ರಗಳಾಗಿವೆ ಇದರಿಂದಾಗಿ ಗ್ರಾಮೀಣ ಜನರಲ್ಲಿ ಅಸಂತೃಪ್ತಿ ಕುದಿಯುತ್ತಿದೆ. ಇದು ರೈತರ ಜಿಲ್ಲಾ ಸಭೆಗಳಲ್ಲಿ ಕಾಣ ಬರುತ್ತಿರುವ ಸಂಗತಿ.

ಹೈದರಾಬಾದಿನಲ್ಲಿ ದಲಿತ ಹಕ್ಕು ಸಾಧನಾ ಸಭೆ

ನೀಲಿ ಮತ್ತು ಕೆಂಪು ಬಾವುಟಗಳ ಅಡಿಯಲ್ಲಿ ದಲಿತ, ಆದಿವಾಸೀ ಮುಸ್ಲಿಂ ಮತ್ತಿನ್ನಿತರ ಹೋರಾಟ ನಿರತರು ಕೋಮುಶಕ್ತಿಯನ್ನು ಹಿಮ್ಮೆಟ್ಟಿಸಲು ಒಂದಾಗಬೇಕು ಎಂದು ಯಲ್ಲಿ ಮಾತನಾಡಿದ ಸಿಪಿಐ(ಎಂ,) ಸಿಪಿಐ ಮತ್ತು ಆರ್‌ಪಿಐ ಮುಖಂಡರು ಕರೆ ನೀಡಿದ್ದಾರೆ. ದಲಿತರ ಹಕ್ಕುಗಳಿಗಾಗಿ ಐಕ್ಯ ಹೋರಾಟನಡೆಸಿ 2019ರಲ್ಲಿ ಬಿಜೆಪಿ ಪುನಃ ಅಧಿಕಾರಕ್ಕೆ ಬರದಂತೆ ತಡೆಯಬೇಕು ಎಂದುಅವರು ಹೇಳಿದರು.

ಜನವರಿ 22ರಂದು ನಡೆಶ್ತೀ ಕಾರ್ಯಕ್ರಮದಲ್ಲಿ ಎಮಾತನಾಡುತ್ತಭಾರತೀಯ ರಿಪಬ್ಲಿಕ್ ಪಕ್ಷದ ಮುಖಂಡರು ಮತ್ತು ಅಂಬೇಡ್ಕರ್ ಅವರ ಮೊಮ್ಮಗನಾದ ಪ್ರಕಾಶ ಅಂಬೇಡ್ಕರ್ ಅವರು ಮಿಸಲಾತಿ ವಿರುದ್ಧ ಆರ್‌ಎಸ್‌ಎಸ್ ಅವರ ನಿಲುವನ್ನು ಪ್ರಬಲವಾಗಿ ಖಂಡಿಸಿದರು ಮತ್ತು ಸಂಸತ್ತಿನಲ್ಲಿ ಮೋದಿ ಸರಕಾರಕ್ಕೆ ಬಹುಮತ ಇರುವುದರ ಹೊರತಾಗಿಯೂ, ಬಿಜೆಪಿಗೆ ಮೀಸಲಾತಿಯನ್ನು ತೆಗದು ಹಾಕಲು ಸಾಧ್ಯವಿದೆಯೇ ಎಂದು ಸವಾಲು ಹಾಕಿದರು.

ಭಾರತದ ಸಂವಿಧಾನ ನಿರ್ಮಾಣವಾಗುವ ಹಂತದಿಂದಲೂ ಆರ್‌ಎಸ್‌ಎಸ್ ಮೀಸಲಾತಿಯನ್ನು ವಿರೋಧಿಸುತ್ತಾ ಬಂದಿದೆ. ಶ್ರೀಮಂತರಿಂದ ಹಣವನ್ನು ಸಂಗ್ರಹಿಸಿ ಬಡಜನರಿಗೆ ನೀಡುವ ಬದಲು ಬಡವರ ಹಣವನ್ನು ಕಿತ್ತು ಶ್ರೀಮಂತರಿಗೆ ನೀಡುತ್ತಿರುವುದು ಮೋದಿ ಸರಕಾರದ ನೀತಿ ಎಂದು ಅವರು ಖಂಡಿಸಿದರು.

ಆರ್‌ಎಸ್‌ಎಸ್ ಮುಖಂಡ ಮೋಹನ್ ಭಾಗ್ವತ್ ಅವರನ್ನು ಸಾಂಸ್ಕೃತಿಕ ರಾಷ್ಟ್ರವಾದದ ಬಗ್ಗೆ ಚರ್ಚೆಗೆ ಬರುವಂತೆ ಸವಾಲೆಸೆದರು. ದೇವಸ್ಥಾನದಲ್ಲಿ ಜಾತಿ ಆಧಾರಿತವಾಗಿ ಅರ್ಚಕರನ್ನು ನೇಮಿಸುವ ಪದ್ಧತಿಯ ಬಗ್ಗೆ ಮಾತನಾಡುತ್ತಾ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಸರಕಾರ ವಿಶೇಷ ಕಾನೂನು ಜಾರಿಗೆ ತರಬೇಕೆಂದು ಆಗ್ರಹಿಸಿದರು. ತೆಲಂಗಾಣ ಸರಕಾತ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಯೋಜನೆಗಳಿಗೆ ಮೀಸಲಿಟ್ಟ ಹಣವನ್ನು ಇತರ ಉದ್ದೇಶಗಳಿಗೆ ಬಳಸುತ್ತಿರುವದರ ವಿರುದ್ಧ ಟೀಕಾ ಪ್ರಹಾರ ಮಾಡಿದರು.

ಸಿಪಿಐ(ಎಂ) ಪ್ರದಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಕೋಮುವಾದಿ ಸರಕಾರದ ವಿರುದ್ದ ಹೋರಾಟವನ್ನು ಪ್ರಬಲಗೊಳಿಸಿ ಹೊಸದೊಂದು ಭಾರತದ ನಿರ್ಮಾಣಕ್ಕೆ ಕರೆ ನೀಡಿದರು. ಮೋದಿ ಮತ್ತು ಆರ್‌ಎಸ್‌ಎಸ್ ಭಾಷಣವನ್ನು ಉಲ್ಲೇಖಿಸುತ್ತಾ, ಅವರು ಅಶ್ವಮೇಧ ಯಾಗವನ್ನು ಆರಂಭಿಸಿದ್ದಾರೆ. ದನ್ನು ಯಾರಿಂದಲೂ ನಿಲ್ಲಿಸಲಾಗುತ್ತಿಲ್ಲ. ಆದರೆ ಕೆಂಪು ಮತ್ತು ನೀಲಿ ಬಾವುಟದಿಂದ ಅವರ ಬಿಳಿ ಕುದುರೆಯನ್ನೂ ಹಾಗೂ ಕೋಮುವಾದಿ ಶಕ್ತಿಗಳ ಭ್ರಮೆಯನ್ನು ಸುಟ್ಟು ಬಿಡಬಹುದೆಂದು ಉದ್ಘೋಷಿಸಿದರು. ಬಿಹಾರ್ ಮತ್ತು ದೆಹಲಿಯಲ್ಲಿ ನಡೆದಂತೆ ಉತ್ತರ ಪ್ರದೇಶದಲ್ಲೂ ಜನತೆ ಬಿಜೆಪಿಯನ್ನು ಕಿತ್ತೊಗೆಯಲಿದೆ ಎಂದರು.

ದನಗಳ ಹೆಸರಿನಲ್ಲಿ ಮುಸ್ಲೀಮರ ಮೇಲೆ ಹೆಚ್ಚುತ್ತಿರುವ ದಾಳಿಗಳವಿರುದ್ಧ ಹೋರಾಟನಡೆಸಲು ಅವರು ಕರೆ ನೀಡಿದರು. ಅನಾಣ್ಯೀಕರಣದಬಗ್ಗೆ ಮಾತನಾಡುತ್ತಾ ಬಾಕಿ ಉಳಿಸಿಕೊಂಡಿರುವ ಸಾಲವನ್ನು ಪಾವತಿಸದೇ ಇರುವ ಕಾರ್ಪೋರೇಟ್ ಸಂಸ್ಥೆಗಳ ರಕ್ಷಣೆ ಬಿಟ್ಟರೆ ಮೋದಿ ಹೇಳಿಕೊಳ್ಳುವ ಕಪ್ಪು ಹಣದ ನಿರ್ನಾಮ ಆಗುತ್ತಿಲ್ಲ ಬದಲಾಗಿ, ಭ್ರಷ್ಟಾಚಾರ ಮತ್ತು ಭಯೋತ್ಪಾದನೆ ಇನ್ನೂ ಹೆಚ್ಚಿದೆ ಎಂದರು

ಸಿಪಿಐ(ಎಂ)ನ್ನು ಆಪಾದಿಸಿ ಆತ್ಮಹತ್ಯಾ ಪತ್ರ ಬರೆಯುವಂತೆ ಒತ್ತಾಯಿಸಿ ಚಿತ್ರಹಿಂಸೆ: ಆರೆಸ್ಸೆಸ್ ವಿರುದ್ಧ ಕಾರ್ಯಕರ್ತನ ಆಪಾದನೆ

ಈ ಹಿಂದೆ ಆರೆಸ್ಸೆಸ್‌ನವರು ತನ್ನನ್ನು ಕೊಲೆಮಾಡಲು ಯತ್ನಿಸಿ ಅದನ್ನು ಸಿಪಿಐ(ಎಂ) ಮೇಲೆ ಹಾಕಲು ಯತ್ನಿಸಿದ್ದರೆಂದು ಹೇಳಿಕೆ ನೀಡಿದ್ದ ಕೇರಳದ ಕಣ್ಣೂರು ಜಿಲ್ಲೆಯ ಆರೆಸ್ಸೆಸ್ ಕಾರ್ಯಕರ್ತ, ಮಾನಸಿಕವಾಗಿ ಮತ್ತು ದೈಹಿಕವಾಗಿ ತನ್ನನ್ನು ಹಿಂಸಿಸಲಾಯಿತು ಎಂದು ಹೇಳಿದ್ದಾನೆ.

ವಿಷ್ಣು ಎಂಬ ಹೆಸರಿನ ಈ ಕಾರ್ಯಕರ್ತ ತಾನು 18 ವರ್ಷಗಳಿಂದ ಈ ಸಂಘಟನೆಗಾಗಿ ಕೆಲಸ ಮಾಡುತ್ತಿದ್ದು ಆತ್ಮಹತ್ಯೆ ಮಾಡಿಕೋ, ಅದಕ್ಕೆ ಕಾರಣ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಪಿ.ಜಯರಾಜನ್ ಎಂದು ಪತ್ರ ಬರೆದಿಡು ಎಂದು ಯನ್ನು ನನ್ನು ಕೊಲೆಯ ಪಿತೂರಿಯಲ್ಲಿ ತನ್ನನ್ನು ಒಂದು ತಿಂಗಳುಗಳ ಕಾಲ ಕೂಡಿಟ್ಟು ಹಿಂಸಿಸಿದ್ದಾರೆಂದು ಆಪಾದಿಸಿದ್ದಾನೆ.

ಚುನಾವಣೆಯ ಸಮಯದಲ್ಲಿ ಆರ್‌ಎಸ್‌ಎಸ್‌ನ ಕ್ರಮಗಳ ಬಗ್ಗೆ ವಿಷ್ಣು ಮತ್ತು ಅವನ ಕೆಲಗೆಳೆಯರು ಪ್ರಶ್ನೆ ಮಾಡಿದರು, ಆದರೆ ಅವರ ಮುಖಂಡ ಕಣ್ಣನ್ ಇದನ್ನು ಕಿವಿಗೆ ಹಾಕಿಕೊಳ್ಳದಿದ್ದಾಗ ಅವರು ಆತನ ಬಗ್ಗೆ ಪೋಲೀಸರಿಗೆ ತಿಳಿಸಿದರು. ಡಿಸೆಂಬರ್ 15 ರಂದು ಕೆಲ ಆರ್‌ಎಸ್‌ಎಸ್ ಕಾರ್ಯಕರ್ತರು ಈತನನ್ನುಅಪಹರಿಸಿ ತಿರುವನಂತಪುರಕ್ಕೆ ಒಯ್ಯಲಾಯಿತು. ಅಲ್ಲಿ ಆರೆಸ್ಸೆಸ್ ಮುಖಂಡರ ಮುಮದೆ ವಿಚಾರಣೆ ನಡೆಸಲಾಯಿತು. ಪೊಲೀಸರಿಗೆ ಹೇಳಿರುವುದನ್ನು ಒಪ್ಪಿಕೊಂಡಾಗ ನಿರ್ದಯವಾಗಿ ಥಳಿಸಲಾಯಿತು. 86 ಗಂಟೆಗಳ ಕಾಲ ನಿದ್ದೆ ಮಾಡಲೂ ಬಿಡದೆ ಹಿಂಸಿಸಲಾಯಿತು. "ನಿನಗೆ ಬದುಕುವ ಹಕ್ಕು ಇಲ್ಲ' ಎಂದು ಹೇಳಲಾಯಿತು. "ನಂತರ ಜಯರಾಜನ್ ನನಗೆ ಮಾನಸಿಕ ಹಿಂಸೆ ನೀಡಿರುವ ಕಾರಣ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಪತ್ರ ಬರೆದಿಡಲು ಹೇಳಿದರು. ಈ ಅವಧಿಯಲ್ಲಿ ನನ್ನನ್ನು ಹಲವಾರು ಬಾರಿ ಆರ್‌ಎಸ್‌ಎಸ್ ಕಛೇರಿ ಮತ್ತು ಮುಖಂಡರ ಮನೆಗಳಿಗೆ ಸ್ಥಳಾಂತರಿಸಲಾಗಿದೆ. ಅಂತಿಮವಾಗಿ ಕಳೆದ ಶನಿವಾರ ಆರ್‌ಎಸ್‌ಎಸ್ ಕಛೇರಿಯೊಂದರಲ್ಲಿ ನನ್ನನ್ನೊಬ್ಬನೇ ಬಿಟ್ಟುಹೋದ ಸಮಯವನ್ನು ಬಳಸಿಕೊಂಡು ತಪ್ಪಿಸಿಕೊಂಡು ಬಂದೆ" ಎಂದು ಈತ ಹೇಳಿರುವುದಾಗಿ ಸಿಎನ್‌ಎನ್ ನ್ಯೂಸ್ 18 (ನೀತು ರೆಘುಕುಮಾರ್, ಜನವರಿ 28) ಪ್ರಕಟಿಸಿದೆ.

ಸಿಎನ್‌ಎನ್‌ನ್ಯೂಸ್18ನೊಂದಿಗೆ ಮಾತನಾಡುತ್ತ, ವಿಷ್ಣು ಹಲವಾರು ಎಕಡೆಗಳಲ್ಲಿ ಆರ್‌ಎಸ್‌ಎಸ್-ಬಿಜೆಪಿ ಕಾರ್ಯಕರ್ತರು ಬಿಜೆಪಿಯ ಧ್ವಜವನ್ನು ತಾವೇ ನಾಶಪಡಿಸಿ ಅದನ್ನು ಸಿಪಿಎಂ ಮೇಲೆ ಹಾಕುತ್ತಿದ್ದರು. ಎಂದು ವಿವರಿಸಿದ್ದಾನೆ.

ನೀರೀಕ್ಷೆಯಂತೆ ಈ ಎಲ್ಲ ಆಪಾದನೆಗಳನ್ನು ಅಲ್ಲಗಳೆದಿದ್ದು, ವಿಷ್ಣು ತಮ್ಮ ಕಾರ್ಯಕರ್ತನಾಗಿರಲಿಲ್ಲ, ಇದೆಲ್ಲಪಿತೂರಿ ಎಂದು ತಳ್ಳಿ ಹಾಕಿದ್ದಾರೆ.

ಆದರೆ ಈ ಬಗ್ಗೆ ವಿಶೇಷ ಪೊಲೀಸ್ ತನಿಖಾ ದಳ ಯತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಧ ಪಡಿಯೇರಿ ಬಾಲಕೃಷ್ಣನ್ ಮತ್ತು ಕಣ್ಣೂರು ಜಿಲಲಾ ಕಾರ್ಯದರ್ಶಿ ಪಿ ಜಯರಾಜನ್ ಆಗ್ರಹಿಸಿದ್ದಾರೆ. ಅಪಹರಣ, ಚಿತ್ರಹಿಂಸೆ, ಗಲಭೆಯ ಕೇಸು ಹಾಕಿ ಈಬಗ್ಗೆ ಒಂದು ಅಸಿಸ್ಟೆಂಟ್ ಕಮಿಶನರ್ ನೇತೃತ್ವದ ವಿಶೇಷ ತನಿಖಾ ದಳ ಪರಿಶೀಲಿಸುತ್ತಿರುವುದಾಗಿ ನ್ಯೂಸ್ 18 ವರದಿ ಮಾಡಿದೆ.

ಕೇರಳದಲ್ಲಿ ಆರೆಸ್ಸೆಸ್/ಬಿಜೆಪಿ ಹಿಂಸಾಚಾರವನ್ನು ಹೆಚ್ಚಿಸುತ್ತಿದೆ-ಸಿಪಿಐ(ಎಂ) ಪೊಲಿಟ್‌ಬ್ಯುರೋ

ಕೇರಳದ ಕಣ್ಣೂರು ಜಿಲ್ಲೆಯ ತಲಶೇರಿಯಲ್ಲಿ ಒಂದು ವರ್ಷದ ಹಿಂದೆ ಆರೆಸ್ಸೆಸ್ ದಾಳಿಗೆ ಬಲಿಯಾದ ಕೆ.ಪಿ.ಜಿತೇಶ್ ಸ್ಮಾರಕದ ಉದ್ಘಾಟನೆಯ ಸಮಾರಂಭದ ಮೇಲೆ ಆರೆಸ್ಸೆಸ್/ಬಿಜೆಪಿ ಗೂಂಡಾಗೂ ಬಾಂಬ್ ದಾಳಿ ನಡೆಸಿದ ಘಟನೆ ಕಳೆದ ವಾರ ನಡೆದಿದೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮತ್ತು ಪೊಲಿಟ್‌ಬ್ಯುರೋ ಸದಸ್ಯ ಕೊಡಿಯೇರಿ ಬಾಲಕೃಷ್ಣನ್ ಆಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಈ ದಾಳಿಯಲ್ಲಿ ಒಬ್ಬ ಸಿಪಿಐ(ಎಂ) ಕಾರ್ಯಕರ್ತ ಗಾಯಗೊಂಡು ಆಸ್ಪತ್ರೆಗೆ ಸೇರಿಸಲಾಗಿದೆ.

ಈ ದಾಳಿಯಎರಡು ದಿನಗಳ ಹಿಂದೆಯಷ್ಟೇ ದಿಲ್ಲಿಯ ಕೇರಳ ಭವನದ ಮುಂದೆ ಬಿಜೆಪಿ ಕಾರ್ಯಕರ್ತರು ಕೇರಳದಲ್ಲಿ, ಅದರಲ್ಲೂ ಕಣ್ಣೂರು ಜಿಲ್ಲೆಯಲ್ಲಿ ಆರೆಸ್ಸೆಸ್/ಬಿಜೆಪಿಯ ಮೇಲೆ ದಾಳಿ ನಡೆಯುತ್ತಿದೆ ಎಂದು ಮತಪ್ರದರ್ಶನ ನಡೆಸಿದ್ದರು. ಇದು ಶುದ್ಧ ಸುಳ್ಳು ಎಂಬುದನ್ನು ಈ ದಾಳಿ ಬಯಲು ಮಾಡಿದೆ ಎಂದು ಇದನ್ನು ಬಲವಾಗಿ ಖಂಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ನಿಜಸಂಗತಿಯೆಂದರೆ ದಾಳಿಗೆ ಒಳಗಾಗುತ್ತಿರುವವರು ಸಿಪಿಐ(ಎಂ) ಮತ್ತು ಎಲ್‌ಡಿಎಫ್‌ನ ಇತರ ಘಟಕಗಳು. ಎಲ್‌ಡಿಎಫ್ ಅಧಿಕಾರಕ್ಕೆ ಬಂದಾಗಲೆಲ್ಲ ಇದು ನಡೆದಿದೆ. ಪಿಣರಾಯಿ ವಿಜಯನ್ ಅವರ ಚುನಾವಣಾ ವಿಜಯದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸಿಪಿಐ(ಎಂ) ಕಾರ್ಯಕರ್ತ ರವೀಂದ್ರನಾಥ ಹತ್ಯೆಯೊಂದಿಗೆ ಪ್ರಸಕ್ತ ದಾಳಿಗಳ ಸುತ್ತು ಆರಂಭವಾಗಿದೆ. ಇದುವರೆಗೆ ಆರು ಸಿಪಿಐ(ಎಂ) ಕಾರ್ಯಕರ್ತರು ಬಲಿಯಾಗಿದ್ದಾರೆ, ಹಲವಾರು ಮಂದಿ ಗಾಯಗೊಂಡಿದ್ದಾರೆ. ಆರೆಸ್ಸೆಸ್/ಬಿಜೆಪಿ ತಕ್ಷಣವೇ ಈ ಹಿಂಸಾತ್ಮಕ ದಾಳಿಗಳನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಅವರಿಗೆ ಕರೆ ನೀಡಿದೆ.

ರಾಜ್ಯಗಳ ಸುತ್ತ



ಭಾರತಿ ಗಾಂವ್ಕರ್

ತಮಿಳು ನಾಡು: ಯುವಜನರ ಪ್ರತಿಭಟನೆಗಳಿಗೆ 'ದೇಶ ದ್ರೋಹ'ದ ಹಣೆಪಟ್ಟಿ

ತಮಿಳುನಾಡಿನ ನಾಡುಕುಪ್ಪಂ ಮತ್ತು ರುಧಿರಪುರಂ, ಜಲ್ಲಿಕಟ್ಟು ವಿಷಯಕ್ಕೆ ಸಂಬಂಧಿಸಿದಂತೆ ಕಾನೂನಾತ್ಮಕ ಪರಿಹಾರದ ಬೇಡಿಕೆ ಮತ್ತು ಜನಪ್ರತಿರೋಧದ ವಿರುದ್ಧ ಪೋಲೀಸರು ಹರಿಬಿಟ್ಟ ವ್ಯಾಪಕ ಹಿಂಸೆಯಿಂದ ತತ್ತರಿಸಿದ ಪ್ರದೇಶವಾಗಿದೆ.

ಪ್ರತಿಭಟನಾಕಾರರು 7 ದಿನಗಳ ಕಾಲ ಶಾಂತಿಯುತ ಪ್ರತಿಭಟನೆ ನಡೆಸಿದ್ದಾರೆ. ಪೋಲೀಸರ ಧಾಳಿ ಪೂರ್ವಯೋಜಿತ ಕಾರ್ಯ. ಬಡವರು ತುಳಿತಕ್ಕೊಳಗಾದವರು ಮತ್ತು ಅನೇಕ ದಲಿತ ಮನೆಗಳು ತಮ್ಮ ವಸ್ತುಗಳನ್ನು ಕಳೆದುಕೊಂಡಿದ್ದಾರೆ. ಈ ಧಾಳಿಯಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಅಮಾನತ್ತುಗೊಳಿಸಬೇಕು ಮತ್ತು ಶಿಕ್ಷೆಗೊಳಪಡಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಪ್ರತಿಭಟಿಸುತ್ತಿದ್ದ ಯುವಜನರಿಗೆ ಪೋಲೀಸರು ಹಾಗೂ ತಮಿಳುನಾಡು ಮುಖ್ಯಮಂತ್ರಿ ಪನೀರ್‌ಸೆಲ್ವಂ 'ದೇಶ-ದ್ರೋಹಿ' ಎಂಬ ಹಣೆ ಪಟ್ಟಿ ಹಚ್ಚಿರುವುದನ್ನು ಸಿಪಿಐ(ಎಂ) ಖಂಡಿಸುತ್ತದೆ ಎಂದು ನಾಡುಕುಪ್ಪಂ ಮತ್ತು ರುಧಿರಪುರಂಗೆ ಭೇಟಿ ನೀಡಿದ ಪಕ್ಷದ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ ಕಾರಟ್ ಹಾಗೂ ತಮಿಳುನಾಡು ರಾಜ್ಯ ಮುಖಂಡರು ಹೇಳಿದ್ದಾರೆ.

ದಲಿತರ ಪರಿಸ್ಥಿತಿಯನ್ನು ಸುಧಾರಿಸುವ ಪ್ರಧಾನಿ ಭರವಸೆ ಹುಸಿಯಾಗಿದೆ- ಡಿಎಸ್‌ಎಂಎಂ

ಪುಟ 10 ರಿಂದ

ಮೋದಿ ಸರಕಾರ ಯೋಜನಾ ಮತ್ತು ಯೋಜನೇತರ ಎಂಬ ವಿಂಗಡಣೆಯನ್ನು ಕೈಬಿಟ್ಟಿರುವುದರಿಂದಾಗಿ ಈ ಬಜೆಟನಲ್ಲಿ ವಿಶೇಷ ಘಟಕ ಯೋಜನೆ ಎಂಬುದು ಇಲ್ಲ. ಇದರಿಂದಾಗಿ ಎಲ್ಲ ಲೆಕ್ಕಾಚಾರಗಳನ್ನು, ರೆವಿನ್ಯೂ ಖರ್ಚುಗಳನ್ನು ಕೂಡ ಕಲಸುಮೇಲೋಗರ ಮಾಡಲಾಗಿದೆ. ಇದು ಅಭಿವೃದ್ಧಿ ಚಟುವಟಿಕೆಗಳನ್ನು ಉತ್ತಮಪಡಿಸುವುದಿಲ್ಲ. ಒಟ್ಟಟಟಟು 21ಲಕ್ಷ ಕೋಟಿ ರೂ.ಗಳ ಬಜೆಟಿನಲ್ಲಿ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆ ಕೊಟ್ಟಿರುವ ಹಣ ಕೇವಲ 52000 ಕೋಟಿ ರೂ. ಇದು ಕೂಡ ಬಂಡವಾಳ ಹೂಡಿಕೆ ಮಾತ್ರವೋ ಅಥವ ರೆವಿನ್ಯೂ ಖರ್ಚು ಕುಡ ಇದರಲ್ಲಿ ಸೇರಿದೆಯೋ ಸ್ಪಷ್ಟವಿಲ್ಲ. ಇದು ಒಟ್ಟು ಬಜೆಟ್ ವೆಚ್ಚದ 16% ದಷ್ಟಿರಬೇಕು ಎಂದು ವಿಧಿಸಲಾಗಿದೆ. ಆದರೆ ಈ ಬಜೆಟ್ ಕೊಟ್ಟಿರುವ ಹಣ ಒಟ್ಟು ಬಜೆಟಿನ ಕೇವಲ 2.5% ಮತ್ತು ಒಟ್ಟು ಬಂಡವಾಳ ಖರ್ಚಿನ 10%ಕ್ಕಿಂತ ಕಡಿಮೆ ಇದೆ.

ಅಲ್ಲದೆ ಬಜೆಟ್ ಕೊಟ್ಟಿರುವ ಹಣವನ್ನು ಪೂರ್ಣವಾಗಿ ಖರ್ಚು ಮಾಡದಿರುವ ಪರಿಪಾಠವೂ ಇದ್ದು, ಈಬಗ್ಗೆ ಡಿಎಸ್‌ಎಂಎಂ ಕಡ್ಡಾಯವಾಗಿ ಖರ್ಚು ಮಾಡಬೇಕೆಂಬ ಒಮದು ಕಾನೂನು ತರಬೇಕೆಂದು ಆಗ್ರಹಿಸಿತ್ತು. ಅದಿನ್ನೂ ಆಗಿಲ್ಲ .

ಪ್ರಧಾನ ಮಂತ್ರಿಗಳು ದಲಿತರ ಬದುಕುಗಳನ್ನು ಉತ್ತಮಪಡಿಸುವ ಬಗ್ಗೆ ಬಹಳಷ್ಟು ಮಾತಾಡಿದ್ದರು, ಭರವಸೆಗಳನ್ನು ನೀಡಿದ್ದರು. ಇವೆಲ್ಲ ಹುಸಿಯಾಗಿವೆ.ನೋಟು ರದ್ದತಿಯ ನಂತರ ಬಡವರ, ಅದರಲ್ಲೂ ದಲಿತರ ಪರಿಸ್ಥಿತಿ ಹದಗೆಟ್ಟಿದೆ. ಇದ-ರಿಂದಾಗಿ ಬಜೆಟ್ ಮೂಲಕ ಹಣಕಾಸು ನೆರವು ಸಿಗಬುದೆಂಬ ನಿರೀಕ್ಷೆಯೂ ಹುಸಿಯಾಗಿದೆ ಎಂದು ಖೇದ ವ್ಯಕ್ತಪಡಿಸಿರುವ ಡಿಎಸ್‌ಎಂಎಂ ಒಟ್ಟಾಗಿ ಹೋರಾಡುವುದಲ್ಲದೆ ಬೇರೆ ಮಾರ್ಗವಿಲ್ಲ ಎಂದು ಹೇಳಿದೆ.

ಕರ್ನಾಟಕದ ಹಳ್ಳಿಗಳ ಆರ್ಥಿಕ ಸಮೀಕ್ಷೆ...... ಪುಟ 6 ರಿಂದ

ಹಣಕಾಸು ಕೂಡ ಅಷ್ಟೇ ಮುಖ್ಯ. ಎರಡು ರೀತಿಯ ಸಾಲಗಳು ಲಭ್ಯ. ಒಂದು ಸರಕಾರಿ ಸಾಲ ಮತ್ತೊಂದು ಖಾಸಗಿ ಸಾಲ. ಸರಕಾರಿ ಸಾಲದ ಬಡ್ಡಿದರ ಕಡಿಮೆ, ಶರತ್ತುಗಳು ಸಡಿಲ, ಮರುಸಂದಾಯ ಮಾಡದಿದ್ದರೂ ನಡೆಯುತ್ತದೆ. ಸರಕಾರಿ ಸಾಲಕ್ಕೆ ಹೋಲಿಸಿದರೆ ಖಾಸಗಿ ಸಾಲದ ಬಡ್ಡಿದರ ಹೆಚ್ಚು, ಕಠಿಣ ಶರತ್ತುಗಳು, ಸಾಲ ಮರುಸಂದಾಯವಾಗದಿದ್ದರೆ ಸಾಲ ಪಡೆದವರು ತಮ್ಮ ಮನೆಮಠ ಕಳೆದುಕೊಳ್ಳಬೇಕಾಗುತ್ತದೆ. ಅಧ್ಯಯನ ಹಳ್ಳಿಗಳಲ್ಲಿ ಹೆಚ್ಚುಕಡಿಮೆ ಕಾಲುಭಾಗದಷ್ಟು ಕೃಷಿಕರು ಯಾವುದೇ ಮೂಲದಿಂದಲೂ ಸಾಲ ಪಡೆದಿಲ್ಲ. ಅಂ–ದರೆ ಇವರಿಗೆ ಸಾಲದ ಅವಶ್ಯಕತೆ ಇಲ್ಲವೆಂದಲ್ಲ, ಇವರಿಗೆ ಯಾವುದೇ ಮೂಲದಿಂದಲೂ ಸಾಲ ಪಡೆಯುವ ಶಕ್ತಿ ಇಲ್ಲ ಎಂದರ್ಥ. ಎಲ್ಲ ಹಳ್ಳಿಗಳಂತೆ ಈ ಹಳ್ಳಿಗಳಲ್ಲೂ ಸರಕಾರಿ ಮೂಲದಿಂದ ಸಾಲ ಪಡೆದವರ ಸಂಖ್ಯೆ ಕಡಿಮೆ ಇದ್ದು ಖಾಸಗಿ ಮೂಲದಿಂದ ಸಾಲ ಪಡೆದವರ ಸಂಖ್ಯೆ ಜಾಸ್ತಿ ಇದೆ. ಎರಡೂ ಮೂಲಗಳಿಂದಲೂ ಸಾಲ ಪಡೆದವರು ಕೂಡ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಸಾಲದ ಮೇಲಿನ ಬಡ್ಡಿದರ ನೋಡಿದರೆ ನಮ್ಮ ರೈತರು ಏಕೆ ಉದ್ಧಾರವಾಗುವುದಿಲ್ಲ ಎನ್ನುವ ಮತ್ತೊಂದು ಸತ್ಯ ಹೊರಬರುತ್ತದೆ. ಪ್ರತಿ ನೂರು ರುಪಾಯಿಗಳ ಸಾಲಕ್ಕೆ ನೂರಇಪ್ಪತ್ತು ಬಡ್ಡಿ ಕೊಡುವ ಉದಾಹರಣೆಗಳಿವೆ. ಎಲ್ಲ ಹಳ್ಳಿಗಳಲ್ಲೂ ಸರಾಸರಿ ಬಡ್ಡಿದರ ಶೇ.24ರ ಆಸುಪಾಸಿನಲ್ಲಿದೆ.

ಶಿಕ್ಷಣ, ಆರೋಗ್ಯ

ಭೂಮಿ ಇಲ್ಲದವರು ಗಳಿಸಬೇಕಾದರೆ ಶಿಕ್ಷಣ, ಆರೋಗ್ಯಗಳು ಬೇಕು. ಆದರೆ ಎಲ್ಲ ಹಳ್ಳಿಗಳಂತೆ ಈ ಹಳ್ಳಿಗಳಲ್ಲೂ ಸಾಕ್ಷರತೆ ಪ್ರಮಾಣ ರಾಜ್ಯ ಸರಾಸರಿಗಿಂತ ಕಡಿಮೆ ಇದೆ. ಮಂಡ್ಯ ಮತ್ತು ಕೋಲಾರ ಜಿಲ್ಲೆಗಳ ಹಳ್ಳಿಗಳು ರಾಜ್ಯ ಸರಾಸರಿಗೆ ಹತ್ತಿರದ ಸಾಕ್ಷರತೆ ಪ್ರಮಾಣ ಹೊಂದಿದ್ದರೆ, ಗುಲ್ಬರ್ಗದ ಹಳ್ಳಿ ರಾಜ್ಯ ಸರಾಸರಿಗಿಂತ ಗಾವುದ ದೂರ ಇದೆ. ಎಲ್ಲ ಹಳ್ಳಿಗಳಲ್ಲೂ ಪುರುಷರಿಗೆ ಹೋಲಿಸಿದರೆ ಮಹಿಳೆಯರ ಸಾಕ್ಷರತೆ ಪ್ರಮಾಣ ತುಂಬಾ ಹಿಂದಿದೆ. ಈ ಪುಸ್ತಕದಲ್ಲಿ ಆರೋಗ್ಯದ ಕುರಿತು ನೇರ ಪ್ರಸ್ತಾಪ ಇಲ್ಲ. ಆದರೆ ಆರೋಗ್ಯವನ್ನು ನೇರವಾಗಿ ಮತ್ತು ಪರೋಕ್ಷವಾಗಿ ಪ್ರಭಾವಿಸುವ ವಸತಿ, ಕುಡಿಯುವ ನೀರು ಹಾಗು ಶೌಚಾಲಯಗಳ ಬಗ್ಗೆ ಮಾಹಿತಿ ಇದೆ. ಎಲ್ಲ ಅನುಕೂಲಸ್ಥರು ಪಕ್ಕಾಮನೆ ಹೊಂದಿದ್ದರೆ ಅನುಕೂಲ ಕಡಿಮೆ ಆದಂತೆ ಮನೆ ಗುಣಮಟ್ಟ ಕೂಡ ಕಡಿಮೆಯಾಗುತ್ತದೆ ಹೋಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯ ಹೊಂದುವುದು ಮತ್ತು ಬಳಸುವುದು ಎರಡೂ ಕೂಡ ಅಪರೂಪದ ಸಂಗತಿಯಾಗಿದೆ. ಇಲ್ಲೂ ಮಂಡ್ಯ ಜಿಲ್ಲೆಯ ಹಳ್ಳಿಯಲ್ಲಿ ಅರ್ಧದಷ್ಟು ಕುಟುಂಬಗಳು ಶೌಚಾಲಯ ಹೊಂದಿದ್ದರೆ, ಕೋಲಾರ ಮತ್ತು ಗುಲ್ಬರ್ಗ ಜಿಲ್ಲೆಯ ಹಳ್ಳಿಗಳಲ್ಲಿ ಅತ್ಯಂತ ಕಡಿಮೆ ಸಂಖ್ಯೆಯ ಕುಟುಂಬಗಳು ಶೌಚಾಲಯ ಹೊಂದಿವೆ. ಹೆಚ್ಚು ಕಡಿಮೆ ಎಲ್ಲ ಮನೆಗಳು ಕುಡಿಯುವ ನೀರು ಹೊಂದಿವೆಯೆಂದು ಅಧ್ಯಯನ ಹೇಳುತ್ತಿದೆ. ಆದರೆ ಕುಡಿಯುವ ನೀರಿನ ಗುಣಮಟ್ಟ ಕುರಿತು ಮಾಹಿತಿ ಇಲ್ಲ. ಈ ಮೂರು ಸಂಗತಿಗಳ ಇರುವಿಕೆ ಮತ್ತು ಆರೋಗ್ಯದ ನಡುವೆ ಸಂಬಂಧ ಇದೆ. ಇದೇ ರೀತಿಯಲ್ಲಿ ಈ ಮೂರು ಸಂಗತಿಗಳ ಇರುವಿಕೆ ಮತ್ತು ಕುಟುಂಬದ ಆರ್ಥಿಕ ಸ್ಥಿತಿಗತಿ ನಡುವೆ ಸಂಬಂಧ ಇದೆ. ಎಲ್ಲ ಹಳ್ಳಿಗಳಲ್ಲೂ ಅನುಕೂಲಸ್ಥರು ಮಾತ್ರ ಉತ್ತಮ ಮನೆ ಹೊಂದಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಇದೇ ರೀತಿಯಲ್ಲಿ ಶಿಕ್ಷಣ ಮತ್ತು ಆದಾಯದ ನಡುವೆ ನೇರ ಸಂಬಂಧ ಇದೆ. ಅನುಕೂಲಸ್ಥ ಕುಟುಂಬಗಳ ಎಲ್ಲರೂ ಶಿಕ್ಷಣ ಪಡೆದ–ರೆ ಅನುಕೂಲ ಕಡಿಮೆಯಾದಂತೆ ಶಿಕ್ಷಣ ಪಡೆದವರ ಸಂಖ್ಯೆಯೂ ಕಡಿಮೆಯಾಗುತ್ತಾ ಹೋಗುವುದನ್ನು ಅಧ್ಯಯನ ನಿಖರವಾಗಿ ತೋರಿಸುತ್ತದೆ.

ಗ್ರಾಮೀಣ ಕರ್ನಾಟಕದ ಪಿರಮಿಡ್

ತೊಂಬತ್ತರ ನಂತರದ ಮಾರುಕಟ್ಟೆ ಅಭಿವೃದ್ಧಿ ನೀತಿ ಗ್ರಾಮೀಣ ಜನರ ಬದುಕಿನ ಮೇಲೆ ಮಾಡಿದ ಪರಿಣಾಮದ ಬೇರೆ ಬೇರೆ ಮುಖಗಳನ್ನು ಈ ಪುಸ್ತಕದ ಅಧ್ಯಾಯಗಳು ಬಿಚ್ಚಿಡುತ್ತಿವೆ. ಮಾರುಕಟ್ಟೆ ಅಭಿವೃದ್ಧಿ ನೀತಿಯಿಂದ ನಮ್ಮ ಸಮಾಜವೊಂದು ಪಿರಮಿಡ್ ಆಕೃತಿಯಲ್ಲಿ ರೂಪಿತವಾಗಿರುವುದನ್ನು ತೋರಿಸುವ ಹಲವು ಅಧ್ಯಯನಗಳಿವೆ. ಪಿರಮಿಡ್‌ನ ಮೇಲ್ಭಾಗದಲ್ಲಿರುವ ಅಲ್ಪ ಸಂಖ್ಯೆಯ ಜನರ ಸ್ವಾಧೀನದಲ್ಲಿ ಅತೀ ಹೆಚ್ಚು ಆದಾಯ, ಅಧಿಕಾರ, ಸ್ಥಾನಮಾನ ಕ್ರೋಢೀಕರಣಗೊಂಡರೆ, ಮಧ್ಯದಲ್ಲಿರುವವರಲ್ಲಿ ಮೇಲಿನವರಿಗಿಂತ ಕಡಿಮೆ ಆದಾಯ, ಅಧಿಕಾರ ಕ್ರೋಢೀಕರಣಗೊಂಡಿದೆ. ಪಿರಮಿಡ್ ಬುಡದಲ್ಲಿರುವ ಬಹುತೇಕರು ಏನೇನೂ ಆದಾಯ, ಅಧಿಕಾರಗಳಿಲ್ಲದೆ ಮೂರು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ. ಹೆಚ್ಚು ಕಡಿಮೆ ದೇಶ ಮತ್ತು ಎಲ್ಲ ರಾಜ್ಯಗಳ ಕತೆ–ಯೂ ಇದುವೇ ಆಗಿದೆ. ಇದೇ ಸ್ಥಿತಿ ಗ್ರಾಮೀಣ ಮಟ್ಟದಲ್ಲೂ ಇರುವುದನ್ನು ಈ ಅಧ್ಯಯನ ಸಾಕಷ್ಟು ಸಾಕ್ಷಿಪುರಾವೆಗಳ ಮೂಲಕ ಸಾಬೀತು ಪಡಿಸುತ್ತಿದೆ. ಹಳ್ಳಿಯಲ್ಲಿರುವ ಕುಟುಂಬಗಳನ್ನು ಭೂಹಿಡುವಳಿ, ಕುಟುಂಬದೊಳಗಿನ ಮತ್ತು ಹೊರಗಿನ ಶ್ರಮಿಕರ ಅನುಪಾತ, ಒಟ್ಟು ಆದಾಯ, ಆದಾಯದ ಮೂಲ ಇತ್ಯಾದಿ ಮಾನದಂಡಗಳನ್ನು ಬಳಸಿಕೊಂಡು – ಭೂಮಾಲೀಕರು (ಹತ್ತು ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು), ರೈತರು, ಶ್ರಮಿಕರು ಮತ್ತು ಕೃಷಿಯೇತರ ವರ್ಗ ಎನ್ನುವ ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದಾರೆ. ರೈತರನ್ನು ಅವರು ಹೊಂದಿರುವ ಆಸ್ತಿಪಾಸ್ತಿಗಳ ಮೌಲ್ಯದ ನೆಲೆಯಲ್ಲಿ ಪುನಃ ನಾಲ್ಕು ಗುಂಪುಗಳಾಗಿ ವಿಂಗಡಿಸಿದ್ದಾರೆ. ರೂ. 50 ಲಕ್ಷಕ್ಕಿಂತ ಹೆಚ್ಚಿನ ಮೌಲ್ಯದ ಆಸ್ತಿಪಾಸ್ತಿ ಇರುವವರನ್ನು ರೈತರು – 1, ರೂ.20–50 ಲಕ್ಷಗಳ ನಡುವೆ ಆಸ್ತಿಪಾಸ್ತಿ ಇರುವವರನ್ನು ರೈತರು – 2, ರೂ.10–20 ಲಕ್ಷ ಮೌಲ್ಯದ ಆಸ್ತಿಪಾಸ್ತಿ ಇರುವವರನ್ನು ರೈತರು – 3 ಮತ್ತು ರೂ. 10ಲಕ್ಷಕ್ಕಿಂತ ಕಡಿಮೆ ಮೌಲ್ಯದ ಆಸ್ತಿಪಾಸ್ತಿ ಇರುವವರನ್ನು ರೈತರು – 4 ಎಂದು ಗುರುತಿಸಿದ್ದಾರೆ. ಇದೇ ರೀತಿ ಶ್ರಮಿಕರನ್ನು ಅವರ ಆದಾಯ ಮೂಲದ ನೆಲೆಯಲ್ಲಿ ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ. ಬಾಡಿಗೆ, ವ್ಯಾಪಾರ, ಸಂಬಳ ಇತ್ಯಾದಿ ಕೃಷಿಯೇತರ ಮೂಲದಿಂದ ಆದಾಯ ಪಡೆಯುವವರನ್ನು ಕೃಷಿಯೇತರ ವರ್ಗದಲ್ಲಿ ಸೇರಿಸಿದ್ದಾರೆ.

ಅಸಮಾನತೆ

ಅಧ್ಯಯನ ಮಾಡಿದ ಹಳ್ಳಿಗಳಲ್ಲಿ, ಕೋಲಾರದಲ್ಲಿ ಭೂಮಾಲೀಕರು ಇಲ್ಲ. ಮಂಡ್ಯದಲ್ಲಿ ಶೇ.1ರಷ್ಟು ಮತ್ತು ಗುಲ್ಬರ್ಗದಲ್ಲಿ ಶೇ.4ರಷ್ಟು ಭೂಮಾಲೀಕರಿದ್ದಾರೆ. ಮಂಡ್ಯದ ಶೇ.1ರಷ್ಟಿರುವ ಭೂಮಾಲೀಕರ ಸ್ವಾಧೀನದಲ್ಲಿ ಹಳ್ಳಿಯ ಶೇ.19ರಷ್ಟು ಆಸ್ತಿಪಾಸ್ತಿ, ಶೇ.20ರಷ್ಟು ಆದಾಯ ಮತ್ತು ಶೇ.6ರಷ್ಟು ಭೂಮಿ ಇದ್ದರೆ ಗುಲ್ಬರ್ಗ ಜಿಲ್ಲೆಯ ಜಾಪುರ್ ಹಳ್ಳಿಯಲ್ಲಿರುವ ಶೇ.4ರಷ್ಟು ಭೂಮಾಲೀಕರಲ್ಲಿ ಶೇ.34ರಷ್ಟು ಆಸ್ತಿಪಾಸ್ತಿ, ಶೇ.22ರಷ್ಟು ಆದಾಯ ಮತ್ತು ಶೇ.19ರಷ್ಟು ಭೂಮಿ ಕ್ರೋಢೀಕರಣಗೊಂಡಿದೆ. ಭೂಮಾಲೀಕರು ಮತ್ತು ಶ್ರೀಮಂತ ರೈತರ ಸಂಖ್ಯೆ ಮಂಡ್ಯದಲ್ಲಿ ಶೇ.21, ಕೋಲಾರದಲ್ಲಿ ಶೇ.35 ಮತ್ತು ಗುಲ್ಬರ್ಗದಲ್ಲಿ ಶೇ.12ರಷ್ಟು ಇದೆ. ಮಂಡ್ಯ ಜಿಲ್ಲೆಯ ಅಲಭುಜನ ಹಳ್ಳಿಯ ಒಟ್ಟು ಆಸ್ತಿಪಾಸ್ತಿಯ ಶೇ.68ರಷ್ಟು, ಆದಾಯದ ಶೇ.52ರಷ್ಟು ಮತ್ತು ಭೂಮಿಯ ಸೇ.52ರಷ್ಟು ಈ ಹಳ್ಳಿಯಲ್ಲಿರುವ ಶೇ.21ರಷ್ಟಿರುವ ಭೂಮಾಲೀಕ ಮತ್ತು ಶ್ರೀಮಂತ ರೈತರ ಸ್ವಾಧೀನ ಇವೆ. ಇದೇ ರೀತಿಯಲ್ಲಿ ಕೋಲಾರ ಜಿಲ್ಲೆಯ ಸಿರೆಸಂದ್ರ ಹಳ್ಳಿಯ ಒಟ್ಟು ಆಸ್ತಿಪಾಸ್ತಿಯ ಶೇ.76ರಷ್ಟು, ಆದಾಯದ ಶೇ.54ರಷ್ಟು ಮತ್ತು ಭೂಮಿಯ ಶೇ.72ರಷ್ಟು ಈ ಹಳ್ಳಿಯಲ್ಲಿ ಶೇ.35ರಷ್ಟಿರುವ ಶ್ರೀಮಂತ ರೈತರ ಸ್ವಾಧೀನ ಇವೆ. ಇನ್ನು ಗುಲ್ಬರ್ಗ ಸ್ಥಿತಿ ಹೇಳುವುದು ಬೇಡ. ಇಲ್ಲಿ ಶೇ.12ರಷ್ಟಿರುವ ಭೂಮಾಲೀಕರು ಮತ್ತು ಶ್ರೀಮಂತ ರೈತರು ಹಳ್ಳಿಯ ಶೇ.58ರಷ್ಟು ಆಸ್ತಿಪಾಸ್ತಿ, ಶೇ.33ರಷ್ಟು ಆದಾಯ ಮತ್ತು ಶೇ.59ರಷ್ಟು ಭೂಮಿ ಹೊಂದಿದ್ದಾರೆ. ಹಳ್ಳಿಯ ಆಸ್ತಿಪಾಸ್ತಿ, ಆದಾಯ ಮತ್ತು ಭೂಮಿ ಅಲ್ಪಸಂಖ್ಯೆಯಲ್ಲಿರುವ ಅನುಕೂಲಸ್ಥ ಕುಟುಂಬಗಳಲ್ಲಿ ಕ್ರೋಢೀಕರಣಗೊಂಡರೆ ಹೆಚ್ಚು ಕಡಿಮೆ ಮೂರನೇ ಒಂದರಷ್ಟಿರುವ ಕೃಷಿ ಕಾರ್ಮಿಕ ಕುಟುಂಬಗಳು ಅತ್ಯಂತ ಕಡಿಮೆ ಆಸ್ತಿಪಾಸ್ತಿ, ಆದಾಯ ಮತ್ತು ಭೂಮಿ ಹೊಂದಿವೆ.

ರೈತ ಆತ್ಮಹತ್ಯೆಗಳು

ತೊಂಬತ್ತರ ನಂತರದ ಖಾಸಗೀಕರಣ ನೀತಿಗಳು ಎಲ್ಲರಿಗೂ ಹಾನಿ ಮಾಡಿಲ್ಲ, ಸಮಾಜದ ಸಣ್ಣ ವರ್ಗಕ್ಕೆ ಅನುಕೂಲ ಮಾಡಿ ಸಮಾಜದ ಬಹುತೇಕರಿಗೆ ನಷ್ಟ ಮಾಡಿರುವುದನ್ನು ದೇಶ, ರಾಜ್ಯ ಮಟ್ಟದ ಅಧ್ಯಯನಗಳು ತೋರಿಸುತ್ತಿವೆ. ಗ್ರಾಮೀಣ ಮಟ್ಟದಲ್ಲೂ ಇದೇ ಚಿತ್ರಣ ಇರುವುದನ್ನು ಈ ಅಧ್ಯಯನ ತೋರಿಸುತ್ತಿದೆ. ಖಾಸಗೀಕರಣ ನೀತಿಗಳು ತಂದ ಬದಲಾವಣೆಗಳಿಗೆ ಹೋಂದಾಣಿಕೆ ಮಾಡಿಕೊಳ್ಳಲಾರದ ಕೆಲವು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2015ರಲ್ಲಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಅತೀ ಹೆಚ್ಚು (27%) ರೈತರು ಆತ್ಮ ಹತ್ಯೆ ಮಾಡಿಕೊಂಡರೆ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಕಡಿಮೆ ಸಂಖ್ಯೆಯ (ಶೇ.15)ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇನ್ನುಳಿದ ಹೈದರಾಬಾದ್ ಕರ್ನಾಟಕದಲ್ಲಿ ಶೇ.21ರಷ್ಟು, ಮಧ್ಯ ಕರ್ನಾಟಕದಲ್ಲಿ ಶೇ.20 ಮತ್ತು ಮುಂಬಯಿ ಕರ್ನಾಟಕದಲ್ಲಿ ಶೇ.17ರಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅತ್ಮಹತ್ಯೆ ಮಾಡಿಕೊಂಡವರಲ್ಲಿ ವಾಣಿಜ್ಯ ಬೆಳೆಗಾರರ ಸಂಖ್ಯೆ ಕೂಡ ಹೆಚ್ಚಿದೆ. ಸಾಲ ಅದರಲ್ಲೂ ಖಾಸಗಿ ಸಾಲ ಆತ್ಮಹತ್ಯೆಗೆ ಮುಖ್ಯ ಕಾರಣ ಎನ್ನುವುದು ಹೆಚ್ಚು ಪ್ರಚಾರದಲ್ಲಿರುವ ಅಂಶ. ಆದ–ರೆ ಇವರ ಪ್ರಕಾರ ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇ.66ರಷ್ಟು ಸಂಘಟಿತ ವಲಯದಿಂದ ಅಥವಾ ಸರಕಾರಿ ಮೂಲದಿಂದ ಸಾಲ ಪಡೆದವರು. ಸುದ–ಾರಿತ ಕೃಷಿ ತಂತ್ರಜ್ಞಾನ ಬಳಕೆ ಕೊರತೆಯಿಂದಾಗುವ ಇಳುವರಿಯಲ್ಲಿನ ಕುಸಿತ, ಕೃಷಿ ಉತ್ಪನ್ನಗಳ ವೆಚ್ಚ ಮತ್ತು ಅವುಗಳ ಬೆಲೆಗಳ ನಡುವೆ ಸಂಬಂಧ ಇಲ್ಲದಿರುವುದು, ಮೂಲಸೌಕರ್ಯಗಳ ಕೊರತೆ ಇವೆಲ್ಲವೂ ರೈತರ ಆತ್ಮಹತ್ಯೆಗೆ ಕಾರಣವಾಗಿವೆಯೆಂದು ಈ ಅಧ್ಯಯನ ಹೇಳುತ್ತಿದೆ.

ಪರಿಹಾರವೇನು?

ಸಂಪತ್ತು ಕೆಲವರಲ್ಲೇ ಕ್ರೋಢೀಕರಣ ಗೊಂಡಿರುವುದು ಮಾರುಕಟ್ಟೆ ಅಭಿವೃದ್ಧಿ ನೀತಿಯಿಂದ ಎನ್ನುವ ಸಾಮಾನ್ಯ ನಂಬಿಕೆ ಎಲ್ಲರಲ್ಲೂ ಮನೆ ಮಾಡಿದೆ. ಆದರೆ ಇದು ವಾಸ್ತವ ಅಲ್ಲ. ಏಕೆಂದರೆ ಮಾರುಕಟ್ಟೆಯ ಬೆಳವಣಿಗೆ ಮತ್ತು ಗುಣಮಟ್ಟ ಪ್ರಜಾಪ್ರಭುತ್ವದ ಗುಣಮಟ್ಟದ ಮೇಲೆ ಅವಲಂಬಿತವಾಗಿದೆ. ಪ್ರಜಾಪ್ರಭುತ್ವದ ಗುಣಮಟ್ಟ ಉತ್ತಮಗೊಂಡಂತೆ ಮಾರುಕಟ್ಟೆಯ ಗುಣಮಟ್ಟ ಉತ್ತಮಗೊಳ್ಳುತ್ತದೆ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟ ಕೆಟ್ಟಂತೆ ಮಾರುಕಟ್ಟೆ ಗುಣಮಟ್ಟ ಕೆಡುತ್ತದೆ. ಮುಕ್ತ ಮಾರುಕಟ್ಟೆ ನಿಜವಾದ ಅರ್ಥದಲ್ಲಿ ಆಚರಣೆಗೆ ಬರಬೇಕಾದರೆ ಮುಕ್ತ ಪ್ರಜಾಪ್ರಭುತ್ವ ಆಚರಣೆಯಲ್ಲಿರಬೇಕಾಗುತ್ತದೆ. ಪ್ರಜಾಪ್ರಭುತ್ವ ಸಂಕುಚಿತಗೊಂಡಂತೆ ಮಾರುಕಟ್ಟೆ ಕೂಡ ಸಂಕುಚಿತಗೊಳ್ಳುತ್ತದೆ. ಗುಣಮಟ್ಟದ ಪ್ರಜಾಪ್ರಭುತ್ವ ಆಚರಣೆಯಲ್ಲಿರಬೇಕಾದರೆ ಸಮಾಜ ದ ಎಲ್ಲರೂ ಪ್ರಜಾಪ್ರಭತ್ವದಲ್ಲಿ ಮುಕ್ತವಾಗಿ ಪಾಲುಗೊಳ್ಳುವ ಅವಕಾಶ ಇರಬೇಕು. ತಾತ್ವಿಕವಾಗಿ ಈ ಅವಕಾಶ ನಮ್ಮಲ್ಲಿದೆ. ಅಂ–ದರೆ ಚುನಾವಣೆಯಲ್ಲಿ ಭಾಗವಹಿಸಲು ವ್ಯಕ್ತಿಯ ಜಾತಿ, ಧರ್ಮ. ಲಿಂಗ, ವರ್ಗಗಳು ಅಡ್ಡಿಯಾಗಬಾರದು. ಆದರೆ ವಾಸ್ತವದಲ್ಲಿ ಆ ರೀತಿ ನಡೆಯುತ್ತಿಲ್ಲ. ನಮ್ಮ ಜನಸಂಖ್ಯೆಯ ಅರ್ಧದಷ್ಟು ಮಹಿಳೆಯರಿದ್ದಾರೆ. ಆದ–ರೆ ಲೋಕಸಭೆಯ ಪ್ರತಿನಿಧಿಗಳ ಹತ್ತನೇ ಒಂದರಷ್ಟು ಮತ್ತು ವಿಧಾನಸಭೆಯ ಪ್ರತಿನಿಧಿಗಳ ಹತ್ತನೇ ಒಂದಕ್ಕಿಂತಲೂ ಕಡಿಮೆ ಮಹಿಳ ಪ್ರತಿನಿಧಿಗಳಿದ್ದಾರೆ. ಇದೇ ರೀತಿಯಲ್ಲಿ ನಮ್ಮ ಜನಸಂಖ್ಯೆಯ ಐದನೇ ಒಂದರಷ್ಟು ಅಲ್ಪಸಂಖ್ಯಾತರಿದ್ದಾರೆ. ಆದರೆ ಅಲ್ಪಸಂಖ್ಯಾತರ ಜನಪ್ರತಿನಿಧಿಗಳ ಸಂಖ್ಯೆ ಶೇಕಡ ಹತ್ತು ದಾಟುವುದಿಲ್ಲ. ದಲಿತ–ಬುಡಕಟ್ಟುಗಳ ಜನಸಂಖ್ಯೆಗೆ ಸಮನಾದ ಪ್ರತಿನಿಧಿಗಳಿದ್ದರೂ ಅವರು ದಲಿತ–ಬುಡಕಟ್ಟುಗಳ ಆಸಕ್ತಿಗಳನ್ನು ಪ್ರತಿನಿಧಿಸುವುದಕ್ಕಿಂತ ಹೆಚ್ಚು ದಲಿತ–ಬುಡಕಟ್ಟೇತರ ಜನರ ಆಸಕ್ತಿಗಳನ್ನು ಪ್ರತಿನಿಧಿಸುವ ಅನಿವಾರ್ಯತೆ ಇದೆ. ಹೀಗೆ ನಮ್ಮಲ್ಲಿ ಆಚರಣೆಯಲ್ಲಿರುವುದು ಅತೀ ಸಂಕುಚಿತ ಪ್ರಜಾಪ್ರಭುತ್ವ. ಸಂಕುಚಿತ ಪ್ರಜಾಪ್ರಭುತ್ವ ನಮ್ಮ ಸಮಾಜದ ಬಹುತೇಕರ ಆಸಕ್ತಿಗಳನ್ನು ಪ್ರತಿನಿಧಿಸುತ್ತಿಲ್ಲ. ಅಲ್ಪಸಂಖ್ಯೆಯಲ್ಲಿರುವ ಮೇಲ್ವರ್ಗದ ಆಸಕ್ತಿಗಳನ್ನು ಪ್ರತಿನಿಧಿಸುವ ಪ್ರಜಾಪ್ರಭುತ್ವ ತನ್ನ ಆಸಕ್ತಿಯನ್ನು ಪ್ರತಿನಿಧಿಸುವ ಮಾರುಕಟ್ಟೆಯನ್ನು ಕಟ್ಟಿಕೊಂಡಿದೆ. ಈ ವ್ಯವಸ್ಥೆಯಲ್ಲಿ ಅನಾನುಕೂಲಸ್ಥರು ಮಾರುಕಟ್ಟೆ ದರದಲ್ಲಿ ಖರೀದಿಸಿ ಅನುಭವಿಸಿದರೆ ಅನುಕೂಲಸ್ಥರು ಸರಕಾರದ ಕೃಪೆಯಲ್ಲಿ ಬದುಕುತ್ತಿದ್ದಾ–ರೆ. ಪ್ರಜಾಪ್ರಭುತ್ವದ ಗುಣಮಟ್ಟವನ್ನು ಸುಧಾರಿಸುವುದು ಮಾತ್ರ ಈ ಸಮಸ್ಯೆಗೆ ದೂರಗಾಮಿ ಪರಿಹಾರ. ■

ನಾವು ಎಳೆಯರು ನಾವು ಗೆಳೆಯರು...... ಪುಟ 16 ರಿಂದ

ಕುತೂಹಲವನ್ನು ಕೊನೆಕ್ಷಣದವರೆಗೂ ಸಭಾಂಗಣ ಸಮಿತಿ ಮುಚ್ಚಿಟ್ಟಿತ್ತು. ಕವಿತ, ಗೀತ, ಲಾವಣ್ಯ, ದೀಪು, ನವೀನ್ ಮುಂತಾದವರು ಮೂರು ಮಕ್ಕಳ ಹಬ್ಬದ ಢಮರುಗವನ್ನು ಸಿದ್ಧ ಪಡಿಸಿ ವೇದಿಕೆಯ ಮುಂಬಾಗದ ಛಾವಣಿಗೆ ಕಟ್ಟಿ ಬಿಟ್ಟಿದ್ದರು ಅವುಗಳಿಗೆ ಹಗ್ಗ ಬಿಗಿದು ಬಂದ ಅತಿಥಿಕೈಗಳಲ್ಲಿ ಎಳೆಸಿ ಬಿಟ್ಟರು. ಅದರೊಳಗಿಂದ ಮಿರಿ ಮಿರಿ ಮಿರುಗುವ ವಿವಿಧ ಹಬ್ಬದ ಚಿತ್ತಾರಗಳು ಅತಿಥಿಗಳ ಮೇಲೆ ಅಭ್ಯಂಜನ ಮಾಡಿಸಿದವು. ಉದ್ಘಾಟನೆ ಮಾಡಲು ಬಂದಿದ್ದ ಸಾಹಿತಿ ನಾ.ಡಿಸೋಜಾ ಮಂದಸ್ಮಿತರಾಗಿಬಿಟ್ಟರು. ಮರುಕ್ಷಣದಲ್ಲೇ ಮಕ್ಕಳು ಬಣ್ಣ ಬಣ್ಣದ ಕಿರೀಟಗಳನ್ನು ತಂದು ವೇದಿಕೆ ಮೇಲಿದ್ದವರ ತಲೆಗೆ ತೊಡಿಸಿ ಮಜಾ ಮಜಾ ಮಜಾ ಹಾಡೇಳಿ ಉದ್ಘಾಟಿಸಿದರು. ಬೋಳುವಾರರ ಸಮಾರೋಪ ನುಡಿ ಮಕ್ಕಳ ಹಬ್ಬವನ್ನು ಮುಗಿಲೆತ್ತರಕ್ಕೆ ಏರಿಸಿತು.

ಮಕ್ಕಳ ಹಬ್ಬದ ನಿಮಿತ್ತ ಒಂದು ತಿಂಗಳು ಮೊದಲೇ ಸಹ–ಸಂಪನ್ಮೂಲ ವ್ಯಕ್ತಿಗಳ ಕಾರ್ಯಾಗಾರ ಜೊತೆ–ಗೆ ಪ್ರಬಂಧ, ಚಿತ್ರಕಲೆ ಹಾಗೂ ಕವನ ಬರೆಯುವ ಸ್ಪರ್ಧೆಗಳನ್ನು ಜಿಲ್ಲೆಯ ಶಾಲೆಗಳ ಮಕ್ಕಳಿಗಾಗಿ ನಡೆಸಲಾಗಿತ್ತು. ಮೂರೂ ದಿನವೂ ವಿವಿಧ ಶಾಲೆಗಳು ವಿಜ್ಞಾನ ವಸ್ತುಪ್ರದರ್ಶನ ಏರ್ಪಡಿಸಿದ್ದವು ಬಗೆ ಬಗೆಯ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು. ಹಾಸನದ ಫೋಟೋ ಜರ್ನಲಿಸ್ಟ್ ಪ್ರಕಾಶರ ಫೋಟೋ ಗ್ಯಾಲರಿ ಮತ್ತು ಚಿಕ್ಕಮಗಳೂರಿನ ಶಿಕ್ಷಕಿ ಲಕ್ಷ್ಮಿಯವರ ಕಲಾ ಗ್ಯಾಲರಿ ಮನಮೋಹಕವಾಗಿತ್ತು. ಮಕ್ಕಳ ರಕ್ಷಣಾ ಘಟಕವು ಮಕ್ಕಳ ರಕ್ಷಣೆ ಮತ್ತು ಹಕ್ಕುಗಳ ಕುರಿತ ಪೋಸ್ಟರ್ ಪ್ರದರ್ಶನವನ್ನು ಅಚ್ಚುಕಟ್ಟಾಗಿ ಪ್ರದರ್ಶಿಸಿದರು. ಇದನ್ನು ಸಾಕಾರಗೊಳಿಸಲು ಪೋಷಕಿ ಹಾಗೂ ಸಂಚಾಲಕಿ ರಾಧ ತಿಂಗಳುಗಟ್ಟಲೆ ಶಾಲೆಗಳಿಗೆಲ್ಲಾ ತಿರುಗಾಡಿದರು. ಪರಿಣಾಮ ವಿಜ್ಞಾನ ನಗರವೇ ಸೃಷ್ಠಿಯಾಗಿತ್ತು.

ಹಾಸನದ ಜನತೆಯ ಉದಾರ ಸಹಾಯ

ಇಡೀ ಚಟುವಟಿಕೆ ಹಾಸನ ನಗರದ ಹೃದಯ ಭಾಗದ ಮಹಾರಾಜ ಪಾರ್ಕ್, ಕನ್ನಡ ಸಾಹಿತ್ಯ ಭವನ, ಶಾಸ್ತ್ರಾ ಶಾಲಾವರಣ, ಸೆಂಟ್ರಲ್ ಕಾಮರ್ಸ್ ಕಾಲೇಜು ಹಾಗೂ ಸೀತಾರಾಮಾಂಜನೇಯ ದೇವಸ್ತಾನದ ಆವರಣಗಳಲ್ಲಿ ಏಕಪ್ರಕಾರವಾಗಿ ನಡೆದವು. ಮಕ್ಕಳು, ಸ್ವಯಂ ಸೇವಕರು, ಸಂಪನ್ಮೂಲ ವ್ಯಕ್ತಿಗಳು ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುವ ದೃಶ್ಯ ಮನಮೋಹಕ, ಸಮಯ ಸಾಲದೆನ್ನುವ ಗೊ–ಣಗಾಟ, ಹೆಚ್ಚು ಸಮಯ ಕೊಡಿ ಎನ್ನುವ ದಂಬಾಲು ನೋವಿನ ನಡುವೆಯೂ ಅತ್ಯಾಕರ್ಷಕವಾಗಿತ್ತು. ಇದಕ್ಕೆ ಕಳಸಪ್ರಾಸಯವೆಂಬಂತೆ ಕರ್ನಾಟಕ ಪ್ರಾಂತ ರೈತಸಂಘದ ಜಿಲ್ಲಾಧ್ಯಕ್ಷ ನವೀನ್‌ಕುಮಾರ್ ಹಾಸನ ನಗರವನ್ನೆಲ್ಲಾ ತಮ್ಮ ಫೋಟೋಶಾಪ್ ಚಳಕದಿಂದ ರಂಗು ರಂಗಾಗಿಸಿ ಬಿಟ್ಟಿದ್ದರು.

ಈ ಬೃಹತ್ತಾಧ ಹಬ್ಬ ಸಂಘಟಿಸಲು ಹಾಸನದ ಜನತೆ ಉದಾರ ಧನ ಸಹಾಯ ಮಾಡಿದರು. ಹನುಮಂತನ ಬಾಲದಂತೆ ಬೆಳದಿದ್ದ ಸ್ವಾಗತ ಸಮಿತಿಯಲ್ಲಿ ನೂರಾರು ಜನ ವಿವಿಧ ಉಪಸಮಿತಿಗಳಲ್ಲಿ ತೊಡಗಿಸಿಕೊಂಡು ಮಕ್ಕಳ ಹಬ್ಬವನ್ನು ಬಹುಮಾದರಿಯಲ್ಲಿ ಫಲಪ್ರದಗೊಳಿಸಲು ಟೊಂಕಕಟ್ಟಿ ನಿಂತರು. ಒಟ್ಟಾರೆ ಇಡೀ ಹಬ್ಬ 'ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು' ಎನ್ನುವ ಸಮಭಾವ ಮೂಡಿಸಿ, ಇತಿಹಾಸದಲ್ಲಿ ಚಿತ್ತಾರ ಬಿಡಿಸಿತು, ವಿಶ್ವಮಾನವ ಸಂದೇಶ ಸಾರುತ್ತ ಜಗದಗಲದಲ್ಲಿ. ■

JANASHAKTHI KANNADA VARA PATRIKE Feb 6-12, 2017 Price : Rs. 10/- Date of Publication : 3 February 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕಣ್ಣೀರಿಲ್ಲದ ಕಲಿಕೆ ಬರಿ ಕನಸೆ? ಭರವಸೆ ಇಲ್ಲದ ಬದುಕು ಬರೀ ಭ್ರಮೆಯೆ? ಅಲ್ಲ ಎಂದ 'ಹಮಾರ ದೇಶ್ ಬಾಲಮೇಳ' 1990 ನೇ ಇಸವಿಯಲ್ಲಿ ದೇಶಾದ್ಯಂತ ಕಲಿಕೆಯನ್ನು ಚಟುವಟಿಕೆಯಾಧಾರಿತವಾಗಿ ಕಲಿಸುವ ನಿಟ್ಟಿನಲ್ಲಿ ರೂಪುಗೊಂಡಿತು. 1992ರಲ್ಲಿ ಸಂತಸ ಕಲಿಕೆಯ ಚಿಣ್ಣರ ಮೇಳ ಪಾಥಮಿಕ ಶಿಕ್ಷಣವನ್ನು ಸಂಪೂರ್ಣ ಚಟುವಟಿಕೆಯಾಧಾರಿತವಾಗಿ ಮಾರ್ಪಡಿಸಿತು. ಇದರತ್ತ ಒಂದು ಪುಟ್ಟ ಪ್ರಯತ್ನ ಮೊನ್ನೆ ಮೊನ್ನೆ (ಜನವರಿ 24–25) ಬಿಜಿವಿಎಸ್ ಹಾಸನದಲ್ಲಿ ಸಂಘಟಿಸಿದ ಮಕ್ಕಳ ಶೈಕ್ಷಣಿಕ ಹಬ್ಬ. ಈ ಬಗ್ಗೆ ಒಂದು ಸ್ಫೂರ್ತಿದಾಯಕ ವರದಿ.

'ನಾವು ಎಳೆಯರು ನಾವು ಗೆಳೆಯರು, ನಮ್ಮ ಕನಸದು ಸುಂದರ'

ಅಹಮದ್ ಹಗರೆ

'ಚಿನ್ನದ ಒಡವೆಗಳೇತಕೆ ಅಮ್ಮ ತೊಂದರೆ
ಕೊಡುವುವು ಬೇಡಮ್ಮ,
ಬಣ್ಣದ ಬಟ್ಟೆಗಳೇತಕೆ ಅಮ್ಮ ಮಣ್ಣಲ್ಲಾಡಲು
ಬಿಡವಮ್ಮ'

ಎಂಬ ಕುವೆಂಪು ಕವನ ಮಕ್ಕಳಿಗೆ ಕಲಿಕೆ ನಿಸರ್ಗದ ನಡುವೆಯೇ ಇರಬೇಕು, ನಾಲ್ಕು ಗೋಡೆಗಳ ನಡುವೆ ಅಲ್ಲ ಎನ್ನುತ್ತದೆ.

ನಾನು ಚಿಕ್ಕವನಿದ್ದಾಗ ಶಾಲೆಗೆ ಹೊಡೆದುಕೊಂಡು ಹೋಗಿ ನಮ್ಮಪ್ಪ ಶಾಲೆಗೆ ಬಿಟ್ಟು ಬರುತ್ತಿದ್ದರು. ಅಳುತ್ತಳುತ್ತಾ ನಾನು ಶಾಲೆಗೆ ಹೋಗುತ್ತಿದ್ದೆ. ಗಂಟೆ–ಯ ಮೇಲೆ ಕಬ್ಬಿಣದ ರಾಡಿನಿಂದ ಠಣ ಠಣ ಎಂದು ಬಾರಿಸಿ ಅದರ ಶಬ್ಧ ಆರುವ ಮುನ್ನವೇ ಚಂಗನೆ ನೆಗೆದು ಕ್ಷಣಾರ್ಧದಲ್ಲೇ ಮನೆ ಸೇರುತ್ತಿದ್ದೆ. ಆರು ಗಂಟೆ ಜೈಲಿನಲ್ಲಿ ಕಳೆದು ಬಿಡುಗಡೆಗೊಂಡ ಭಾವ.

ಏಕೆ ಹೀಗೆ ಮಕ್ಕಳು ಶಾಲೆಗೆ ಹೋಗುವಾಗ ಅಳುತ್ತಾ ಹೋಗುತ್ತಾರೆ? ಏಕೆ ಸಂಜೆ ನಗು ನಗುತ್ತಾ ಮನೆಕಡೆ ಓಡಿ ಬರುತ್ತಾರೆ? ಇದು ನನ್ನೂರಿನ ನನ್ನ ಶಾಲೆಯ ಪ್ರಶ್ನೆ ಮಾತ್ರವಲ್ಲ ಇಡೀ ದೇಶದ ಶಾಲೆಗಳ ಪರಿಸ್ಥಿತಿ.

ಬಾಲಮೇಳ 1990 ಮತ್ತು ನಲಿ–ಕಲಿ

ಡಾ.ಎಂ.ಪಿ.ಪರಮೇಶ್ವರನ್ ಕೇರಳದ ಪ್ರಸಿದ್ಧ ಅಣು ವಿಜ್ಞಾನಿ. ಇಂತಹದೇ ಘಟನೆಯನ್ನು ಕೇರಳದಲ್ಲೂ ನೋಡಿದ್ದರು. ಆಗ ಅವರಿಗೆ ಅನಿಸಿತು – ಕಣ್ಣೀರಿಲ್ಲದ ಕಲಿಕೆ ಬರಿ ಕನಸೆ? ಎಂದು ಹಾಗೆಯೇ ಭರವಸೆ ಇಲ್ಲದ ಬದುಕು ಬರೀ ಭ್ರಮೆಯೆ? ಎಂದು. ಈ ಪ್ರಕ್ರಿಯೆಯನ್ನು ಬದಲಿಸಬೇಕಲ್ಲ ಎಂದು ಚಿಂತಿಸಿದರು. ಕೆರಳದಲ್ಲಿ ಕೇರಳ ಶಾಸ್ತ್ರ ಸಾಹಿತ್ಯ ಪರಿಷತ್ತು ಕಟ್ಟಿದರು. ಹಾಗೆಯೇ ದೇಶಾದ್ಯಂತ ಭಾರತ ಜ್ಞಾನ ವಿಜ್ಞಾನ ಸಮಿತಿಯ ಹುಟ್ಟಿಗೆ ಕಾರಣರಾದರು. ಬಾಲ ಮೇಳ ಸಂಘಟಿಸಿ ಶಿಕ್ಷಕರನ್ನೆಲ್ಲಾ ಅಲ್ಲಿ ಸೇರಿಸಿ ಜೊತೆಗೆ ಮಕ್ಕಳನ್ನೂ ಕೂಡಿಸಿ ಶಾಲಾ ಪಠ್ಯಗಳನ್ನು ಚಟುವಟಿಕೆ ಮಾದರಿಯಲ್ಲಿ ಕಲಿಸುವುದು ಹೇಗೆಂದು ರಾಷ್ಟ್ರ ಮಟ್ಟದ ತರಬೇತಿ ನೀಡಿದರು. 'ಹಮಾರ ದೇಶ್ ಬಾಲಮೇಳ' 1990 ನೇ ಇಸವಿಯಲ್ಲಿ ದೇಶಾದ್ಯಂತ ಕಲಿಕೆಯನ್ನು ಚಟುವಟಿಕೆಯಾಧಾರಿತವಾಗಿ ಕಲಿಸುವ ನಿಟ್ಟಿನಲ್ಲಿ ರೂಪುಗೊಂಡಿತು. 1992ರಲ್ಲಿ ಸಂತಸ ಕಲಿಕೆಯ ಚಿಣ್ಣರ ಮೇಳ ಪಾಥಮಿಕ ಶಿಕ್ಷಣವನ್ನು ಸಂಪೂರ್ಣ ಚಟುವಟಿಕೆಯಾಧಾರಿತವಾಗಿ ಮಾರ್ಪಡಿಸಿತು. ದೇಶಾದ್ಯಂತ ಎಲ್ಲ ಜಿಲ್ಲೆ ತಾಲೋಕು ಮತ್ತು ಬಹುತೇಕ ಹೋಬಳಿ ಮಟ್ಟದಲ್ಲೂ ಮಕ್ಕಳು ಹಾಗೂ ಶಿಕ್ಷಕರನ್ನು ನಲಿ–ಕಲಿ, ಕಲಿ–ನಲಿ ಮಾದರಿಯಲ್ಲಿ ಅಣಿನೆರೆಸಿ ಬಿಟ್ಟಿತು. ಭಾರತದ ಸರ್ಕಾರವೂ ಕೂಡ ಇದರಿಂದ ಪ್ರೇರಿತಗೊಂಡು ಸರ್ವಶಿಕ್ಷ ಅಭಿಯಾನದ ಮೂಲಕ ನಲಿ–ಕಲಿ ಅಳವಡಿಸಕೊಂಡು ಚಟುವಟಿಕೆಯಾಧಾರಿತವಾಗಿ ಮಾರ್ಪಡಿಸಿಕೊಂಡಿತು. ಆದರೆ ಕಲಿಸುವ ಮನಸುಗಳು ಹೆಚ್ಚಿಲ್ಲದಿದ್ದರೆ ಎಂತಹ ಯೋಜನೆಗಳೂ ಫಲ ನೀಡಲಾರವು ಎನ್ನುವುದಕ್ಕೆ



ನಮ್ಮ ಸರ್ವಶಿಕ್ಷ ಅಭಿಯಾನ ಮಾದರಿಯಾಯಿತು. ಶಿಕ್ಷಕರಲ್ಲಿ ಕಲಿಸುವ ಬದ್ಧತೆ ಮೂಡದೆ ಆ ಶಿಕ್ಷಕರಿಗೆ ಶಿಕ್ಷಣದ ವ್ಯವಸ್ಥೆ ಪೂರಕತೆ ಕಲ್ಪಿಸಿಕೊಡದೆ ಕಲಿಕಾ ಸೌಂಧರ್ಯವನ್ನು ಪಸರಿಸಲು ಆಗದು. ಇದೊಂದು ವ್ಯವಸ್ಥಿತ ರಾಜಕೀಯ ಷಡ್ಯಂತ್ರ. ಹೊಣೆಗಾರಿಕೆಯಿಂದ ಜಾರಿಕೊಂಡ ನಮ್ಮ ಪ್ರಭುತ್ವ ಶಿಕ್ಷಣ ವ್ಯವಸ್ಥೆಯನ್ನು ಮಾರಾಟಕ್ಕಿಟ್ಟು ಬಿಟ್ಟಿತು. ಸರಕಾಗಿ ಪರಿವರ್ತಿತಗೊಂಡ ಶಿಕ್ಷಣ ಕಲಿಕಾನಂದವನ್ನು ಕಿತ್ತುಕೊಂಡು ಬಿಟ್ಟಿತು. ಖಾಸಗೀಕರಣದ ಬಿರುಗಾಳಿಗೆ ಶಿಕ್ಷಣ ಜೊತೆ–ಗೆ ಆರೋಗ್ಯವನ್ನೂ ಕೂಡ ಸಿಲುಕಿಸಿ ಬಿಟ್ಟಿತು. ಔಪಚಾರಿಕತೆಗಾಗಿ ಮಾತ್ರವೇ ಸರಕಾರ ಶಾಲೆಗಳನ್ನ ಉಳಿಸಿಕೊಂಡಿದೆ. ಅದು ನರಸತ್ತ ನಿರ್ಜಿವ ಶಿಕ್ಷಣವನ್ನಷ್ಟೆ ಗುಟುಕು ಗುಟುಕಾಗಿ ನೀಡುತ್ತಿದೆ. ನಾಳಿನ ಕನಸನ್ನು ಕಾಣುತ್ತಾ ನಮ್ಮ ಮಕ್ಕಳು ಸಂತಸ ಕಲಿಕೆಗಾಗಿ ಹಪಹಪಿಸುತ್ತಿದ್ದಾರೆ.

ಇದರತ್ತ ಒಂದು ಪುಟ್ಟ ಪ್ರಯತ್ನ ಮೊನ್ನೆ ಮೊನ್ನೆ (ಜನವರಿ 24–25) ಬಿಜಿವಿಎಸ್ ಹಾಸನದಲ್ಲಿ ಸಂಘಟಿಸಿದ ಮಕ್ಕಳ ಶೈಕ್ಷಣಿಕ ಹಬ್ಬ. ಸರಕಾರದ ಹಣಕಾಸಿನ ಹಂಗಿಲ್ಲದೆ, ಶಕ್ತಿ ರಾಜಕಾರಣದ ಕೃಪಾಕಟಾಕ್ಷವಿಲ್ಲದೆ, ಹಾಸನದ ಪ್ರಗತಿಪರರ ಚಿಂತಕರ, ಶಿಕ್ಷಣದ ಮೇಲೆ ಕಾಳಜಿ ಇರುವ ಜನರ ಹಾಗೂ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಪೋಷಕರ, ಹಾಗೂ ಕೆಲ ಖಾಸಗಿ ಶಾಲೆಗಳ ವ್ಯವಸ್ಥಾಪಕರ ಮತ್ತು ಜನಪರ ಶಿಕ್ಷಕರುಗಳ ನೆರವಿನಿಂದ ಹೊಸ ಭರವಸೆಯಾಗಿ ಮೂಡಿ ಬಂದಿತು.

ಹಾಸನದಲ್ಲಿ ಮಕ್ಕಳ ಶೈಕ್ಷಣಿಕ ಹಬ್ಬ

ಸುಮಾರು 250ಕ್ಕೂ ಹೆಚ್ಚು ರಾಜ್ಯದ ಮೂಲೆ ಮೂಲೆಗಳಿಂದ ಹಾಸನ ನಗರಕ್ಕೆ ಬಂದು ಸೇರಿದ ಬಹುತೇಕ ಸರ್ಕಾರಿ ಶಾಲಾ ಮಕ್ಕಳನ್ನು ಹಾಸನ ನಗರದ ಸಂಪೂರ್ಣ ಖಾಸಗಿ ಶಾಲೆಯ 220 ಮಕ್ಕಳು ತಮ್ಮ ಮನೆಯ ಅತಿಥಿಗಳನ್ನಾಗಿ ಮಾಡಿಕೊಂಡರು. ಆ ಮೂಲಕ ಸರಕಾರಿ–ಖಾಸಗಿ ಶಿಕ್ಷಣದ ಭೇಧವನ್ನು ತೊಡೆದು ಸಾರ್ವತ್ರೀಕರಣಗೊಳಿಸಲು ಮಕ್ಕಳು, ಪೋಷಕರೇ ಒಂದು ಭಾಷ್ಯ ಬರೆದರು. 'ನಾವು ಎಳೆಯರು ನಾವು ಗೆಳೆಯರು, ಹೃದಯ ಹೂವಿನ ಹಂದರ, ನಾವೆ ನಾಳೆ ನಾಡ ಹಿರಿಯರು, ನಮ್ಮ ಕನಸದು ಸುಂದರ' ಎಂದು ತೋರಿದರು 'ಹಿಂದು ಮುಸ್ಲಿಂ ಕ್ರೈಸ್ತರೆಲ್ಲರಿಗೊಂದೆ ಭಾರತ ಮಂದಿರ' ಎಂದೆನುತ ಜಾತಿ, ಧರ್ಮ, ವರ್ಗ, ಅಂತಸ್ತುಗಳನ್ನ ಮೀರಿ ಹಾಸನದ ಪೋಷಕರು ಹೊರಗಿನಿಂದ ಬಂದ ಮಕ್ಕಳಿಗೆ ತುಂಬು ಹೃದಯದ ಆತಿಥ್ಯ ನೀಡಿದರು. ಒಬ್ಬ ಪೋಷಕರು ಮನೆಯಲ್ಲೇ ಬಿಟ್ಟು ಬಂದ ಅತಿಥಿ ಹುಡುಗಿಯ ಬ್ಯಾಗನ್ನು ಹೊತ್ತು ತಂದು ಹುಡುಕಾಡಿ ಕೊಟ್ಟರು, ಇನ್ನೊಬ್ಬ ಪೋಷಕಿ ಅತಿಥಿ ಮಗುವಿಗೆ ಬಳೆ, ಚೈನು, ಕಿವಿಯೋಲೆ ಕೊಡಿಸಿದರು, ಮತ್ತೆ ಕೆಲವರು ಸಿಹಿ ಕೊಟ್ಟರು, ಇನ್ನೊಬ್ಬರಂತೂ ಅತಿಥಿ ಮಕ್ಕಳ ಪುಂಡಾಟಿಕೆಯನ್ನು ಸಂತಸದಿಂದ ಸಂಭ್ರಮಿಸಿದರು, ಅವರ ತಂದೆ–ತಾಯಂದಿರಿಗೆ ಫೊನಾಯಿಸಿದರು, ಇಷ್ಟು ದೊಡ್ಡ ಗುಂಪಿನಲ್ಲಿ ಒಂದು ಮಗು ಅಕಸ್ಮಾತ್ ಕಾಣೆಯಾದದಕ್ಕೆ ಪೋಷಕರೊಬ್ಬರೂ ಇಡೀ ಗುಂಪಿನಲ್ಲಿ ಓಡಾಡಿ ಹುಡುಕಿ ಅಬ್ಬಾ ಸಿಕ್ಕಿದ ಎಂದು ನಿಟ್ಟುಸಿರು ಬಿಟ್ಟಿದ್ದನ್ನ ನಾನು ಕಣ್ಣಾರೆ ನೋಡಿದೆ. ಅವರು ಮೂರು ದಿನವೂ ನಮ್ಮ ಹಬ್ಬದಲ್ಲಿ ತೊಡಗಿಸಿಕೊಂಡು ಬಿಟ್ಟರು. ತಾಯಂದಿರು ನಾವೇನಾದರೂ ಮಾಡಬೇಕಾ, ನಮಗೇನಾದರೂ ಕೆಲಸ ಇದೆಯಾ? ಮಕ್ಕಳು ಹೆಚ್ಚಿದ್ದಾರ? ನಮ್ಮನೆಗೆ ಇನ್ನಿಬ್ಬರನ್ನು ಕಳಿಸಿ, ಬೆಳಗ್ಗೆ ಎಷ್ಟೊತ್ತಿಗೆ ಕರೆದುಕೊಂಡು ಬರಬೇಕು? ಮಧ್ಯಾಹ್ನ ಬುತ್ತಿಕಳಿಸಬೇಕ? ಹೀಗೆಲ್ಲಾ ವಿಚಾರಿಸುತ್ತಿದ್ದ ನಮ್ಮ ಪೋಷಕರು ಈ ಹಬ್ಬ ತಮ್ಮದೆಂದೇ ಭಾವಿಸಿಬಿಟ್ಟಿದ್ದರು.

'ವಿಜ್ಞಾನ ಆಟಿಕೆ ನೀನೇ ಮಾಡು'

ಏಳು ಮತ್ತು ಎಂಟನೇ ತರಗತಿ ಪಠ್ಯಾಧಾರಿತ ಚಟುವಟಿಕೆಯನ್ನು 15 ಭಾಗಗಳಾಗಿ ಮಾಡಲಾಗಿತ್ತು. ಹದಿಹರೆಯದ ತುಮುಲಗಳಿಂದ ಹೊರಬರುವ ಬಗೆಯನ್ನು, ಹಾಸನದ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು ಮತ್ತು ಭಾರತೀಯ ಶಿಶುವೈದ್ಯರ ಸಂಘದ ಆಶ್ರಯದಲ್ಲಿ ಹಾಸನದ ಪ್ರಖ್ಯಾತ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ. ವಿಸಾವಿತ್ರಿ ಮತ್ತು ತಂಡದವರು ಪಿ.ಪಿ.ಟಿ, ವಿಡಿಯೋ ಷೋ, ಪೋಸ್ಟರ್ ಪ್ರದರ್ಶನ ಮತ್ತು ಸಂವಾದದ ಮೂಲಕ ಮನಮೋಹಕವಾಗಿ ನಡೆಸಿಕೊಟ್ಟರು. ಮಂಡ್ಯದಿಂದ ಮಂದಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪ್ರಶಾಂತ ಬಾಬು 'ವಿಜ್ಞಾನ ಆಟಿಕೆ ನೀನೇ ಮಾಡು' ಚಟುವಟಿಕೆಯನ್ನು, ಮೈಸೂರಿನ ವಿಜ್ಞಾನ ಶಿಕ್ಷಕರುಗಳಾದ ವಜ್ರಮುನಿ ಮತ್ತು ಶರ್ಮ ಹಾಗೂ ಆಲೂರಿನ ಶಿಕ್ಷಕಿ ರೋಶನ್‌ಬೇಗಂ ವಿಜ್ಞಾನದ ಸರಳ ಪ್ರಯೋಗಗಳನ್ನು ಮಾಡಿಸಿದರು, ಕೋಲಾರದಿಂದ ಬಂದಿದ್ದ ಶಿಕ್ಷಕ ಪ್ರವೀಣ್ ಕತ್ತಿದೋಣಿ, ಗಿಣಿ, ಕಪ್ಪೆ ಮಾಡುವುದನ್ನು ಕಲಿಸುತ್ತಾ ಅದರಲ್ಲಿ ರೇಖಾಗಣಿತದ ಪ್ರಮೆಯ, ಬಹುಭುಜಾಕೃತಿಗಳನ್ನ ಓರಿಗಾಮಿ ಮೂಲಕ ಗಣಿತ ಕಲಿಕೆಯಲ್ಲಿ ಹೇಳಿಕೊಟ್ಟರು, ಬೆಂಗಳೂರಿನ ಅರವಿಂದ ಟಾಯ್ಸ್ ಗುಂಪಿನ ಸಂಪನ್ಮೂಲ ವ್ಯಕ್ತಿ ಸುಚೇತಾ ನಿರುಪಯೋಗ ವಸ್ತುಗಳನ್ನು ಬಳಸಿ ವಿವಿಧ ವಿಜ್ಞಾನದ ಮಾದರಿಗಳನ್ನು ತಯಾರಿಸುವ 'ಕಸದಿಂದ ರಸ – ವಿಜ್ಞಾನದ ಮಾದರಿಗಳ ತಯಾರಿಕೆ' ಚಟುವಟಿಕೆ ನಡೆಸಿಕೊಟ್ಟರು.



ಹಾಸನದ ಶಿಕ್ಷಕಿಯರುಗಳಾದ ದಾಕ್ಷಾಯಣಿ, ಭಾಗೀರಥಿ, ಲಲಿತಮ್ಮ ಕಥೆ ಕಟುವ ಕಲೆ, ಮತ್ತದರ ರಂಗ ತರಂಗ ರೂಪವನ್ನು ಮೈಸೂರಿನ ನೀನಾಸಂ ಗೆಳೆಯರುಗಳಾದ ಸಂತೋಶ್ ತಂಡ ಅದ್ಭುತವಾಗಿ ನಡೆಸಿಕೊಟ್ಟಿತು. ಕೇರಳದಿಂದ ಬಂದಿದ್ದ ಸಂಪನ್ಮೂಲ ತಂಡ ರಸಾಯನ ಶಾಸ್ತ್ರದ ಚಟುವಟಿಕೆಗಳನ್ನು ರಸಾಯನಾ ಶಾಸ್ತ್ರದ ರಸಕಲಿಕೆ ಯಲ್ಲಿ ಸರಳವಾಗಿ ಹೇಳಿಕೊಟ್ಟರು, ಹಾಸನದ ವಿಜ್ಞಾನ ಕಾಲೇಜಿನ ಪ್ರೊ.ನಾರಾಯಣಪ್ಪ ರಕ್ತದ ಗುಂಪು ಪತ್ತೆ ಹಚ್ಚುವ, ಫೋರೆನಸಿಕ್ ಕಲೆ ಮುಂತಾದ ಜೀವಶಾಸ್ತ್ರೀಯ ಚಟುವಟಿಕೆಗಳನ್ನು ಹಾಗೂ ಶ್ರವಣಬೆಳಗೊಳದ ಶ್ರೀನಿವಾಸ ನಟೇಕರ್ ಮತ್ತು ಕೆ.ಆರ್.ಪೇಟೆ ಸುರೇಶ ಮಕ್ಕಳಲ್ಲಿ 'ಪವಾಡ ಮಾಡಿನೋಡು' ಚಟುವಟಿಕೆ ನಡೆಸಿದರು, ಹಾಸನದ ಕಲಾವಿದ ಶಿಕ್ಷಕ ದೊಡ್ಡಳ್ಳಿ ರಮೇಶ್, ರಂಗಕರ್ಮಿ ಜೈಶಂಕರ್ ಬೆಳಗುಂಬ ಹಾಗೂ ಸಾಲಗಾಮೆ ವಾಸು ವಿಜ್ಞಾನದ ಅಗತ್ಯ ವಿಷಯಗಳನ್ನು ಆಟ ಮತ್ತು ಹಾಡುಗಳ ಮೂಲಕ ಕಲಿಸಿಕೊಟ್ಟರು.

ಮೈಸೂರಿನ ಸುಪ್ರಸಿದ್ಧ ಕಲಾವಿದ ಹುಸೇನಿ ಮತ್ತು ಆಲೂರು ತಾಲೋಕಿನ ಶಿಕ್ಷಕಿ ಕೆ.ಸಿ.ಗೀತ, ಹಂಸ, ಮಂಜುಳ ಕೈಬೊಂಬೆ ತಯಾರಿಕೆ ಮತ್ತು ಕಾಗದ ವಿವಿದ ಕಲೆಗಳನ್ನು ಹೇಳಿಕೊಟ್ಟರು. ದಾವಣಗೆರೆಯಿಂದ ಆಗಮಿಸಿದ್ದ ಪ್ರಾಧ್ಯಾಪಕ ಪ್ರೊ. ಗಣೇಶ್ ಪ್ರಾಥಮಿಕ ಶಾಲಾಹಂತದಲ್ಲಿ ಬರುವ ವಿದ್ಯುತ್ ಮತ್ತು ಎಲಕ್ಟ್ರಾನಿಕ್ಸ್ ಚಟುವಟಿಕೆಗಳನ್ನು ಮನಮೋಹಕವಾಗಿ ತಿಳಿಸಿಕೊಟ್ಟರು. ಬೆಂಗಳೂರಿನ ಸಿ.ಪಿ.ಆರ್ ಪರಿಸರ ಶಿಕ್ಷಣ ಕೇಂದ್ರದ ಮಾಮರವಿ ವಿವಿಧ ಪರಿಸರ ಸಂಬಂಧಿ ಚಟುವಟಿಕೆಗಳನ್ನು 'ಪರಿಸರ ಪಯಣ' ಎನ್ನುವ ಹೆಸರಿನಲ್ಲಿ ಮಕ್ಕಳಿಗೆ ಹೇಳಿಕೊಟ್ಟರು, ಹಬ್ಬದ ಕಾರ್ಯಕ್ರಮ ನಿರ್ವಾಹಕಿ ಕವಿತ ಮತ್ತು ಹಾಸನದ ವಿಜ್ಞಾನ ಪದವಿ ಕಾಲೇಜಿನ ವಿಜ್ಞಾನ ಸ್ನಾತಕ್ಕೋತರ ಮತ್ತು ಪದವಿ ವಿದ್ಯಾರ್ಥಿಗಳ ಜೊತೆಗೂಡಿ ಸೂರ್ಯನ ಗಾತ್ರ, ಉದ್ದ, ಚಲನೆ, ಪೈ ಮೌಲ್ಯ ಹೇಳುವ ಮುಂತಾದ ಹಗಲಿನಲ್ಲಿ ಖಗೋಳದ ಕಲಿಕಾ ಚಟುವಟಿಕೆಗಳನ್ನು ನಡೆಸಿಕೊಟ್ಟರು. ನಾಡಿನ ಉದ್ದಗಲದಿಂದ ಬಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಇದರ ಸವಿಯನ್ನು ಉಂಡರು. ಹಾಸನದ ಎಂ.ಕೃಷ್ಣ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ವಿಜ್ಞಾನ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಆಲೂರು ತಾಲೋಕಿನ ಶಿಕ್ಷಕರು ಸಹ–ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಸಿ ಮಕ್ಕಳ ಚಟುವಟಿಕೆಗೆ ವೇಗ ತುಂಬಿದರು.

ವಿದ್ಯಾರ್ಥಿ–ವಿಜ್ಞಾನಿ ಸಂವಾದ

ಎರಡನೇ ದಿನ ಮಕ್ಕಳೆಲ್ಲರಿಗೂ ವಿಶೇಷ ದಿನ. ನಾಡಿನ ಹೆಸರಾಂತ ವಿಜ್ಞಾನಿಗಳ ಜೊತೆ ವಿದ್ಯಾರ್ಥಿಗಳು ಪೋಷಕರು ಮತ್ತು ಸಾರ್ವಜನಿಕರು ಸಂವಾದಿಸುವ ವಿದ್ಯಾರ್ಥಿ–ವಿಜ್ಞಾನಿ ಸಂವಾದ ಚಟುವಟಿಕೆಯಂತೂ ನಗರದ ಎಲ್ಲ ಜನವಿಭಾಗಗಳಲ್ಲೂ ಮೆಚ್ಚುಗೆ ಪಡೆಯಿತು. ಸುಮಾರು 150ಕ್ಕೂ ಅಧಿಕ ಮಕ್ಕಳ ಪ್ರಶ್ನೆಗಳಿಗೆ ಭಾರತೀಯ ವಿಜ್ಞಾನ ಸಂಸ್ಥೆಯ ಅಣು ಜೀವ ವಿಜ್ಞಾನಿಗಳಾದ ಪ್ರೊ.ಎಮ್.ಆರ್.ಎನ್ ಮೂರ್ತಿ, ಖಭೌತ ವಿಜ್ಞಾನಿಗಳಾದ ಪಾಲಹಳ್ಳಿ ವಿಶ್ವನಾಥ್, ಡಾ.ಸವ್ಯಸಾಚಿ ಚಟರ್ಜಿ ಹಾಗೂ ನಡೆದಾಡುವ ವಿಶ್ವಕೋಶವೆಂದೇ ಪ್ರಸಿದ್ಧಿ ಪಡೆದ ಪ್ರೊ.ಎಂ.ಆರ್.ನಾಗರಾಜು ರಸವತ್ತಾಗಿ ಉತ್ತರಿಸಿದರು. ಮಕ್ಕಳ ಹಬ್ಬದ ಉದ್ಘಾಟನೆ ಹೇಗಿರಬೇಕು ಎನ್ನುವ

ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**